ಕಲ್ಯಾಣ ಕಿರಣ

ಜುಲೈ - 2005 ಬೆಲೆ : ರೂ. 5-00



11 ನೆಯ ಲಿಂಗೈಕ್ಯ ಸಂಸ್ಮರಣೆಯ ನಿಮಿತ್ತ



ಗುರು ಚರಣಕೆ ನುಡಿ ನೈವೇದ್ಯ



ಎಲ್ಲಿ ಹೋದಿರಿ ನೀವು ಕಾಣದಾದಿರಿ
ಎಲ್ಲಿ ಹುಡುಕಲಿ ನಿಮ್ಮ ಹೇಗೆ ಹುಡುಕಲಿ ಗುರುವೆ ? ||ಪ||

ಭವದ ಕ್ರಿಮಿಯಂತಿದ್ದ ಎನ್ನ
ಸುವಿಚಾರದ ಜಲದಲ್ಲಿ ತೊಳೆದು
ಜ್ಞಾನ ವಸ್ತ್ರವ ತೊಡಿಸಿದಂತಹ
ಗುರು ಲಿಂಗಾನಂದರೆ ನೀವು ||1||

ಬೂದಿ ಮುಚ್ಚಿದ ಕೆಂಡದಂತೆ
ಬಸವ ತತ್ತ್ವವು ಇರುತಿರೆ
ಪ್ರವಚನದ ಗಾಳಿ ಹಾಕಿ
ಪ್ರಜ್ವಲಿಸಿದಂತಹ ಗುರು ನೀವು ||2||

ಅಜ್ಞಾನದ ಕತ್ತಲೆಯಲ್ಲಿದ್ದ
ಜಗವ ಎಚ್ಚರಿಸಿ ನೀವು
ಜ್ಞಾನ ಬೆಳಕ ನೀಡಿ ಬಾಳು
ಬೆಳಗಿಸಿದಂತಹ ಗುರು ನೀವು ||3||

ಎಂಥ ಘನ ನಿಲುವು ನಿಮ್ಮದು !
ಎಂಥಾ ಗಂಭೀರ ವಾಣಿ !!
ಪ್ರವಚನ ಪಿತಾಮಹ ಎಂಬ
ಹೆಸರು ಪಡೆದ ಗುರು ನೀವು ||4||

ಎಲ್ಲಿ ಹೋಯಿತು ನಿಮ್ಮ ಮಿಂಚಿನಂತಹ ನೋಟ
ಎತ್ತ ಹೋಯಿತು ನಿಮ್ಮ ಕಂಚಿನಂತಹ ಕಂಠ
ಬಯಲೊಳು ಬಯಲಾದ ನಿಜ
ಸದ್ಗುರು ಲಿಂಗಾನಂದರೆ ನೀವು ||5||

ಯಾರು ಸರಿಸಾಟಿಯು ನಿಮಗೆ
ಯಾರೂ ಕಾಣಲೊಲ್ಲರು ಎಮಗೆ
ಇರುವಿರಿ ಜ್ಞಾನ ರೂಪದಲ್ಲಿ ನಿಂದು
ಬಸವ ಭಕ್ತರ ಹೃದಯದಲ್ಲಿ ಎಂದೆಂದು ||6||

- ಶರಣೆ ವಿಜಯಾ ರಾಜು, ರಾ.ಬ.ದಳ, ಭದ್ರಾವತಿ

ಮಂಗಳಾಂಗ ಗುರು ಲಿಂಗಾನಂದರೆ ಮಾಯವಾದಿರೆಲ್ಲಿ?
ಓ ವಿಶ್ವಚೇತನವೆ ಲೀನವಾದಿರಾ ಲಿಂಗದೇವನಲ್ಲಿ !
ವಿಶ್ವಧರ್ಮದ ವಿಸ್ತಾರ ತಿಳಿಸಿ
ಮನವತೆಗೆ ಮಹತ್ವ ಕೊಡಿಸಿ
ಬಸವ ಧರ್ಮದ ಪ್ರಣತೆಯುರಿಗೆ
ತವ ತಪದ ತೈಲ ಸುರಿಸಿ
ಸತ್ಯ ಶರಣ ಸಂದೇಶಗಳನ್ನು ಈ ಜಗಕೆ ಬಿತ್ತಿ ಬೆಳಸಿ
ಉತ್ತುಂಗಕ್ಕೇರಿಸಿದೆ ಬಸವ ಧರ್ಮ ಕಳೆ ಕಿತ್ತು ಹಸನಗೊಳಿಸಿ

-ಮಹಾದೇವ ಗುಡೇರ

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-35 ಬಸವ ಶಕೆ-872 ಆಜೀವ ಸದಸ್ಯತ್ವ 500 ರೂ.
ಸಂಚಿಕೆ-3 ಜುಲೈ-2005 ವಾರ್ಷಿಕ ಚಂದಾ 50/- ರೂ.

ಅವತಾರ ಪುರುಷ ಬಸವಣ್ಣ



ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ
ಮಿಕ್ಕು ಅವರಿಗೆ ಲೆಕ್ಕಕ್ಕೆ ಕಡೆಯಿಲ್ಲದೆ ಮಾಡಿ,
ಹೊಕ್ಕು ಭಕ್ತಿಯಲ್ಲಿ, ಲೆಕ್ಕ ತಪ್ಪದೆ ಅವತಾರದಲ್ಲಿ ಬಂದು,
ಮರ್ತ್ಯಕ್ಕೆ ಬಸವೇಶ್ವರನೆಂಬ ಗಣನಾಥ ನಾಮಮಂ ಪಡೆದು,
ಭಕ್ತರಿಗೆ ಮುಖ್ಯವಾಗಿ ಭಕ್ತಿಯಂ ತೋರಿ,
ಸತ್ಯದ ಬಟ್ಟೆಯಂ ಕಾಣದ, ಚಿದ್ಘನಲಿಂಗವ ಹೊಗಲರಿಯದೆ,
ಬದ್ಧಕತನವನು ಸುಬದ್ಧವ ಮಾಡದೆ,
ಶುದ್ಧಶೈವ ಕಪ್ಪಡಿಯ ಸಂಗಮನಾಥನಲ್ಲಿ,
ಐಕ್ಯವಾದ ಚಿದ್ರೂಪ ಚಿತ್ಪ್ರಕಾಶಘನಲಿಂಗ,
ಕೈಯಲ್ಲಿದ್ದಂತೆ ಹೊದ್ದಿದನೇಕ ರುದ್ರಮೂರ್ತಿಯಲ್ಲಿ,
ರಜತಾದ್ರಿಯಲ್ಲಿರ್ದು ಸುಬದ್ಧವಾಗಿ ಪ್ರಳಯವಾಗಿತ್ತು ರುದ್ರಲೋಕವೆಲ್ಲಾ.
ರುದ್ರಗಣಂಗಳೆಲ್ಲರೂ ಮರ್ದನಂಗೆಯ್ದಲ್ಲಿ,
ಸುದ್ದಿಯ ಹೇಳುವರನಾರನೂ ಕಾಣೆ.
ಇನ್ನಿದ್ದವರಿಗೆ ಬುದ್ಧಿ ಇನ್ನಾವುದೊ ?
ಶುದ್ಧ ಶೈವವ ಹೊದ್ದದೆ, ಪೂರ್ವ ಶೈವವನಾಚರಿಸದೆ,
ಮಾರ್ಗ ಶೈವವ ಮನ್ನಣೆಯ ಮಾಡದೆ, ವೀರ ಶೈವವನಾರಾಧಿಸದೆ,
ಆದಿ ಶೈವವನನುಕರಿಸದೆ,
ಭೇದಿಸಬಾರದ ಲಿಂಗ ಕರದಲ್ಲಿದ್ದು,
ಕಂಗಳಿನಲ್ಲಿ ನಿಂದು, ಮನದಲ್ಲಿ ಸಿಂಹಾಸನಂಗೆಯ್ದು,
ಸಕಲೇಂದ್ರಿಯವ ಮರೆದು,
ಕಾಯಜೀವನ ಹೊಲಿಗೆಯ ಬಿನ್ನಾಣದಿಂ ಬಿಚ್ಚಿ
ಬೇರೊಂದರಸಲಿಲ್ಲವಾಗಿ ಬಯಕೆಯರತು,
ಭವಹಿಂಗೆ ತಾನೆನ್ನದೆ ಇದಿರೆನ್ನದೆ, ಏನೂ ಎನ್ನದ ಲಿಂಗೈಕ್ಯಂಗೆ
ಸ್ವಾನುಭಾವದಿಂದ ನಮೋ ನಮೋ ಎಂಬೆ ನಿಃಕಳಂಕ ಮಲ್ಲಿಕಾರ್ಜುನಾ.

- ಮೋಳಿಗೆಯ ಮಾರಯ್ಯ -2157
. ಸಂಕೀರ್ಣ ವಚನ ಸಂಪುಟ 3

ಗುರು ನಿಷ್ಠೆ ಲಿಂಗ ನಿಷ್ಠೆ ಜಂಗಮ ನಿಷ್ಠೆ
ಈ ತ್ರಿವಿಧ ನಿಷ್ಠೆಯಲ್ಲಿ ಏಕಾಂಗಲಿಂಗ ನಿಷ್ಠೆ
ವೀರ ಧೀರಂಗಲ್ಲದಾಗದು
ಇದು ಸಂಗನ ಬಸವಣ್ಣನಿಂದ ಬಂದ ಸಂತತಿಗಲ್ಲದಾಗದು
ಬ್ರಹ್ಮೇಶ್ವರ ಲಿಂಗವನರಿವುದಕ್ಕೆ
ತ್ರಿಗುಣ ಸಂದೇಹಿಗಳಿಗೆ ವಸ್ತು ಸಂಧಿಸದು ನೋಡಾ.

-ಬಾಹೂರ ಬೊಮ್ಮಣ್ಣ ಸಂ.ವ.ನಂ. 3/268

(ವ್ಯಾಖ್ಯಾನ 5 ನೆಯ ಪುಟದಲ್ಲಿ)

★ ಕಲ್ಯಾಣ ಕಿರಣ ★

ಸಂಪುಟ 35 ಬಸವ ಶಕೆ 872 ಆಜೀವ ಸದಸ್ಯತ್ವ 500ರೂ

ಸಂಚಿಕೆ 3 ಜುಲೈ 2005 ವಾರ್ಷಿಕ ಚಂದಾ 50/-ರೂ.

ಲೇಖನಗಳು ಕಿರಣ ಗನ್ನಡಿ ಲೇಖಕರು ಪುಟ

ಶರಣ ವಾಣಿ

ಹುಟ್ಟ ನೆಲೆಯ ತೃಷ್ಣೆ ಬಿಡದವರಿಗೆ ಲಿಂಗದ ಅನುಭಾವವೇಕೋ ?
ಮಾತಿನ ಮಾತಿನ ಮಹಂತರು ಹಿರಿಯರು
ಗೊಹೇಶ್ವರನೆಂಬ ಲಿಂಗಸಾರಾಯವು
ತೋರದು ತೋರದು ಬಹುಮುಖಿಗಳಿಗೆ

- ಅಲ್ಲಮ ಪ್ರಭು ವಚನ

KALYANA KIRANA-Reg No.19988/70. Monthy Magazine Euited by Pujya Mate Kasturidevi and Published by Pujya Allama Prabhu Swamiji, at Padmasri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ದೂರವಾಣಿ: 23325335/23322790

ನವ ಧರ್ಮ ದ್ರಷ್ಟಾರ ಬಸವಣ್ಣನವರು

ಕಾಶ್ಮೀರ ದೇಶದ ಸಪಾದ ಲಕ್ಷ ಪ್ರಾಂತ್ಯದಿಂದ ಅರಸೊತ್ತಿಗೆ ತೊರೆದು ಬಂದು ಕಟ್ಟಿಗೆ ಒಡೆಯುವ ಕಾಯಕ ಕೈಗೊಂಡ ಮಹಾದೇವ ಭೂಪಾಲ ಮೋಳಿಗೆ ಮಾರಯ್ಯನಾಗಿ ಕನ್ನಡವನ್ನು ಕಲಿತು ವಚನಗಳನ್ನು ಬರೆದುದೇ ಒಂದು ದೊಡ್ಡ ಸಾಧನೆ.

ಅಘಟಿತಘಟಿತವೆನಿಸುವ ಕೆಲವು ಪ್ರಸಂಗಗಳು ನಡೆಯುತ್ತವೆ. ಅದರಲ್ಲಿ ಒಂದು ಪವಾಡ ಸದೃಶ ಪ್ರಸಂಗವೆಂದರೆ ಧರ್ಮಪಿತ ಬಸವಣ್ಣನವರು ಲಕ್ಷದ ಮೇಲೆ ತೊಂಭತ್ತಾರು ಸಾವಿರಕ್ಕೂ ಮಿಕ್ಕಿ ಇದ್ದ ಜಂಗಮರಿಗೆ ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳುತ್ತಿದ್ದುದು. ಇದು ನಿಜಕ್ಕೂ ಬಗೆಹರಿಯಲಾರದ ಸಂದೇಹ. ಒಂದು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳಿಗೆ ಬಸವಣ್ಣ ವಾಸ್ತವ್ಯ ಮತ್ತು ಪ್ರಸಾದ ವ್ಯವಸ್ಥೆ ಮಾಡಲು ಸಾಧ್ಯವಿತ್ತೆ ? ಎಂಬ ಸಂದೇಹ ಬಗೆ ಹರಿಯುವುದು ಕಷ್ಟ ಸಾಧ್ಯ. ಬಹುಶಃ ಇದು ಸಾಂಕೇತಿಕ ಸಂಖ್ಯೆ ಇರಬಹುದೆ? ಬಸವಣ್ಣನವರು ಧರ್ಮ ವಿಸ್ತರಣೆಯ ಕಾರ್ಯವನ್ನು ಸುಮಾರು 36 ವರ್ಷಗಳ ಕಾಲ ವಿಕ್ರಮ ನಾಮ ಸಂವತ್ಸರದಿಂದ ರಾಕ್ಷಸ ನಾಮ ಸಂವತ್ಸರದ (1160-1196)ವರೆಗೆ ಮಾಡಿದರು. ಆ ಅವಧಿಯಲ್ಲಿ ಲಿಂಗಾಯತ ಧರ್ಮವನ್ನು ಸ್ವೀಕರಿಸಿದವರು 1 ಲಕ್ಷ 96000 ಇರಬಹುದೆ? ಇದು ನನಗೆ ಅತ್ಯಂತ ಸಮಂಜಸ ಎನಿಸುತ್ತದೆ. ಏಕೆಂದರೆ ಅನುಯಾಯಿಗಳು ಎಲ್ಲೇ ಇದ್ದರೂ "ಇದು-ಈ ಧರ್ಮವು ಬಸವಣ್ಣನ ಪ್ರಸಾದ" ಎಂದು ನೆನೆಯುವುದು ಸ್ವಾಭಾವಿಕ. ಹೀಗೆ ನಿತ್ಯವೂ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಜನರಿಗೆ ಬಸವಣ್ಣನವರು ಪ್ರಸಾದ ಮಾಡಿಸುತ್ತಿದ್ದರು ಎಂಬುದು ಅರ್ಥವಾಗುತ್ತದೆ.

ಚನ್ನಬಸವಣ್ಣನವರ ವಚನ ಮತ್ತು ಮೋಳಿಗೆ ಮಾರಯ್ಯನವರ ವಚನಗಳ ಪ್ರಕಾರ ಕಲ್ಯಾಣದಲ್ಲೇ ಇಷ್ಟು ಜನಕ್ಕೆ ಪ್ರಸಾದ ಮಾಡಿಸುವ ವ್ಯವಸ್ಥೆ ಇತ್ತು ; ಅಸಂಖ್ಯಾತ ದಾಸೋಹ ಮಠಗಳಿದ್ದವು ಎಂಬುದು ನಿಜಕ್ಕೂ ಆಶ್ಚರ್ಯಕರ ಸಂಗತಿ. ಸಾವಿರ ಮತ್ತು ಲಕ್ಷಗಳ ಲೆಕ್ಕಾಚಾರ ಆ ಕಾಲದಲ್ಲೇ ಬೇರೆ ಇದ್ದಿರಬಹುದೆ? ಎಂಬ ಪ್ರಶ್ನೆಯೂ ಏಳುವುದು. ಮೋಳಿಗೆ ಮಾರಯ್ಯನವರ ಪ್ರಕಾರ -

1. ಲಕ್ಷದ ಮೇಲೆ ತೊಂಭತ್ತಾರು ಸಾವಿರ ಜಂಗಮರಿಗೆ ದಾಸೋಹ ನಡೆಯುತ್ತಿತ್ತು.
2. ಅವರ ಮನಸ್ಸು ತೃಪ್ತಿಯಾಗುವಂತೆ, ಲೆಕ್ಕಕ್ಕೆ ಕಡೆಯಿಲ್ಲದಂತೆ ಮಾಡಲಾಗುತ್ತಿತ್ತು.
3. ಬಸವಣ್ಣನವರು ಅವತಾರದಲ್ಲಿ ಬಂದವರು. ಇದು ನಮಗೆ ಮಹತ್ವದ ಸಂಗತಿ
4. ಬಸವಣ್ಣನವರು ಲಿಂಗಾಯತ ಸಮಾಜಕ್ಕೆ <u>ಗಣನಾಥ</u> (ಗಣಪತಿ)
5. ಭಕ್ತಿ ಪಥವನ್ನು ತೋರಿದರು
6. ಮೊದಲು ಇದ್ದ ಮಾರ್ಗಗಳು ಸತ್ಯದ ಬಟ್ಟೆಯನ್ನು ತೋರದೆ ಇರುವವು ; ಚಿತ್ ಘನಲಿಂಗದ ಸ್ವರೂಪ ತಿಳಿಸದವು ; ಬದ್ಧಕತನವನ್ನು ಪರಿಹರಿಸಿ ಬಿಡುಗಡೆ ಮಾಡದವು.
7. ಕಪ್ಪಡಿಯು (ಕೂಡಲ ಸಂಗಮವು) ಶುದ್ಧ ಶೈವ ಸಂಪ್ರದಾಯದ್ದು ಆಗಿತ್ತು
8. ಮೋಳಿಗೆ ಮಾರಯ್ಯನವರ ಕನ್ನಡ ಅಷ್ಟೊಂದು ಶುದ್ಧವಾಗಿಲ್ಲ ಆದ್ದರಿಂದ 9ರಿಂದ 13ರ ವರೆಗಿನ ಸಾಲುಗಳ ಸಾರಾಂಶವನ್ನು ಹೀಗೆ ಬರೆಯಬಹುದು. ಕೈಯಲ್ಲಿ (ಗಣನಾಥ ಬಸವಣ್ಣನವರ ಕೃಪೆಯಿಂದ ಕೈಗೆ ಬಂದ ಕರಲಿಂಗವು) ಚಿದ್ರೂಪ ಚಿತ್ ಪ್ರಕಾಶ ಲಿಂಗದ ಕುರುಹು. ಮೊದಲಿನಿಂದ ಬಂದಿದ್ದ ರಜತಾದ್ರಿ-ಕೈಲಾಸ,ರುದ್ರಲೋಕ ಮುಂತಾದ ಕಲ್ಪನೆಗಳೆಲ್ಲ ಮರ್ದನಗೊಂಡವು (ಕೈಲಾಸ-ರಜತಾದ್ರಿ ಎಂಬ ಭೌಗೋಲಿಕ ಸ್ಥಳಗಳು ಹಿಮಾಲಯದಲ್ಲಿ ಇರುವ ಬಗ್ಗೆ ಶರಣರಲ್ಲಿ ನಂಬಿಕೆ ಇದೆ. ಆದರೆ ಸತ್ತ ನಂತರ ಕೈಲಾಸ-ರುದ್ರಲೋಕ ಎಂಬ ಲೋಕವು ಪ್ರಾಪ್ತಿಯಾಗುತ್ತದೆ ಎಂಬುದನ್ನು ವಚನ ವಾಙ್ಮಯವು ಒಪ್ಪುವುದಿಲ್ಲ)
9. ಬಸವಣ್ಣನವರು ಹಿಂದಿನಿಂದಲೂ ಸಾಗಿ ಬಂದಿದ್ದ ಶುದ್ಧ ಶೈವವನ್ನು ಅವಲಂಬಿಸಲಿಲ್ಲ, ಪೂರ್ವಶೈವವನ್ನು ಆಚರಿಸಲಿಲ್ಲ, ಮಾರ್ಗ ಶೈವವ ಮನ್ನಿಸಲಿಲ್ಲ, ವೀರಶೈವವ ಆರಾಧಿಸಲಿಲ್ಲ, ಆದಿ ಶೈವವನ್ನು ಅನುಕರಿಸಲಿಲ್ಲ.
10. ಅಗಮ್ಯನು , ಅಪ್ರಮಾಣನು, ಅಭೇದ್ಯನು ಆದ ಪರಮಾತ್ಮನು ಇಷ್ಟಲಿಂಗ ರೂಪದಲ್ಲಿ ಕರಕ್ಕೆ ಬಂದಿದ್ದಾನೆ, ಕಂಗಳಿನಲ್ಲಿ ದೃಷ್ಟಿಯೋಗಕ್ಕೆ ಅನುವಾಗುವಂತೆ ನಿಂತಿದ್ದಾನೆ, ಭಾವಲಿಂಗವಾಗಿ ಹೃದಯದಲ್ಲಿ

ಸಿಂಹಾಸನಂಗೊಂಡಿದ್ದಾನೆ.

11. ಇದರಿಂದಾಗಿ ಸದ್ಭಕ್ತನು ಅರ್ಥಾತ್ ಶರಣನು ಸಕಲೇಂದ್ರಿಯಂಗಳ ಮರೆತು ಕಾಯ ಮತ್ತು ಜೀವನ ಹೊಲಿಗೆಯಂ ಜಾಣತನದಿಂದ ಬಿಚ್ಚಿ, ಜೀವನ್ಮುಕ್ತ ಸ್ಥಿತಿಯನ್ನು ಹೊಂದುತ್ತಾನೆ.

12. ಸಾಧಕನಿಗೆ ಇನ್ನೇನನ್ನೂ ಹುಡುಕಬೇಕು ಎನ್ನಿಸದೆ ಬಯಕೆಗಳೆಲ್ಲ ಬತ್ತಿ ಹೋಗುತ್ತವೆ ಅರ್ಥಾತ್ ದೇವನಿಗೆ ಮುಖವಾಗುತ್ತವೆ; ಭವವು ಹಿಂಗಿ ಹೋಗುತ್ತದೆ. ತಾನು ಅಂದರೆ ಜೀವಾತ್ಮ, ಇದಿರು ಎಂದರೆ ಪರಮಾತ್ಮ ಎಂಬ ಭಿನ್ನತೆ ಅಳಿಯುತ್ತದೆ; ನಿರ್ಭಾವದ ಸ್ಥಿತಿಯನ್ನು ಪಡೆದು ಲಿಂಗೈಕ್ಯ ಎನಿಸಿಕೊಳ್ಳುತ್ತಾನೆ. ಇಂಥ ಸ್ಥಿತಿ ಪಡೆದ ಶರಣರನ್ನು ಮಾರಯ್ಯನವರು ವಂದಿಸುತ್ತಾರೆ.

ಇಂಥ ಸಿದ್ಧಿಯನ್ನು ಶರಣರು ಪಡೆಯಲು ಕಾರಣೀಭೂತರಾದವರು-ಗಣನಾಥರಾದ ಬಸವಣ್ಣನವರು.

★ ★ ★

ಶರಣ ಬಾಹೂರ ಬ್ರಹ್ಮಯ್ಯ ಹೇಳುತ್ತಾನೆ ; "ಗುರು-ಲಿಂಗ-ಜಂಗಮ ಎಂಬ ತ್ರಿತತ್ತ್ವ (Trinity)ಕೊಟ್ಟವರು ಬಸವಣ್ಣನವರು. ಅಂಗದ ಮೇಲೆ ಧರಿಸಿದ ಇಷ್ಟಲಿಂಗ ಕುರಿತು ಏಕಲಿಂಗ ನಿಷ್ಠೆ ಅಳವಡಿಸಿಕೊಳ್ಳಲು ಹೇಡಿಗಳಿಗೆ ಸಾಧ್ಯವಾಗದು. ಇನ್ನೂ ವಿಶೇಷವಾಗಿ ಹೇಳುತ್ತಾನೆ, "ಇದು ಸಂಗನ ಬಸವಣ್ಣನಿಂದ ಬಂದ ಸಂತತಿಗೆ ಮಾತ್ರ ಸಾಧ್ಯ. ಏಕದೇವನಿಷ್ಠೆ ಇರುವವರಿಗೆ ಮಾತ್ರ ಬ್ರಹ್ಮೇಶ್ವರ ಲಿಂಗದ ಅರಿವು ದೊರೆಯುತ್ತದೆ. ಅನೇಕ ರೀತಿಯ ಸಂದೇಹಗಳು ಇರುವ ಜನರಿಗೆ ವಸ್ತು ಅಂದರೆ ಪರಮಾತ್ಮ ತತ್ತ್ವವು ಸಂಧಿಸದು, ಲಭ್ಯವಾಗದು,"

ದೇವರ ಸ್ವರೂಪವನ್ನು ಅರಿಯದ ಜನರೇ ಮೂಢ ನಂಬಿಕೆಗಳಲ್ಲಿ ತೊಳಲಾಡುವುದು ಹೆಚ್ಚು. ಪಂಚಾಂಗ, ನಕ್ಷತ್ರ, ವಾಸ್ತು, ಜಾತಕ, ಮಹೂರ್ತ ಎಂಬ ಗೊಂದಲಗಳಲ್ಲಿ ಸಿಗುವುದು ಜಾಸ್ತಿ.

ವಚನ ಕಿರಣಗಳು

ಪ್ರತಿಭೆಯನ್ನರಿತು ಪ್ರೋತ್ಸಾಹಿಸುವ,
ಸಮಸ್ಯೆಗಳಿಗೆ ಪರಿಹಾರವನ್ನೀಯುವ,
ನೋವು-ನಲಿವುಗಳಿಗೆ ಸ್ಪಂದಿಸುವ,
ಕಷ್ಟ-ಸುಃಖಗಳ ಹಂಚಿಕೊಳ್ಳುವ,
ಪ್ರಗತಿಯ ಕಂಡು ಮೆಚ್ಚಿಕೊಳ್ಳುವ,
ಸಜ್ಜನ ಶರಣರೊಡನಾಡಿಯಾಗಿ ಎನ್ನನಿಲಿಸಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ

ಚಾಡಿಯ ಮಾತ ನಾಲಿಗೆಯಿಂದಾಡದೆ
ಚಾಡಿಯ ಮಾತ ಕಿವಿಯಿಂದಾಲಿಸದೆ
ಶರಣರ ನೋವೆ ಅದು ಲಿಂಗದ ನೋವೆಂದು
ಶರಣರ ನುಡಿಯಿಹುದಾಗಿ
ನೇರವಾದ ನಡೆ-ನುಡಿಗಳಿಂದ ಅನ್ಸರ
ಹೃದಯದಿಂಗಿತವನ್ನರಿತು
ಸಜ್ಜನ ಶರಣರೊಡನಾಡಿಯಾಗಿ ಎನ್ನನಿರಿಸಯ್ಯ
ಪರರ ನೋಯಿಸದೆ ನಲುಗಿಸದಂತಿರುವ
ಶರಣರ ಹೊರೆಯೊಳೆನ್ನನಿರಿಸಿ ಉದ್ಧರಿಸಯ್ಯಾ,
ಮಾತಾ ಪ್ರಿಯ ಸಚ್ಚಿದಾನಂದ

ದೂಷಕನವನೊಬ್ಬ ದೇಶವ ಕೊಟ್ಟಡೆ,
ಆಸೆಮಾಡಿ ಅವನ ಹೊರೆಯಲಿರಬೇಡವೆಂಬ
ಬಸವ ವಾಣಿಯಂತೆ
ಮುಖಸ್ತುತಿಯ ಮಾಡುತ್ತ ಮೃಷ್ಟಾನ್ನವನಿತ್ತು
ನಿಂದೆಗಳಿಂದ ಪರರ ನೋಯಿಸಲೆಳೆಸುವ
ದೂಷಣೆಗೆ ಪ್ರಚೋದಿಸುವ
ಆತ್ಮ ವಿಶ್ವಾಸವಿಲ್ಲದೆ ಅನ್ನ ಆಶ್ರಯಗಳಿಗೆ
ಹೊಣೆ ಹೊತ್ತು ಬದುಕುವ ಅಜ್ಞರ ಬಳಿಯಲ್ಲಿರುವುದಕ್ಕಿಂತ
ಕಾಡಸೊಪ್ಪು ತಂದು ಓಡಿನಲ್ಲಿ ಹುರಿದಿಟ್ಟುಕೊಂಡು
ಕೂಡಿಕೊಂಡಿಪ್ಪುದು ನಮ್ಮ ಲಿಂಗದೇವನ ಶರಣರ
ಎಂಬ ಧರ್ಮಪಿತರ ವಾಣಿಯಂತೆ
ತೊಪ್ಪಲ ರಸ ಕುಡಿದು ಓರೆ-ಕೋರೆಗಳ ತಿದ್ದುವ
ಆತ್ಮ ಸಾಕ್ಷಿಯಾಗಿ ಆದರ್ಶ ಪಥದಲ್ಲಿರುವ
ಸಮಾಜ ಧರ್ಮಗಳಿಗಾಗಿ ತನು-ಮನ-ಧನ ಸವೆಸುವ
ಶರಣರ ಬಳಿಯಲ್ಲಿರುವುದು ಲೇಸಯ್ಯ,
ಮಾತಾ ಪ್ರಿಯ ಸಚ್ಚಿದಾನಂದ.

-ಮಾತೆ ಅಕ್ಕಮಹಾದೇವಿ

ಸಂಪಾದಕೀಯ

ರೇಣುಕಾಚಾರ್ಯರಿಗೆ ಜೀವ ಕೊಡಲು ಪಂಚ ಪೀಠಾಧೀಶರಿಂದ ಬಸವ ಜಯಂತಿಯ ಆಚರಣೆ ?

-ಮಾತಾಜಿ

ಹಿಂದೊಮ್ಮೆ ಬೆಂಗಳೂರಿನಲ್ಲಿ ಒಂದು ಸಂಸ್ಥೆಯವರು ಬಸವ ಜಯಂತಿ ದಿವಸದಂದು ರೇಣುಕಾಚಾರ್ಯರ ಜಯಂತಿಯನ್ನು ಆಚರಿಸುವ ಸಲುವಾಗಿ ಕಾರ್ಯಕ್ರಮ ರೂಪಿಸಿದ್ದಾಗ ನಾನು ಆ ಸಂಘಟಕರಿಗೆ ದೂರವಾಣಿ ಕರೆ ಮಾಡಿ ರೇಣುಕಾಚಾರ್ಯರು ಕಾಲ್ಪನಿಕ ವ್ಯಕ್ತಿ, ಕಾಶೀನಾಥ ಶಾಸ್ತ್ರಿಗಳ ಕಲ್ಪನೆಯ ಕೂಸು ; ವಿಶ್ವಗುರು ಬಸವಣ್ಣನವರು ಐತಿಹಾಸಿಕ ವ್ಯಕ್ತಿ. ಇಬ್ಬರ ಜಯಂತಿಯನ್ನು ಒಟ್ಟಾಗಿ ಆಚರಿಸುವುದು ಹಾಸ್ಯಾಸ್ಪದ ಮತ್ತು ತತ್ತ್ವವಿರೋಧಿ ಕೆಲಸ ಎಂದು ಪ್ರತಿಭಟಿಸಿದೆ.

ಮತ್ತೊಮ್ಮೆ ಧಾರವಾಡದಲ್ಲಿ, ಎಲ್ಲರೂ ಕೂಡಿ ಬಸವ ಜಯಂತಿ ಆಚರಿಸೋಣ ಎಂದು ರಾಷ್ಟ್ರೀಯ ಬಸವ ದಳದವರನ್ನೂ ಮನವೊಲಿಸಿ ಒಟ್ಟಿಗೆ ಪಥ ಸಂಚಲನ ಮಾಡುವಾಗ ಬಸವಣ್ಣನವರ ಭಾವಚಿತ್ರದೊಡನೆ ಮೆರವಣಿಗೆ ಪ್ರಾರಂಭವಾಯಿತಾದರೂ, ಮಾರ್ಗ ಮಧ್ಯದಲ್ಲಿ ಏಕೋರಾಮರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಕೂರಿಸಿ, ಪುಸಕ್ಕನೆ ಮೆರವಣಿಗೆಯಲ್ಲಿ ಸಂಘಟಕರು ತಂದು ಸೇರಿಸಿದರಂತೆ. ಪೌರಾಣಿಕ ಕಲ್ಪನೆಗೆ ಐತಿಹಾಸಿಕತೆಯ ಮುದ್ರೆಯೊತ್ತಲು ಪಂಚಾಚಾರ್ಯವಾದಿಗಳು ಇಂಥಾ ಹಲವಾರು ಕಪಟ ತಂತ್ರಗಳನ್ನು ಅನುಸರಿಸುತ್ತಿದ್ದಾರೆ.

"ಜಯಂತಿ " ಆಚರಿಸುವುದು ಮಾನವ ತಾಯಿತಂದೆಯರಲ್ಲಿ ಜನ್ಮ ತಾಳಿ ಮಹಾತ್ಮರಾದವರ ಹೆಸರಲ್ಲಿ ಮಾತ್ರ. ಜ ಎಂಬ ಅಕ್ಷರವೇ ಜನ್ಮಧಾರಣೆಯ ಸೂಚಕ. ಜೀವಂತ ಇರುವವರ ಹುಟ್ಟು ಹಬ್ಬವನ್ನು ವರ್ಧಂತಿಯನ್ನಾಗಿ, ಅವರು ತೀರಿಕೊಂಡ ನಂತರ ವ್ಯಕ್ತಿಗಳ ಹುಟ್ಟುಹಬ್ಬವನ್ನು ಜಯಂತಿಯನ್ನಾಗಿಯೂ ಆಚರಿಸಲಾಗುವುದು. ಪಂಚಪೀಠಾಧೀಶರ ಪ್ರಕಾರ ಇವರ ಆದಿ (ಕಾಲ್ಪನಿಕ) ಆಚಾರ್ಯರು ಮಾನವರಂತೆ ತಾಯಿತಂದೆಯರ ಸಂಯೋಗದಿಂದ ಹುಟ್ಟಿದವರಲ್ಲ ; ಪರಶಿವನ ಪಂಚಮುಖ (?)ಗಳಿಂದ ಹುಟ್ಟಿದವರು. ಅಥವಾ ಸ್ಥಾವರಲಿಂಗಗಳಲ್ಲಿ ಉದ್ಭವವಾದವರು. ಅಂದಾಗ ರೇಣುಕಾಚಾರ್ಯರ ಜಯಂತಿಯನ್ನು ಪಂಚಪೀಠಾಧೀಶರ ದೃಷ್ಟಿಯಲ್ಲಿ ಸಾಮಾನ್ಯ ರಾಜಕಾರಣಿಯಾದ (?) ಬಸವಣ್ಣನವರ ಜಯಂತಿ ಜೊತೆ ಹೇಗೆ ಆಚರಿಸಲು ಬರುತ್ತದೆ? ಬಂಜೆಯ ಮಕ್ಕಳಾದ ಆದಿ ಪಂಚಾಚಾರ್ಯರಿಗೆ ಜೀವ ಕೊಡಲು ಬಸವ ಜಯಂತಿಯ ಆಸರೆ ಪಡೆಯುವುದು ವಿರೋಧಾಭಾಸವಲ್ಲವೆ? ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ ಬಸವಣ್ಣನವರು ಜನಿಸಿದರು. ಅಂದೇ ರೇಣುಕಾಚಾರ್ಯರೂ ಜನಿಸಿದರೆ ? ಹಾಗೆಂದು ಎಲ್ಲಿಯೂ ದಾಖಲೆಯೇ ಇಲ್ಲವಲ್ಲ. ಒಂದು ವೇಳೆ ವೈಶಾಖ ಮಾಸದ ಅಕ್ಷಯ ತೃತೀಯ ರೋಹಿಣಿ ನಕ್ಷತ್ರದಲ್ಲಿ ರೇಣುಕಾಚಾರ್ಯರು ಜನಿಸಿದ್ದರೆ ಅಥವಾ ಲಿಂಗೋದ್ಭವಿಗಳಾಗಿದ್ದರೆ ಹಿಂದಿನಿಂದ ಏಕೆ ಆಚರಿಸುತ್ತಿರಲಿಲ್ಲ? ಐತಿಹಾಸಿಕ ಯುಗಪುರುಷ ಬಸವಣ್ಣನವರ ಜಯಂತಿಯಂದೇ ರೇಣುಕಾಚಾರ್ಯ ಜಯಂತಿ ಮಾಡುವ ಪಂಚಾಚಾರ್ಯವಾದಿಗಳ ಪ್ರಯತ್ನದ ಹಿಂದೆ ಒಂದು ಧೂರ್ತ ತಂತ್ರವಿದೆ ಎನ್ನಿಸುವುದಿಲ್ಲವೆ ?

1. ಐತಿಹಾಸಿಕ ದಾಖಲೆ ಇಲ್ಲದ ಪೌರಾಣಿಕ/ ಕಾಲ್ಪನಿಕ ರೇಣುಕಾಚಾರ್ಯರಿಗೆ ಅಧಿಕೃತ ಅಸ್ತಿತ್ವ ತಂದುಕೊಡುವ ಹುನ್ನಾರ.

2. ಮೂರ್ಖರು ಮಂದಮತಿಗಳೂ ಆಗಿರುವ ಕೆಲವು ಲಿಂಗಾಯತರಿಗೆ ಮಂಕುಬೂದಿ ಎರಚಲಿಕ್ಕೆ. "ನಾವೇನೂ ಬಸವ ದ್ವೇಷಿಗಳಲ್ಲ, ನಾವೂ ಸಹ ವಿಶಾಲ ಮನೋಭಾವದಿಂದ ಬಸವ ಜಯಂತಿ ಆಚರಿಸುತ್ತೇವೆ." ಎಂದು ತೋರಿಸಲು. ಇಂಥ ಮಂಕು ಜನರು "ಅಹುದು ಪಂಚಪೀಠದವರೇನು ಬಸವ ದ್ವೇಷಿಗಳಲ್ಲ, ಅವರೂ ಬಸವ ಜಯಂತಿ ಆಚರಿಸುತ್ತಾರೆ. ವಚನಗಳನ್ನು ಉಲ್ಲೇಖಿಸುತ್ತಾರೆ." ಎಂದು ಹೇಳುವುದುಂಟು.

3.ಈವರೆಗೂ ಬಸವ ನಿಷ್ಠರಾಗಿದ್ದ ಕೆಲವು ಗಣ್ಯರನ್ನು ಶ್ರೀಮಂತರನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲಿಕ್ಕೆ ಈ ತಂತ್ರ.

ಇದೇ 2005ನೆಯ ಇಸವಿಯ ಜೂನ್ 8 ರಂದು ಗುಲಬರ್ಗಾದಲ್ಲಿ ರಂಭಾಪುರಿ ಶ್ರೀಗಳ ಸಾನ್ನಿಧ್ಯದಲ್ಲಿ ಇಂಥ ಒಂದು ಬಸವ ಜಯಂತಿ ನಡೆಯಿತು. ಇತಿಹಾಸ ಗೊತ್ತಿಲ್ಲ, ವಚನ ಸಾಹಿತ್ಯದ ಅಧ್ಯಯನವಿಲ್ಲದ ಕೆಲವು ಶ್ರೀಮಂತ ವ್ಯಾಪರಸ್ಥರು, ರಾಜಕಾರಣಿಗಳು ವೇದಿಕೆಯಲ್ಲಿದ್ದರು. ಆದರೆ ಎಲ್ಲರಿಗೂ ಬೇಸರ ತರಿಸಿದ ಮತ್ತು ಆಘಾತ ತಂದ ಸಂಗತಿ ಎಂದರೆ ಬಸವ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ವಿಲಾಸವತಿ ಖೂಬಾ ಅವರು ಉದ್ಘಾಟಕರಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದುದು. ಮೊದಲಿನಿಂದಲೂ ಇವರು ಬಸವ ಸಂಸ್ಕೃತಿಯವರು ; ಗುಲಬರ್ಗಾದಲ್ಲಿ ಬಸವ ಸಮಿತಿಯ ಅಧ್ಯಕ್ಷರಾಗಿ ಆಗಾಗ ಶರಣ ಸಾಹಿತ್ಯ ಕುರಿತು ಉಪನ್ಯಾಸಗಳನ್ನು ಏರ್ಪಡಿಸುತ್ತಲೇ ಇರುತ್ತಾರೆ. ಲಿ|| ಶ್ರೀ ಬಿ.ಡಿ.ಜತ್ತಿಯವರ ಬಂಧುವರ್ಗದವರು. ಇವರು ಯಾರದೋ ಒತ್ತಾಯಕ್ಕೆ, ಒತ್ತಡಕ್ಕೆ ಮಣಿದು ಕಾರ್ಯಕ್ರಮಕ್ಕೆ ಹೋಗಿರಬಹುದು. ರಾಜಕಾರಣಿಗಳು ಊಸರವಳ್ಳಿಗಳು ; ಸಮಯಕ್ಕೆ ತಕ್ಕಂತೆ ಬಣ್ಣ ಬದಲಿಸುವವರು. ಅವರಿಗೆ ಯಾವ ತತ್ತ್ವ ಸಿದ್ಧಾಂತಗಳೂ ಇರುವುದಿಲ್ಲ. ವಿಲಾಸವತಿ ಖೂಬಾ ಅವರು ಒತ್ತಡಕ್ಕೆ ಬಲಿಯಾಗಿ ಇಷ್ಟು ದಶಕಗಳ ಕಾಲ ಕಾಯ್ದುಕೊಂಡು ಬಂದ ಬಸವ ತತ್ತ್ವ ನಿಷ್ಠೆಯನ್ನು ಏಕೆ ಬಲಿಕೊಡಬೇಕಾಗಿತ್ತು ?" ನಾನು ಮಾಡಿದ ಮೊದಲ ಅಪರಾಧ ಆ ವೇದಿಕೆಗೆ ಹೋಗಿದ್ದು. ಇದೇ ಕಡೆಯದು ಸಹ." ಎಂದು ತಪ್ಪನ್ನು ಒಪ್ಪಿಕೊಂಡರೆಂದು, " ನನಗಷ್ಟೇ ಅಪಮಾನವನ್ನು ರಂಭಾಪುರಿ ಶ್ರೀಗಳು ಮಾಡಿದ್ದರೆ ಅಷ್ಟು ದುಃಖವೆನಿಸುತ್ತಿರಲಿಲ್ಲ. ಬಸವಣ್ಣನವರಿಗೆ ಸಂಬಂಧಿಸಿ ಅವಮಾನಕರ ಮಾತುಗಳನ್ನು ಆಡಿದರು." ಎಂದು ಮತ್ತೊಬ್ಬ ಬಸವಾಭಿಮಾನಿಗಳ ಮುಂದೆ ತಮ್ಮ ದುಃಖವನ್ನು ತೋಡಿಕೊಂಡರು ಎಂಬ ಸುದ್ದಿಯು ಬಂದಿತು. ತಿಳಿಯಿತು. ಆದರೆ ಅಲ್ಲಿಗೆ ಹೋದುದು ನಿಜಕ್ಕೂ ಅಕ್ಷಮ್ಯ ಅಪರಾಧ. ಪಂಚಪೀಠಾಧೀಶರು ಎಂಥದೇ ಪ್ರಸಂಗದಲ್ಲೂ ಬಸವಣ್ಣನವರನ್ನು, ಶರಣರನ್ನು ಗೌರವಿಸುವುದಿಲ್ಲ ಎಂಬುದು ಎಲ್ಲರಿಗೂ ಮನವರಿಕೆಯಾಗಿರುವ ಸಂಗತಿ. ಹೀಗಿರುವಾಗ ಗುಲಬರ್ಗಾದಲ್ಲಿ ನಡೆದ ರೇಣುಕಾಚಾರ್ಯ ಜಯಂತಿಗೆ ಬಸವಾನುಯಾಯಿ ಗಣ್ಯರು ಹೋದುದು ಅಪರಾಧ. ಇನ್ನು ಮುಂದಾದರೂ ಇಂಥ ತಪ್ಪನ್ನು ಮಾಡದ ವಿವೇಕ ಬುದ್ಧಿ ಈ ಗಣ್ಯರಿಗೆ ಬರಲೆಂದು ಹಾರೈಸುತ್ತೇವೆ.

2. ಲಿಂಗಾಯತ ಮಠಾಧೀಶರು ಮತ್ತು ಬಹುದೇವತೋಪಾಸನೆ

★ ಪ್ರಜಾವಾಣಿ ಪತ್ರಿಕೆ (24-6-2005)ಯ ಮುಖಪುಟದ ಮೂಲೆಯಲ್ಲಿ ಒಂದು ಜಾಹಿರಾತು ಬಂದಿತ್ತು. ಶ್ರೀ ಅಂಬಾಭವಾನಿ ದೇವಾಲಯದ ಕುಂಭಾಭಿಷೇಕ, ಹೋಮ ಇತ್ಯಾದಿ ಕಾರ್ಯಕ್ರಮ. ಏಳು ಜನ ಗುರುಗಳನ್ನು ಸಮಿತಿಯವರು ಆಹ್ವಾನಿಸಿದ್ದಾರೆ. ಮೊದಲ ಫೋಟೋ ಪೂಜ್ಯ ಸಿದ್ಧಗಂಗಾ ಶ್ರೀಗಳದು ಕಡೆಯ ಫೋಟೋ ಬೇಲಿ ಮಠದ ಶ್ರೀಗಳದು, ಮಧ್ಯೆ 5 ಜನ ಹಿಂದು ಸ್ವಾಮಿಗಳು. ಚಂಡಿ ಹೋಮ, ಸುದರ್ಶನ ಹೋಮ ಮುಂತಾದುವೆಲ್ಲ ಇವೆ. ಇಷ್ಟಲಿಂಗಧಾರಿಗಳಾಗಿ ಏಕದೇವೋಪಾಸಕರಾಗಿರಬೇಕಾದ ನಮ್ಮ ಗುರುಗಳೇ ಇಂಥ ಕಾರ್ಯಕ್ರಮಗಳಲ್ಲಿ ಭಾಗಿಯಾದರೆ ಅನುಯಾಯಿಗಳಿಗೆ ತಪ್ಪು ಮಾರ್ಗದರ್ಶನವಾಗುವುದಲ್ಲದೆ, ಬಸವ ತತ್ತ್ವಕ್ಕೆ ಚ್ಯುತಿ ಬರದೆ? ಎಂದು ಕೆಲವರು ಪ್ರಶ್ನೆಯನ್ನು ಕೇಳಿದ್ದಾರೆ.

ದಿ.25-6-2005 ರ ಪ್ರಜಾವಾಣಿಯ 3ನೆಯ ಪುಟದಲ್ಲಿ ಕಾರ್ಯಕ್ರಮದಲ್ಲಿ ಭಾಗಿಗಳಾದ ಮಠಾಧೀಶರ ಭಾವಚಿತ್ರ ಪ್ರಕಟಗೊಂಡಿದೆ . ಅದರಲ್ಲಿ ಪೂಜ್ಯ ಸಿದ್ಧಗಂಗಾ ಶ್ರೀಗಳು, ಪೂಜ್ಯ ಬೇಲಿ ಮಠದ ಶ್ರೀಗಳು ಇಲ್ಲ. ಪೂಜ್ಯ ಬಾಲಗಂಗಾಧರನಾಥ ಸ್ವಾಮಿಗಳು, ಪೂಜ್ಯ ಸುರೇಶ್ವರಾನಂದ ಶ್ರೀಗಳು, ಶ್ರೀ ರವಿಶಂಕರ್ ಮತ್ತು ಕೆಲವು ಗಣ್ಯರು ಇದ್ದಾರೆ. ಲಿಂಗಾಯತ ಸ್ವಾಮಿಗಳು ತಾತ್ತ್ವಿಕ ಕಾರಣಕ್ಕಾಗಿ ಬಂದಿಲ್ಲವೋ, ರಾಜಕೀಯ ಕಾರಣಕ್ಕೆ ಬಂದಿಲ್ಲವೋ ಅಥವಾ ಬಂದು ಭಾಗಿಯಾಗಿದ್ದರೂ ಫೋಟೋದಲ್ಲಿ ಬಂದಿಲ್ಲವೋ ತಿಳಿಯದು.

ಬೇಲಿಮಠದ ಶ್ರೀಗಳು "ಬಸವ ಪಥ" ಎಂಬ ಬಸವ ಸಮಿತಿಯ ಮಾಸ ಪತ್ರಿಕೆಗೆ ಸಂಪಾದಕ ಮಂಡಳಿ ಅಧ್ಯಕ್ಷರಾಗಿ ಸಂಪಾದಕೀಯ ಲೇಖನಗಳನ್ನು ಚೆಂದಾಗಿ ಬರೆದರೆ ಸಾಲದು ಇವರ ಮೇಲೆ ಒಂದು

ಹೊಣೆಗಾರಿಕೆಯೂ ಇದೆ. ಡಾ|| ಚಿದಾನಂದ ಮೂರ್ತಿ, ಶಿವಪ್ರಕಾಶ್ ಮುಂತಾದ ಸಾಹಿತಿಗಳಾದರೆ ಅವರು ಬರೆದುದಕ್ಕೂ ಮತ್ತು ಆಚರಣೆಗೂ ಅಜಗಜಾಂತರ ವ್ಯತ್ಯಾಸವಿದ್ದರೂ ಯಾರೂ ತಲೆ ಕೆಡಿಸಿಕೊಳ್ಳಲು ಹೋಗುವುದಿಲ್ಲ. ಸಾಹಿತಿಗಳ ವ್ಯಾಪ್ತಿ ಅಷ್ಟೇ. ಆದರೆ ಸಿದ್ಧಗಂಗಾ ಶ್ರೀಗಳಾಗಲಿ, ಬೇಲಿ ಮಠದ ಶ್ರೀಗಳಾಗಲಿ ಒಂದು ಧರ್ಮದ ನೇತಾರರು, ಸಮಾಜದ ಧಾರ್ಮಿಕ ಮುಂದಾಳುಗಳು ಆಗಿರುವಾಗ ಜನರು ಅವರ ಪ್ರತಿ ಆಚರಣೆಯನ್ನು ಗಮನಿಸುವರು. ಲಕ್ಷ್ಮಣನು ಸೀತೆಗೆ ಒಂದು ರೇಖೆ ಹಾಕಿ ಇದನ್ನು ದಾಟ ಬೇಡ ಎಂದು ಹೇಳಿ ಹೋದಂತೆ, ಧರ್ಮಗುರು ಬಸವಣ್ಣನವರು ಇಷ್ಟಲಿಂಗವನ್ನು ಕಟ್ಟಿ, "ಇದು ನಿನ್ನ (ಲಿಂಗದೇವ) ಪತಿಯ ಕುರುಹು ಈ ಲಿಂಗಪತಿ ನಿಷ್ಠೆ ಬೆಳೆಸಿಕೋ" ಎಂದು ಧರ್ಮರೇಖೆಯನ್ನು ಹಾಕಿದ್ದಾರೆ. ಏಕದೇವೋಪಾಸನೆ ಈ ಧರ್ಮದ ಮುಖ್ಯ ತತ್ತ್ವ. ಬಹಳ ಹಿಗ್ಗಿಸಬಹುದು ಎಂದರೆ ಉಪಾಸನೆಯು ಗುರು-ಲಿಂಗ-ಜಂಗಮಕ್ಕೆ ಮೀಸಲಾಗಿರಬೇಕು. ಗಣಪತಿ, ಲಕ್ಷ್ಮಿ, ದೇವಿ, ನವ ಗ್ರಹ ಇತ್ಯಾದಿ ಪೌರಾಣಿಕ ದೇವತೆಗಳನ್ನು ಪೂಜಿಸುವುದು ಲಿಂಗಾಯತ ಧರ್ಮೀಯ ಮಠಾಧೀಶರಿಗೆ ನಿಷಿದ್ಧ.

ಹಿಂದು ಸಮಾಜದ ಪರಿಸರದಲ್ಲಿ ಬದುಕುವಾಗ ನಾವು ಕೆಲವೊಂದು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹಿಂದು ದೇವತೆಗಳನ್ನು ಪೂಜಿಸಲು, ಅವುಗಳ ಗುಡಿಗಳನ್ನು ಉದ್ಘಾಟಿಸಲು, ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಗಣ್ಯರು, ರಾಜಕಾರಣಿಗಳು ಆಹ್ವಾನಿಸುತ್ತಾರೆ. ಬರುವುದಿಲ್ಲ ಎಂದರೆ 'ಮತಾಂಧರು' ಎಂದುಕೊಳ್ಳುತ್ತಾರೆ. ಅವರಿಗೆ ದೇವರ ಸ್ವರೂಪ, ಏಕದೇವೋಪಾಸನೆಯ ಮಹತ್ವ ವಿವರಿಸಿದರೆ ತತ್ತ್ವ ತಿಳಿಯದಷ್ಟು ಅಜ್ಞಾನಿಗಳಾಗಿರುತ್ತಾರೆ [ನಮ್ಮ ಬಹುಪಾಲು ಮಠಾಧೀಶರಿಗೆ (ಲಿಂಗಾಯತ ಧರ್ಮದ) ದೇವರ ಸ್ವರೂಪವೇ ತಿಳಿದಿರುವುದಿಲ್ಲ] ಆದರೆ ಅಂಥವರನ್ನು ತೃಪ್ತಿಪಡಿಸಲು ಮಠಾಧೀಶರು ತತ್ತ್ವನಿಷ್ಠೆಯನ್ನು ಬಲಿಗೊಡಬೇಕಾಗಿಲ್ಲ. ಯಾವ ಮುಸಲೀಮ್, ಕ್ರೈಸ್ತ ಧರ್ಮಾಧಿಕಾರಿಗಳನ್ನು ನೀವೇಕೆ ಹಿಂದು ದೇವತೆಗಳನ್ನು ಪೂಜಿಸುವುದಿಲ್ಲ ಎಂದು ಯಾರೂ ಕೇಳರು. ಏಕೆಂದರೆ, ಅವರು ಏಕದೇವೋಪಾಸಕರೆಂದು ಇವರೇ ತಿಳಿದಿರುತ್ತಾರೆ. ಸರ್ವ ಧರ್ಮಗಳ ಗೋಷ್ಠಿಗೆ ಆಹ್ವಾನಿಸಿದರೆ ಹೋಗಲು ಅಡ್ಡಿಯಿಲ್ಲ. ಅಲ್ಲಿ ಎಲ್ಲ ಧರ್ಮೀಯರಿಗೂ ತಮ್ಮ ತಮ್ಮ ಧರ್ಮದ ಬಗ್ಗೆ ಹೇಳಲು ಅವಕಾಶವಿರುತ್ತದೆ ; ಜೊತೆಗೆ ಎಲ್ಲ ಧರ್ಮಗಳವರೂ ಹೇಗೆ ಕೂಡಿ ಬಾಳಬಹುದು, ಬಾಳಬೇಕು ಎಂದು ಹೇಳಲು ವೇದಿಕೆ ಸಿಗುತ್ತದೆ. ಯಾವ ವ್ಯಕ್ತಿಯೂ ತನ್ನ ಧರ್ಮದ ತತ್ತ್ವಕ್ಕೆ ಚ್ಯುತಿ ತಂದುಕೊಂಡು ಇನ್ನೊಬ್ಬರನ್ನು ಮೆಚ್ಚಿಸಬೇಕಾಗಿಲ್ಲ.

ಜೈನ ಸಮಾಜದವರು ಒಂದು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು. ಬೇಲಿ ಮಠದ ಶ್ರೀಗಳು ತಮ್ಮ ಭಾಷಣದಲ್ಲಿ ಒಂದು ಕಥೆ ಹೇಳಿದರು. ಒಬ್ಬ ವ್ಯಕ್ತಿ ಇದ್ದ. ಅವನು ಅತ್ಯಂತ ನೀತಿಭ್ರಷ್ಟ, ಸದಾ ವೇಶ್ಯಾಸಂಗದಲ್ಲಿ ಇರುತ್ತಿದ್ದ. ಕಡೆಯ ಕಾಲಕ್ಕೆ ಮನೆಗೆ ಬಂದು ಹೆಂಡತಿಯ ಜೊತೆಗುಳಿದ. ಆಕೆ ಪರಮ ಪತಿವ್ರತೆ. ನಿಷ್ಠೆಯಿಂದ ಪತಿ ಸೇವೆ ಮಾಡುತ್ತಿದ್ದಳು. ಕಡೆಯ ಕಾಲ ಸಮೀಪಿಸಿತು. ನಿಮ್ಮ ಕೊನೆಯ ಅಪೇಕ್ಷೆ ಏನಿದೆ ಎಂದು ಕೇಳಿದಳು. "ನನ್ನ ವೇಶ್ಯೆಯನ್ನೊಮ್ಮೆ ನೋಡಬೇಕು. " ಎಂದನಂತೆ. ಆಗ ಆಕೆ ಹೆಗಲ ಮೇಲೆ ಅವನನ್ನು ಹೊತ್ತುಕೊಂಡು ವೇಶ್ಯೆಯ ಮನೆಗೆ ಒಯ್ದಳಂತೆ. ಆಹಾ ಎಂಥಾ ಪತಿವ್ರತೆ ?!.

ಕಥೆ ಕೇಳಿ ನಮಗಂತೂ ನಾಚಿಕೆಯಾಯಿತು. ಮತ್ತು ಇದನ್ನು ಶ್ರೀಗಳು ಏಕೆ ಹೇಳಿದರು ಎಂಬುದೇ ನಮಗೆ ಅರ್ಥವಾಗಲಿಲ್ಲ ಇಂಥ ಪಾತಿವ್ರತ್ಯದ ಕಲ್ಪನೆ ಮನುಸ್ಮೃತಿಯ ಪಡಿಯಚ್ಚು. ಬಸವ ಧರ್ಮ ಖಂಡಿತಾ ಒಪ್ಪದು. ಗಂಡನು ಎಂಥವನೇ ಇರಲಿ ಅವನನ್ನು ದೇವರೆಂದು ಆರಾಧಿಸಬೇಕು, ಸಹಿಸಿಕೊಳ್ಳಬೇಕು ಎಂದು ಇದರರ್ಥ. ಆದರೆ ಬಸವ ಧರ್ಮವು ಇಬ್ಬರ ಮೇಲೂ ಸಮಾನ ಬಾಧ್ಯತೆ ಹೊರಿಸುತ್ತದೆ.

ಪತ್ನಿ ಪತಿವ್ರತೆಯಾಗಿರಬೇಕು ; ಅಷ್ಟೆ ಅಲ್ಲ ಪುರುಷನೂ ಪರ ವಧುವನ್ನು ಮಹಾದೇವಿ ಎನ್ನಬೇಕು. ಈಸಕ್ಕಿಯಾಸೆ ನಿಮಗೇಕೆ ? ಅಲ್ಲಿಯೇ ಸುರಿದು ಬನ್ನಿ ಎನ್ನುವ ಸ್ಥೈರ್ಯ ಶರಣೆ ಲಕ್ಕಮ್ಮನದು. ನಾನು ಯಾಕೆ ಬರೆಯುತ್ತಿದ್ದೇನೆಂದರೆ ನಾವು ಯಾವುದೇ ವೇದಿಕೆ ಮೇಲೆ ಭಾಷಣ ಮಾಡಲಿ, ಯಾವುದೇ ಲೇಖನ ಬರೆಯಲಿ ಬಸವ ತತ್ತ್ವದ ಚೌಕಟ್ಟು ಬಿಟ್ಟು ಮಾತನಾಡಬಾರದು, ನಡೆಯಬಾರದು. ನಮ್ಮನ್ನು ರಕ್ಷಿಸುವುದು

ಲಿಂಗದೇವನ ಕೃಪೆ, ಧರ್ಮಗುರುವಿನ ಅನುಗ್ರಹ; ಬೇರಾವುದೇ ಮುಖ್ಯಮಂತ್ರಿ, ರಾಜ್ಯಪಾಲ, ಮಂತ್ರಿಗಳು, ಶ್ರೀಮಂತರು, ಗಣ್ಯರ ಕೃಪೆಯಲ್ಲ. ಆದ್ದರಿಂದ ತತ್ತ್ವನಿಷ್ಠೆಯೇ ಬಹುದೊಡ್ಡ ಸಂಪತ್ತು; ಲೌಕಿಕ ಜನರ ಆಶ್ರಯವಲ್ಲ ಎಂಬುದನ್ನು ಗುರುಗಳು, ಮಠಾಧೀಶರು ಅರಿಯಬೇಕು.

3. ವಿಶ್ವ ಹಿಂದು ಪರಿಷತ್ ನಿರ್ಣಯಗಳ ವಿಶ್ಲೇಷಣೆ

ಇತ್ತೀಚೆಗೆ ವಿಶ್ವಹಿಂದು ಪರಿಷತ್ ನಮ್ಮ ರಾಷ್ಟ್ರವು ಅನುಸರಿಸಬೇಕಾದ ಕೆಲವು ಕ್ರಮಗಳನ್ನು ಕುರಿತು ತನ್ನ ನಿಲುವನ್ನು ಪ್ರಕಟಿಸಿರುವುದಲ್ಲದೆ ಹಿಂದು ಜನತೆಗೆ ಕರೆ ನೀಡಿದೆ. ಆ ನಿರ್ಣಯಗಳಲ್ಲಿ ಮೂರನ್ನು ನಾವು ವಿಶ್ಲೇಷಿಸುವುದು ಅತಿ ಅವಶ್ಯವೆನಿಸಿದೆ.

1. ಮುಸ್ಲೀಮರ ಜನಸಂಖ್ಯೆ ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಪ್ರಜಾಪ್ರಭುತ್ವದಲ್ಲಿ ಜನ ಸಂಖ್ಯೆ ನಿರ್ಣಾಯಕ. ಆದ್ದರಿಂದ ಹಿಂದುಗಳು ಸಹ ಜನಸಂಖ್ಯೆಯನ್ನು ಬೆಳೆಸಬೇಕು . ಸರ್ಕಾರದ ಕುಟುಂಬ ಯೋಜನಾ ನಿಲುವನ್ನು ಒಪ್ಪಿಕೊಳ್ಳಬಾರದು. ಹಿಂದುಗಳು ಸಹ ಹೆಚ್ಚು ಮಕ್ಕಳನ್ನು ಹೊಂದಬೇಕು.

ವಿಶ್ಲೇಷಣೆ: ವಿ.ಹೆಚ್.ಪಿಯ ಕಳವಳ ಅರ್ಥವಾಗುವಂತಹದೆ. ಇಲ್ಲಿ "ಹಿಂದು" ಗಳು-ಅವರೂ ಕುಟುಂಬ ನಿಯಂತ್ರಣಕ್ಕೆ ಬದ್ಧರಾಗಬಾರದು ಎಂದು ಹೇಳುವಾಗ ನಾವೂ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ವೇದ-ಆಗಮ ಆಧಾರಿತ ಜೀವನ ವಿಧಾನ ಒಪ್ಪಿಕೊಳ್ಳುವ ವೈದಿಕ ಹಿಂದುಗಳ ಜೊತೆಗೆ ಧಾರ್ಮಿಕವಾಗಿ ಹಿಂದುಗಳಲ್ಲದಿದ್ದರೂ ಸಾಂಸ್ಕೃತಿಕವಾಗಿ ಹಿಂದುಗಳಾಗಿರುವ ಜೈನ, ಬೌದ್ಧ, ಲಿಂಗಾಯತ, ಸಿಖ್ ಸಮಾಜ ಬಾಂಧವರ ಧೋರಣೆಯ ಬಗ್ಗೆಯೂ ಆಲೋಚಿಸಬೇಕಾಗುತ್ತದೆ. ಅಹಿಂದು ಧರ್ಮಗಳಾದ ಈ 4 ಧರ್ಮಗಳೂ ವೇದ-ಆಗಮ ಒಪ್ಪದೆ, ಹಿಂದು ದೇವತೆಗಳನ್ನು ಆರಾಧಿಸದೆ, ಜಾತಿ ಪದ್ಧತಿ ಮನ್ನಿಸದೆ, ಬಯಸಿ ಬರುವ ಎಲ್ಲರಿಗೂ ದೀಕ್ಷೆ ನೀಡುವ ಮನೋಧರ್ಮ ಉಳ್ಳವು. ಹೀಗಾಗಿ ವೈದಿಕ-ಹಿಂದು ಧರ್ಮದಿಂದ ಬೇರೆಯೇ ಆಗಿ ಅಹಿಂದು ಧರ್ಮ ಎನ್ನಿಸಿಕೊಳ್ಳುತ್ತವೆ. ಆದರೆ ಸಾಂಸ್ಕೃತಿಕವಾಗಿ, ಉದಾಹರಣೆಗೆ ವೇಷ-ಭೂಷಣ, ಹೆಸರುಗಳನ್ನು ಇಟ್ಟುಕೊಳ್ಳುವ ವಿಧಾನ ಮುಂತಾದುವುಗಳಲ್ಲಿ ಹಿಂದು ಸಂಸ್ಕೃತಿಯೊಡನೆ ಹೋಲಿಕೆ ಹೊಂದಿರುತ್ತಾರೆ. ಎರಡನೆಯದಾಗಿ ಈ ಎಲ್ಲ(5) ಧರ್ಮಗಳ ಜನ್ಮಭೂಮಿ ಭಾರತ ದೇಶವೇ ಆಗಿ ಇವುಗಳ ಧರ್ಮಕ್ಷೇತ್ರಗಳು ಭಾರತದಲ್ಲಿಯೇ ಇರುವುದರಿಂದ ಈ ಧರ್ಮಗಳ ಭಾರತ ನಿಷ್ಠೆ ಅಚಲ ಮತ್ತು ಕರುಳ ಬಳ್ಳಿಯ ಸಂಬಂಧ ಈ ದೇಶದೊಡನೆಯೇ ಇದೆ. ಆದ್ದರಿಂದ ಕೆಲವು ವಿಷಯಗಳಲ್ಲಿ ಈ ಐದೂ ಧರ್ಮಗಳ ಅನುಯಾಯಿಗಳು ಒಟ್ಟಾಗಿಯೇ ಚಿಂತನೆ ಮಾಡಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಜನ ಸಂಖ್ಯಾ ಅಭಿವೃದ್ಧಿಯೂ ಒಂದು. ಕಣ್ಣಿಗೆ ಕಣ್ಣು, ಕಾಲಿಗೆ ಕಾಲು ಎಂಬ ಸ್ಪರ್ಧೆಯ ದೃಷ್ಟಿಯಿಂದ ವಿ.ಹಿಂ.ಪ ಹಿಂದುಗಳಿಗೆ "ನೀವು ಜನಸಂಖ್ಯಾ ನಿಯಂತ್ರಣಕ್ಕೆ ಒಳಪಡದೆ ಮಕ್ಕಳನ್ನು ಹೆರಬೇಕು." ಎಂದು ಕರೆಕೊಡುವುದರಲ್ಲಿ ಸ್ವಲ್ಪ ಅರ್ಥವನ್ನು ಹುಡುಕಬಹುದಾದರೂ, ಜನ ಸಂಖ್ಯೆಯು ಬೆಳೆದಂತೆ ದೇಶದ ಪ್ರಗತಿ ಕುಂಠಿತವಾಗುವುದು ; ಪ್ರಾಕೃತಿಕ ಸಂಪನ್ಮೂಲದ ಕೊರತೆ ಉಂಟಾಗುವುದು ಎಂಬುವ ದೂರಗಾಮಿ ಆಲೋಚನೆಯಿಂದ ಬೇರೆ ಪರಿಹಾರವನ್ನು ಹುಡುಕುವುದು ಸೂಕ್ತ.

1. ಹಿಂದುಗಳಿಗೆ ಮಾತ್ರ ಅನ್ವಯವಾಗುವ ಕುಟುಂಬ ನಿಯಂತ್ರಣ ಸೂತ್ರವನ್ನು ಭಾರತ ದೇಶದ ಎಲ್ಲ ನಾಗರಿಕರಿಗೆ ಜಾತಿ ಮತ ಧರ್ಮ ಭೇದವಿಲ್ಲದೆ ಅನ್ವಯಿಸುವುದು.

ಪತ್ರಿಕೆಗಳಲ್ಲಿ ನೋಡುವಾಗ ಅಪರಾಧಿಗಳ ಪಟ್ಟಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ತರುಣರ ಹೆಸರು ಕಾಣಬರುತ್ತದೆ. ಕಾರಣ ಹುಡುಕಿದರೆ, ಸಾಕಲು ಆಗದಿದ್ದರೂ ಅನಿಯಂತ್ರಿತವಾಗಿ ಮಕ್ಕಳನ್ನು ಹೆರುವುದು ಅವರು ವಾಮಮಾರ್ಗದಿಂದ ಹಣ ಗಳಿಸಲು ಪ್ರಚೋದನೆ ನೀಡುವುದು ಎಂಬುದು ಮನವರಿಕೆಯಾಗುತ್ತದೆ.

2. ಹಿಂದುಗಳಿಗೆ ಒಬ್ಬಳೇ ಹೆಂಡತಿ, ಒಬ್ಬನೇ ಗಂಡ ಇರಬೇಕು ಎಂಬ ಸೂತ್ರದ ಅನ್ವಯ ಬಹುಪತ್ನಿತ್ವವನ್ನು ನಿಷೇಧಿಸಿರುವಂತೆ, ಇನ್ನಿತರ ಧರ್ಮೀಯರಿಗೂ ಮುಖ್ಯವಾಗಿ ಮುಸ್ಲೀಮರಿಗೂ ಅನ್ವಯಿಸಬೇಕು. ಬಹುಪತ್ನಿತ್ವದ ಆಚರಣೆಯಿಂದ ಮುಸಲೀಮ್ ಮಹಿಳೆಯರು ಮತ್ತು ಮಕ್ಕಳು ಬಹಳ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ

ಮೊಹಮ್ಮದ್ ಪೈಗಂಬರರು ಅಂದಿನ ಅರಬ್ ದೇಶದ ಬುಡಕಟ್ಟುಗಳ ಹೊಡೆದಾಟ ಬಡಿದಾಟಗಳ ಹಿನ್ನೆಲೆಯಲ್ಲಿ ಮಹಿಳೆಯರನ್ನು ರಕ್ಷಿಸಲು ತಂದ ಬಹುಪತ್ನಿತ್ವದ ಅವಕಾಶ ಇಂದು ದುರುಪಯೋಗವಾಗಿ ಮಹಿಳೆಯರ ಶೋಷಣೆಗೆ ಕಾರಣವಾಗುತ್ತಿದೆ. ಆದ್ದರಿಂದ ಮಾನವೀಯ ದೃಷ್ಟಿಯಿಂದಲೂ ಏಕಪತ್ನಿತ್ವ, ಕುಟುಂಬ ನಿಯಂತ್ರಣ ಸೂತ್ರ ತಂದರೆ, ಮುಸ್ಲಿಂ ಮಹಿಳೆ ಮತ್ತು ಅವರ ಮಕ್ಕಳ ಹಿತ ರಕ್ಷಣೆಗೆ ದಾರಿಯಾಗುವುದು. ದೇಶದ ಎಲ್ಲ ಪ್ರಜೆಗಳಿಗೂ ಒಂದೇ ಕಾನೂನು ಇದ್ದಂತೆ ಆಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದರೆ ಪ್ರಾಜ್ಞರಾದ ಮುಸಲೀಮರೂ ಬೆಂಬಲಿಸುವರು.

2. "ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥವಾಗಿ ಘೋಷಿಸಬೇಕು." ವಿಶ್ವಹಿಂದು ಪರಿಷತ್‌ನ ಈ ನಿಲುವು ಖಂಡನಾರ್ಹ. ಭಾರತ ದೇಶದಲ್ಲಿ ಹಲವಾರು ಧರ್ಮಗಳಿವೆ. ವೈದಿಕ-ಹಿಂದು ಧರ್ಮವೇ ಅಲ್ಲದೆ ಬೌದ್ಧ, ಜೈನ, ಲಿಂಗಾಯತ ಮತ್ತು ಸಿಖ್ ಧರ್ಮಗಳು ಭಾರತ ದೇಶದಲ್ಲಿ ಹುಟ್ಟಿದವೇ ಆಗಿದ್ದರೂ ಭಗವದ್ಗೀತೆಯನ್ನು ತಮ್ಮ ಧರ್ಮಶಾಸ್ತ್ರವೆಂದು ಮನ್ನಿಸುವುದಿಲ್ಲ. ಭಾರತದ ಹೊರಗೆ ಹುಟ್ಟಿ ಇಲ್ಲಿ ಹುಲುಸಾಗಿ ಬೆಳೆಯುತ್ತಿರುವ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಮೊದಲೇ ಒಪ್ಪುವುದಿಲ್ಲ. ಭಗವದ್ಗೀತೆಯ ಹಲವಾರು ಉದಾತ್ತ ವಿಚಾರಗಳನ್ನು ಗೌರವಪೂರ್ವಕವಾಗಿ ನಾವು ಒಪ್ಪಿಕೊಳ್ಳಬಹುದು, ಉಲ್ಲೇಖಿಸಬಹುದು ಆದರೆ ಭಗವದ್ಗೀತೆಯ ಎಲ್ಲ ವಿಚಾರಗಳನ್ನು ಈ ನಾಲ್ಕೂ ಅಹಿಂದು ಧರ್ಮಗಳು ಖಂಡಿತಾ ಒಪ್ಪುವುದಿಲ್ಲ. ಯಾರೋ ಕೆಲವು ಇಷ್ಟಲಿಂಗ ಧಾರಣೆ ಮಾಡಿದ ಸಾಧು ಸನ್ಯಾಸಿ ಸ್ವಾಮಿಗಳು ಜನರನ್ನು ಆಕರ್ಷಿಸಲು ಭಗವದ್ಗೀತೆಯ ಮೇಲೆ ಪ್ರವಚನ, ವ್ಯಾಖ್ಯಾನ ಮಾಡಿದ ಮಾತ್ರಕ್ಕೆ ಲಿಂಗಾಯತ ಧರ್ಮವು ಭಗವದ್ಗೀತೆಯನ್ನು ಖಂಡಿತಾ ತನ್ನ ಧರ್ಮಗ್ರಂಥವೆಂದು ಮಾನ್ಯ ಮಾಡುವುದಿಲ್ಲ. ಕಾರಣವೇನೆಂದರೆ, ಭಗವದ್ಗೀತೆ ಪ್ರತಿಪಾದಿಸುವ (1)ವರ್ಣಾಶ್ರಮ ವರ್ಗೀಕರಣ (2)ಬಹುದೇವತೋಪಾಸನೆ (3)ವೈಶ್ಯ, ಸ್ತ್ರೀ, ಶೂದ್ರರನ್ನು ಪಾಪ ಯೋನಿಜರು ಎಂದು ಭಾವಿಸುವುದನ್ನು ಲಿಂಗಾಯತ ಧರ್ಮವು ಒಪ್ಪುವುದಿಲ್ಲ. ಈ ಹಿನ್ನೆಲೆಯಲ್ಲೇ, 150 ವರ್ಷಗಳ ಹಿಂದೆ ಬ್ರಿಟಿಷ್ ಆಳ್ವಿಕೆ ಇದ್ದಾಗ ಲಿಂಗಾಯತರು ಕೋರ್ಟಿನಲ್ಲಿ ಭಗವದ್ಗೀತೆ ಮುಟ್ಟಿ ಪ್ರಮಾಣ ಮಾಡಲು ಸಿದ್ಧರಿರಲಿಲ್ಲ ಎಂದು ಓರ್ವ ಬ್ರಿಟಿಷ್ ಜಡ್ಜ್ ಬರೆಯುತ್ತಾನೆ. ಹಿಂದು ಸಂಸ್ಕೃತಿ, ಭಾರತದ ಅಖಂಡತೆ ರಕ್ಷಣೆಯಾಗಬೇಕೆಂದು ಇದ್ದರೆ ವಿ.ಹಂ.ಪ ಹುಚ್ಚುಚ್ಚಾರ ನಿರ್ಣಯ ತೆಗೆದುಕೊಳ್ಳಬಾರದು. ರಾಮಮಂದಿರ ನಿರ್ಮಾಣದ ಏಕೈಕ ಗುರಿಯೊಡನೆ ಹೊರಟ ವಿ.ಹಿಂ.ಪ ಭಾರತೀಯ ಜನತಾ ಪಕ್ಷದ ಭವಿಷ್ಯವನ್ನೇ ಕುಂದಿಸಿತು. ಭಾರತದ ಸಂವಿಧಾನವೇ ಸದ್ಯ ಇಡೀ ರಾಷ್ಟ್ರಕ್ಕೆ ರಾಷ್ಟ್ರೀಯ ಗ್ರಂಥ; ಉಳಿದ ಧರ್ಮಗ್ರಂಥಗಳು ಆಯಾ ಧಾರ್ಮಿಕ ಸಮಾಜಕ್ಕೆ ಸಂಬಂಧಿಸುತ್ತವೆ ಅಷ್ಟೆ.

3."ಪಾಕಿಸ್ಥಾನ ಮತ್ತು ಬಾಂಗ್ಲಾದೇಶಗಳ ಕಸಾಯಿಖಾನೆಗಳಿಗೆ ರಾಸುಗಳನ್ನು ರಫ್ತು ಮಾಡಬಾರದು." ಎಂಬ ನಿರ್ಣಯ.

ಈ ದೇಶದಲ್ಲೇ ವಿದೇಶಿ ಕಂಪನಿಗಳು ಬಂದು ಯಾಂತ್ರೀಕೃತ ಕಸಾಯಿ ಖಾನೆ ತೆರೆದು ಯುವ ವಯಸ್ಸಿನ ಗೋವುಗಳನ್ನು ಖರೀದಿಸಿ ಕೊಲ್ಲುತ್ತ, ಮಾಂಸವನ್ನು ಡಬ್ಬಿಗಳಲ್ಲಿ ತುಂಬಿ ಅರಬ್ ದೇಶಗಳಿಗೆ ರಫ್ತು ಮಾಡುತ್ತಿವೆ. ರೈತರು ದುಡ್ಡಿನ ಆಸೆಗೆ ಗೋವು , ಎಮ್ಮೆ ಇತ್ಯಾದಿ ರಾಸುಗಳನ್ನು ಮಾರುತ್ತ ಗೋ ಸಂಪತ್ತನ್ನು ನಾಶ ಮಾಡಿಕೊಳ್ಳುತ್ತಿದ್ದಾರೆ. ಸಗಣಿ ಗೊಬ್ಬರ ತಯಾರು ಮಾಡಿಕೊಳ್ಳದೆ ಕೃತಕ ಗೊಬ್ಬರವನ್ನು, ಕೀಟ ನಾಶಕಗಳನ್ನು ಬಳಸುತ್ತ ಭೂಮಿಯನ್ನು ಬಂಜರಾಗಿಸುತ್ತಿದ್ದಾರೆ. ಮಾತ್ರವಲ್ಲ ಬೆಳೆಗಳನ್ನು ವಿಷಯುಕ್ತವಾಗಿ ಮಾಡಿಕೊಳ್ಳುತ್ತಿದ್ದಾರೆ. ವಿದೇಶಿ ಕಂಪೆನಿಗಳ ಪ್ರಚಾರ ತಂತ್ರಕ್ಕೆ ಬಲಿಯಾಗಿ ಅನಾಹುತಗಳನ್ನು ಆಹ್ವಾನಿಸುತ್ತಿದ್ದಾರೆ.

ನಿಸರ್ಗವು ಸಸ್ಯ ಸಂಪತ್ತು, ಪ್ರಾಣಿ ಸಂಪತ್ತು, ಮಾನವ ಸಂಪತ್ತು ಮೂರನ್ನು ಸಮತೋಲನದಲ್ಲಿ ಇಟ್ಟುಕೊಂಡಿರುವಾಗ ಮನುಷ್ಯ ತಾನಷ್ಟೇ ಬದುಕಿದರೆ ಸಾಲದು, ತಾನೂ ಬದುಕಿ ಇನ್ನಿತರ ಜೀವರಾಶಿಯನ್ನು ಬದುಕಗೊಡುವುದೇ ನಿಜವಾದ ಮಾನವೀಯ ಮೌಲ್ಯ. ವಿಶ್ವ ಹಿಂದು ಪರಿಷತ್ತು ಪಾಕಿಸ್ತಾನ ಬಾಂಗ್ಲಾದೇಶಗಳನ್ನಷ್ಟೇ ಶತ್ರು ಭಾವದಿಂದ ಕಾಣದೆ ಎಲ್ಲ ಸಮಸ್ಯೆಗಳನ್ನು ವಿಶಾಲ ಮತ್ತು ದೂರದೃಷ್ಟಿಯಿಂದ ಆಲೋಚಿಸಬೇಕೆಂದು ಸೂಚಿಸುತ್ತೇವೆ. ★

ಚಿತ್ರದುರ್ಗ ಶ್ರೀಗಳ ವಿಷಾದ ಗೀತೆಯ ವಿಮರ್ಶೆ

ಲಿಂಗಾಯತರೇ ಬಸವಣ್ಣನ ವಚನ ಪಾರಾಯಣ ಮಾಡುತ್ತಿಲ್ಲ

– ಮಾತಾಜಿ

ಬೆಂಗಳೂರು : ಲಿಂಗಾಯತ ಧರ್ಮೀಯರೇ ಬಸವಣ್ಣನ ವಚನ ಪಾರಾಯಣ ಮಾಡುತ್ತಿಲ್ಲ ಎಂದು ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮೀಜಿ ವಿಷಾದ ವ್ಯಕ್ತಪಡಿಸಿದರು.

ಬಸವ ಕೇಂದ್ರ ಆಶ್ರಯದಲ್ಲಿ ಶರಣ ಮಾದಾರ ಚನ್ನಯ್ಯ ಹಾಗೂ ಡೋಹರ ಕಕ್ಕಯ್ಯನವರ ಸ್ಮರಣೆ, ಮಾಸಿಕ ಶರಣ ಸಂಗಮ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಬಸವಣ್ಣ ವರ್ಣಾಶ್ರಮ ಧರ್ಮ ಧಿಕ್ಕರಿಸಿ ಶರಣರಾದರು. 18 ಶೂದ್ರ ಕುಲಗಳನ್ನು ಒಟ್ಟು ಸೇರಿಸಿ ಮಾನವ ಧರ್ಮ ಕಟ್ಟಿದರು. ಆದರೆ ಇಂದಿನ ಲಿಂಗಾಯತರು ಬಸವಣ್ಣ ಶೂದ್ರರನ್ನು ತಮ್ಮ ಧರ್ಮಕ್ಕೆ ಸೇರಿಸಿ ಅನ್ಯಾಯ ಮಾಡಿದ ಎಂದು ದೂರುತ್ತಿದ್ದಾರೆ ಎಂದು ನೋವು ವ್ಯಕ್ತಪಡಿಸಿದರು.

ಈಗಿನ ಕಾಲದಲ್ಲಿ ಬಸವ ತತ್ವ ಆಚರಿಸುವವರು ಸಮಾಜದ ನಿಂದನೆಗೆ ಗುರಿಯಾಗಬೇಕಾಗುತ್ತದೆ. ಇದಕ್ಕೆ ನಾನೇ ಸಾಕ್ಷಿ. ಶೂದ್ರರನ್ನು ಲಿಂಗಾಯತ ಧರ್ಮಕ್ಕೆ ಸೇರಿಸಿ ಎಂದು ಹೇಳಿದ್ದಕ್ಕೆ ನನ್ನನ್ನೇ ಧರ್ಮದಿಂದ ಹೊರಗಿಡುವ ಪ್ರಯತ್ನ ಮಾಡಲಾಯಿತು. ಆದರೆ, ಸಮಾಜದಲ್ಲಿ ಒಳ್ಳೆಯ ಕೆಲಸ ಮಾಡುವವರು ಕೆಟ್ಟ ಮಾತುಗಳನ್ನು ಕೇಳಬೇಕಾಗುತ್ತದೆ ಎಂದು ಹೇಳಿದರು.

ಈ ದೇಶದಲ್ಲಿ ಕ್ರಾಂತಿಕಾರಿಗಳನ್ನು ಪುರಾಣ ಪುರುಷರನ್ನಾಗಿ ಮಾಡಲಾಗುತ್ತಿದೆ. ಇದರಿಂದ ಭವಿಷ್ಯದಲ್ಲಿ ಸಾಮಾಜಿಕ ಆಂದೋಲನಗಳು ಹುಟ್ಟುತ್ತಿಲ್ಲ. ಪುರಾಣ ಪ್ರವಚನದಿಂದ ಹೋರಾಟದ ಸಂಚಲನವಾಗದು ಎಂದು ತಿಳಿಸಿದರು.

ಕಲ್ಪತರು ಸಾಂಸ್ಕೃತಿಕ ವೇದಿಕೆಯ ಪ್ರೊ.ಸಿ.ಎಚ್.ಮರಿದೇವರು ಉಪನ್ಯಾಸ ನೀಡಿದರು. ಭರಮಸಾಗರದ ಶಾಸಕ ಎಚ್.ಆಂಜನೇಯ, ಚಿತ್ರನಟ ಅಶೋಕ್ ಭಾಗವಹಿಸಿದ್ದರು.

(ದಿ.14-6-2005 ವಿಜಯ ಕರ್ನಾಟಕ, ಬೆಂಗಳೂರು ವಿಜಯ II ಪುಟ)

ಬೆಂಗಳೂರಿನ ಬಸವ ಕೇಂದ್ರದ ಆಶ್ರಯದಲ್ಲಿ ನಡೆದ ಮಾಸಿಕ ಶರಣ ಸಂಗಮ ಕಾರ್ಯಕ್ರಮದಲ್ಲಿ ಚಿತ್ರದುರ್ಗ ಶ್ರೀಗಳು ಹಲವಾರು ಮಾತುಗಳನ್ನು ಆಡಿದ್ದಾರೆ.

1. ಲಿಂಗಾಯತ ಧರ್ಮೀಯರೇ ಬಸವಣ್ಣನವರ ವಚನ ಪಾರಾಯಣ ಮಾಡುತ್ತಿಲ್ಲ.
2. ಬಸವಣ್ಣನವರು ಶೂದ್ರರನ್ನು ತಮ್ಮ ಧರ್ಮಕ್ಕೆ ಸೇರಿಸಿ ಅನ್ಯಾಯ ಮಾಡಿದರು ಎಂದು ಇಂದಿನ ಲಿಂಗಾಯತರು ದೂರುತ್ತಿದ್ದಾರೆ.
3. ಈಗಿನ ಕಾಲದಲ್ಲಿ ಬಸವ ತತ್ತ್ವ ಆಚರಿಸುವವರು ಸಮಾಜದ ನಿಂದನೆಗೆ ಗುರಿಯಾಗಬೇಕಾಗುತ್ತದೆ. ಅದಕ್ಕೆ ನಾನೇ ಸಾಕ್ಷಿ.
4. ಸಮಾಜದಲ್ಲಿ ಒಳ್ಳೆಯ ಕೆಲಸ ಮಡುವವರು ಕೆಟ್ಟ ಮಾತುಗಳನ್ನು ಕೇಳಬೇಕಾಗುತ್ತದೆ.
5. ಈ ದೇಶದಲ್ಲಿ ಕ್ರಾಂತಿಕಾರಿಗಳನ್ನು ಪುರಾಣ ಪುರುಷರನ್ನಾಗಿ ಮಾಡಲಾಗುತ್ತಿದೆ.

ಇನ್ನೂ ಎಷ್ಟು ಒಳ್ಳೆಯ ಮತ್ತು ಆತ್ಮಾವಲೋಕನದ ಮಾತುಗಳನ್ನು ಶ್ರೀಗಳು ಆಡಿದ್ದರೋ, ಇಷ್ಟು ಮಾತ್ರ ಪತ್ರಿಕೆಯಲ್ಲಿ ವರದಿಯಾಗಿದೆ.

ಉ : 1. ಲಿಂಗಾಯತ ಧರ್ಮೀಯರು ಬಸವಣ್ಣನವರ ಮತ್ತು ಅವರ ಸಮಕಾಲೀನ ಶರಣರ ವಚನಗಳನ್ನು ಪಾರಾಯಣ, ಪಠಣ ಮಾಡದೆ ಇದ್ದುದರಿಂದಲೇ ಲಿಂಗಾಯತ ಸಮಾಜವು ಇಂಥ ದುಃಸ್ಥಿತಿಗೆ ಇಳಿದಿರುವುದು. ಕೆಲವರು ಕೋಟ್ಯಧಿಪತಿಗಳಾಗಿರಬಹುದು; ದಂಡಿಯಾಗಿ ಸ್ಕೂಲ್ ಕಾಲೇಜು ನಡೆಸುತ್ತಾ ಮೆಡಿಕಲ್ ಇಂಜಿನಿಯರಿಂಗ್ ಕಾಲೇಜ್ ಮೂಲಕ ಕುಬೇರರಾಗಿಬಹುದು; ಬಹಳ ಗಣ್ಯರಾಗಿ ದಿನನಿತ್ಯವೂ ಪತ್ರಿಕೆಗಳು ಕಾವಿ ಬಣ್ಣದವರ ಫೋಟೋಗಳಿಂದ ಸುಂದರವಾಗಿ ಕಾಣುವಂತೆ ರಾರಾಜಿಸುತ್ತಿರಬಹುದು.

ಆದರೆ ತಾತ್ತ್ವಿಕ ಗಟ್ಟಿತನ, ಸಾಮೂಹಿಕ ಸಂಘಟನೆ, ಆದರ್ಶ ಮೌಲ್ಯ ಸಹಿತ ಜೀವನ ವಿಧಾನವಿಲ್ಲದೆ, ಲಿಂಗಾಯತೇತರರು ಇವರು ಅಂದರೆ ಲಿಂಗಾಯತರು ಬಸವಣ್ಣನವರ ಅನುಯಾಯಿಗಳೇ ? ಎಂದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಆಗಲಿಕ್ಕೆ ವಚನ ಸಾಹಿತ್ಯದ ಅಧ್ಯಯನ ಕೊರತೆಯೇ ಕಾರಣ. ಈ ಸ್ಥಿತಿಗೆ ಯಾರು ಕಾರಣ ? ತಮ್ಮದೇ ಧಾರ್ಮಿಕ ಸಂವಿಧಾನದಾದ ವಚನ ಸಾಹಿತ್ಯವನ್ನು (ಮುಸಲೀಮರು ಕುರಾನನ್ನು, ಕ್ರೈಸ್ತರು ಬೈಬಲನ್ನು, ಸಿಖ್ಖರು ಗ್ರಂಥ ಸಾಹೇಬವನ್ನು ಓದಿದಂತೆ) ಓದುವುದು, ಅನುಸರಿಸುವುದು ಬಿಟ್ಟು ಸಂಸ್ಕೃತ ಶಾಲೆಗಳನ್ನು ತೆರೆದು, ಸಂಸ್ಕೃತ ಓದಲು ಓದಿಸಲು ಶುರು ಮಾಡಿದ ಮಠಾಧಿಪತಿಗಳೇ ಕಾರಣ. ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ, ಊರೆಲ್ಲ ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಎಂಬಂತೆ ಇದೆ ಚಿತ್ರದುರ್ಗದ ಬೃಹನ್ಮಠದ ಶ್ರೀಗಳು ಮಾತನಾಡುತ್ತಿರುವುದು. ಆದರೂ ಒಂದು ಸಮಾಧಾನ. ಎಂದೋ ಚಿತ್ರದುರ್ಗದ ಬೃಹನ್ಮಠ ಮಾಡಬೇಕಾದ ಕಾರ್ಯವನ್ನು ಈಗಲಾದರೂ ಶ್ರೀಗಳು ಮಾಡಿ, ಹಳಿ ತಪ್ಪಿದ್ದ ತಮ್ಮ ವಿರಕ್ತ ಮಠವನ್ನು ಸರಿದಾರಿಗೆ ಹಚ್ಚುವ ಧೈರ್ಯ ಮಾಡಿದ್ದಾರೆಂದು.

ಸ್ವಾ : 2. ಲಿಂಗಾಯತ ಸಮಾಜದ ಮೇಲ್ಜಾತಿಯ ಗುಂಪುಗಳವರು ಒಂದು ಹೊಸರಾಗ ಆರಂಭಿಸಿದ್ದಾರೆ. ಅದೆಂದರೆ ಬಸವಣ್ಣನವರು ಶೂದ್ರರನ್ನು ತಮ್ಮ ಧರ್ಮಕ್ಕೆ ಸೇರಿಸಿ ಅನ್ಯಾಯ ಮಾಡಿದರೆಂಬ ಆರೋಪ! ಸ್ವಾಮೀಜಿಯವರ ಕೆಲವು ಮಾತಿನಲ್ಲಿ ಸತ್ಯತೆ ಇದೆ. ಜನರ ವಿಶ್ವಾಸ ಘಾತುಕತನಕ್ಕೆ ಆಶ್ಚರ್ಯ-ದುಃಖ ಎರಡೂ ಆಗುತ್ತದೆ. ಬಸವಣ್ಣನವರು ಕೊಟ್ಟ ಧರ್ಮವು ಜನಪ್ರಿಯತೆ ಪಡೆದಾಗ ಆ ಪ್ರವಾಹದೊಳಗೆ ಬಂದು ವಿಲೀನವಾದವರು ಈ ಮೇಲ್ಜಾತಿಯವರು. ಇಷ್ಟಲಿಂಗವನ್ನೇ ಕೇಂದ್ರ ಬಿಂದುವನ್ನಾಗಿ ಇಟ್ಟುಕೊಂಡು ಹೊಸ ಧರ್ಮವನ್ನು ಧರ್ಮಪಿತರು ಕೊಟ್ಟರು. ಆರಂಭದ ದಿನಗಳಲ್ಲಿ ಕೆಲವೇ ಕೆಲವರು ಮೇಲ್ಜಾತಿಯಿಂದ ಬಂದ ಶರಣರನ್ನು ಕಾಣುತ್ತೇವೆ. ಹೆಚ್ಚಿನವರು ಶೂದ್ರ ಮತ್ತು ಅಸ್ಪೃಶ್ಯ ಜನಾಂಗದವರು, ರೈತ,ಕುಂಬಾರ ,ಕಮ್ಮಾರ ಗಾಣಿಗ, ಮಡಿವಾಳ, ಮೇದಾರ, ರೆಡ್ಡಿ, ಬಹುರೂಪಿ ಮುಂತಾದ ಶೂದ್ರ ವರ್ಣೀಯರು; ಮಾದಾರ, ಸಮಗಾರ, ಡೋಹರ, ಆದಿ ಜಾಂಬವ, ಛಲವಾದಿ ಮುಂತಾದ ಪಂಚಮ ವರ್ಣೀಯರೆನ್ನಿಸಿಕೊಂಡಿದ್ದ ಅಸ್ಪೃಶ್ಯರು. ಹೀಗೆ ಬಂದ ಜನರು ಮಾಂಸಾಹಾರ ವರ್ಜಿಸಿ, ಸತ್ಯ ಸದಾಚಾರ ಸಂಪನ್ನರಾಗಿ ಉತ್ತಮ ವರ್ಣೀಯರನ್ನು ಮೀರಿಸುವಂತಾದರು. ಬಸವ ಪ್ರಣೀತ ಲಿಂಗಾಯತ ಧರ್ಮವು ಸಸ್ಯಾಹಾರ ಆಧಾರಿತ ಸದಾಚಾರ ಸಂಪನ್ನತೆಯಿಂದ ಕೂಡಿದ ಸಾತ್ವಿಕ ಧರ್ಮವಾಗಿದ್ದರಿಂದ ಕಾಲಾನಂತರದಲ್ಲಿ ಸಸ್ಯಾಹಾರಿಗಳಾಗಿದ್ದ ಹಲವಾರು ಧರ್ಮೀಯರನ್ನು ಮುಖ್ಯವಾಗಿ ಶೈವರು, ಜೈನರನ್ನು ಕೆಲವು ಸಸ್ಯಾಹಾರಿ ಜಾತಿಗಳವರನ್ನು ಉದಾ: ಬ್ರಾಹ್ಮಣ ವೈಶ್ಯರನ್ನು ಆಕರ್ಷಿಸಿತು. ಜಗತ್ತಿನಲ್ಲಿ ಸುಧಾರಣಾತ್ಮಕ ಧರ್ಮಗಳಿಗೆ ವಿವಿಧ ಬುಡಕಟ್ಟು, ಜಾತಿ, ಭಾಷೆಗಳವರು ದೀಕ್ಷೆ ಪಡೆದು ಸೇರುವುದು ಸ್ವಾಭಾವಿಕ. ವೈದಿಕ, ಯಹೂದಿ ಮತ್ತು ಪಾರ್ಸಿ ಧರ್ಮಗಳಲ್ಲಿ ಇಂಥ ದೀಕ್ಷೆಗೆ ಅವಕಾಶವಿಲ್ಲ. ಇನ್ನಿತರ ಧರ್ಮಗಳಲ್ಲಿ ಅವಕಾಶವಿದೆ. ದೀಕ್ಷೆಯ ಮೂಲಕ ಒಳಗೆ ಬಂದವರು ತಮ್ಮ ಹಿಂದಿನ ಬುಡಕಟ್ಟು ಕುಲ, ಗೋತ್ರ, ಜಾತಿಗಳನ್ನು ಮರೆತು ಪ್ರವೇಶಿಸಿದ ಧರ್ಮದಲ್ಲಿ ಸಮರಸವಾಗಬೇಕು. ಕಿಚ್ಚಿನೊಳಗೆ ಕೋಲು ಬಿಚ್ಚಿಟ್ಟಂತೆ, ಹಿಂದಣ ಪೂರ್ವಾಶ್ರಯವಳಿದು ಮುಂದಿನ ಪಥ ಹಿಡಿಯಬೇಕು. ಲಿಂಗಾಯತ ಸಮಾಜದಲ್ಲಿ ಹಾಗೆ ಸಮರಸ ಸಾಧ್ಯವಾಗದೆ ಒಳಗಿನ ಗುಂಪುಗಳು ಹಾಗೆಯೇ ಉಳಿಯುತ್ತ ಬಂದು ಈಗ ಕೆಲವು ಸ್ವಾರ್ಥಪರ ಮುಖಂಡರು, ಮಠಾಧೀಶರು ಮತ್ತು ರಾಜಕಾರಣಿಗಳಿಂದಾಗಿ ಪ್ರತ್ಯೇಕತಾ ಮನೋಭಾವ ಜಾಸ್ತಿಯಾಗುತ್ತಲಿದೆ. ಬೆಂಕಿಗೆ ತುಪ್ಪ ಹಾಕುವಂತೆ ಇಂದಿನ ಸರ್ಕಾರಗಳು, ಹಾವನೂರು ವರದಿ ಕೆಲಸ ಮಾಡಿ ಸಮಾಜವನ್ನು ಮತ್ತಷ್ಟು ಸೀಳುತ್ತಿವೆ.

ಇದಕ್ಕೆ ಚಾಲನೆ ಕೊಟ್ಟವರು ಪಂಚ ಪೀಠಾಧೀಶರು. ಲಿಂಗಾಯತರಲ್ಲಿ ವರ್ಣಗಳಿವೆ ಎಂಬ ಪುಸ್ತಕಗಳನ್ನು ಬರೆಸಿದ್ದಲ್ಲದೆ ಲಿಂಗಾಯತ ಸಮಾಜದೊಳಗಿದ್ದ ಉಪಜಾತಿಗಳವರನ್ನು ವಿವಿಧ ವರ್ಣಗಳಲ್ಲಿ ವರ್ಗೀಕರಿಸುವ ಪ್ರಯತ್ನ ಸಹ ಮಾಡಿದರು. ಈ ಸಂದರ್ಭದಲ್ಲಿ ಜಂಗಮವನ್ನು ಒಂದು ಜಾತಿಯನ್ನಾಗಿ ವಿಕೃತಗೊಳಿಸಿ ಅವರನ್ನು ಪ್ರತ್ಯೇಕಿಸಿ, ಅವರು ಉಳಿದ ಲಿಂಗಾಯತರಿಗಿಂತಲೂ ಶ್ರೇಷ್ಠರು ಎಂಬ ಭ್ರಮೆಯನ್ನು ಅವರಲ್ಲಿ ತುಂಬಲಾಯಿತು. "ಜಂಗಮಲೋಲ ಬಸವಣ್ಣ" ಎಂದು ಮೊದಲು ಜಂಗಮರು ಬಸವ ಪುರಾಣ

ಹಾಡಿ ಕೊಂಡಾಡುತ್ತಿದ್ದವರು, ಜಂಗಮದ ವ್ಯಾಖ್ಯಾನವನ್ನು ವಚನ ಸಾಹಿತ್ಯದ ಮೂಲಕ ನಮ್ಮಂತಹವರು ಜಗತ್ತಿಗೆ ಬಿಚ್ಚಿಡ ತೊಡಗುತ್ತಲೇ ಜನರು ಜಾಗೃತರಾದುದನ್ನು ಕಂಡು ಈಗ ಬಸವಣ್ಣನವರನ್ನು ದ್ವೇಷಿಸಲು ಆರಂಭಿಸಿದ್ದಾರೆ. ನಾವು ಕಂಡಂತೆ ವಿರಕ್ತ ಮಠಗಳ ಪ್ರಭಾವ ವಲಯದಲ್ಲಿದ್ದ ಜಂಗಮ ಜಾತಿಯ ಅಯ್ಯನವರು ಸಾಕಷ್ಟು ಬಸವ ನಿಷ್ಠರಾಗಿ ಸಾಹಿತ್ಯ ರಚನೆ ಮಾಡಿದ್ದಾರೆ. ಆದರೆ ಬರುಬರುತ್ತ ತಮ್ಮ ಜಾತಿಯನ್ನು ಗಟ್ಟಿಗೊಳಿಸಲಿಕ್ಕಾಗಿ ಈಗ ಪಂಚಪೀಠಾಧೀಶರ ಅಜ್ಞಾನುವರ್ತಿಗಳಾಗಿ ಅತ್ತ ವಾಲುತ್ತಿದ್ದಾರೆ. ಹೊಸದಾಗಿ ಕೃತ್ರಿಮ ಸಾಹಿತ್ಯ ರಚಿಸುತ್ತಿದ್ದಾರೆ. ಶಿವೈಕ್ಯ ಡಾ.ಜ.ಚ.ನಿ ಇದಕ್ಕೊಂದು ಜ್ವಲಂತ ಉದಾಹರಣೆ. ಅವರು ಆರಂಭದ ದಿನಗಳಲ್ಲಿ ಬರೆದ ಸಾಹಿತ್ಯ ಬಸವಾದಿ ಶರಣರ ಹಿರಿಮೆ-ಗರಿಮೆಗಳನ್ನು ತೆರೆದಿಡಲಿಕ್ಕಾಗಿ ಇದ್ದರೆ ನಂತರ, ಕಡೆಯ ದಿನಗಳಲ್ಲಿ ಬರೆದ ಸಾಹಿತ್ಯ ಬರೀ ಜೊಳ್ಳನ್ನೇ ತುಂಬಿತು.

ಸಮಾನತೆಯ ವಿರೋಧಿಗಳೆಲ್ಲ ಒಂದು ರೀತಿ ಧ್ರುವೀಕರಣ ಹೊಂದುತ್ತ ವಿರಕ್ತರು, ಪಂಚ ಪೀಠಾಧೀಶರು ಮತ್ತು ಲಿಂಗಾಯತರಲ್ಲಿ ಮೇಲ್ಜಾತಿಯವರು ವೀರಶೈವ ಪದಕ್ಕೆ ಜೋತು ಬೀಳುತ್ತ ಬಸವಣ್ಣನವರಿಗೆ ದೀಕ್ಷೆ ಕೊಟ್ಟು ವೀರಶೈವಕ್ಕೆ ಮತಾಂತರಿಸುವ ಕುತಂತ್ರ ಮಾಡಿದರು. ಇಲ್ಲದ ಗುರುವನ್ನು ಸೃಷ್ಟಿಸಿದರು. ಈ ಗುಂಪೇ ಬಸವಣ್ಣನವರು ಶೂದ್ರರನ್ನು ನಮ್ಮ ಧರ್ಮಕ್ಕೆ ಸೇರಿಸಿ ಅದನ್ನು ಶುಚಿಗೆಡಿಸಿದರು ಎಂದು ರಾಗ ಎಳೆಯಲು ಆರಂಭಿಸಿದ್ದು. ಇವರ ಕುತಂತ್ರವನ್ನು ಬಯಲು ಮಾಡಲೆಂದೇ ನಾನು ಆಧಾರ ಸಹಿತವಾಗಿ (1) ಬಸವಣ್ಣನವರಿಗೆ ದೀಕ್ಷಾಗುರುವಿಲ್ಲ (2) ಅವರೇ ಇಷ್ಟಲಿಂಗ ಜನಕರು (3) ಲಿಂಗಾಯತ ಧರ್ಮ ಸ್ಥಾಪಕರು (4) ಲಿಂಗಾಯತ ವೀರಶೈವ ಬೇರೆ ಬೇರೆ (5) ಹಲವಾರು ವೃತ್ತಿ, ಜಾತಿಗಳವರು ಬಂದು ಸೇರಿದಂತೆ ಶೈವಮೂಲದ ಕೆಲವು ವೀರಶೈವರೂ ಬಂದು ಮತಾಂತರ ಹೊಂದಿದ್ದಾರೆ ಎಂಬ ಬಗ್ಗೆ ಗ್ರಂಥಗಳನ್ನು ಬರೆದೆನು ಆದ್ದರಿಂದ ಬಸವ ಪಥಿಕರು ಗಟ್ಟಿ ಧ್ವನಿಯಿಂದ ಹೇಳಬೇಕಾಗಿದೆ, "ಸಮಾನತೆ ಪ್ರತಿಪಾದಿಸುವ ಬಸವ ಧರ್ಮಕ್ಕೆ, ಬಸವ ಸಂಸ್ಥಾಪಿತ ಲಿಂಗಾಯತ ಧರ್ಮಕ್ಕೆ ಬಂದು, ಅದನ್ನು ಪಾಲಿಸದೆ ಇದರ ಶುಚಿತ್ವ ಕೆಡಿಸಿದವರು ವೀರಶೈವರು ಮತ್ತು ವೀರಶೈವಾದಿಗಳು." ಎಂಬುದನ್ನು.

ಸ್ವಾ: 3. "ಈಗಿನ ಕಾಲದಲ್ಲಿ ಬಸವ ತತ್ತ್ವ ಆಚರಿಸುವವರು ಸಮಾಜದ ನಿಂದನೆಗೆ ಗುರಿಯಾಗಬೇಕಾಗುತ್ತದೆ. ಅದಕ್ಕೆ ನಾನೇ ಸಾಕ್ಷಿ" ಎಂದಿದ್ದಾರೆ ಸ್ವಾಮೀಜಿ.

ಸ್ವಾಮಿಗಳ ಮಾತು ನೂರಕ್ಕೆ ನೂರು ಸತ್ಯ; ಏಕೆಂದರೆ ಧರ್ಮವು ಸಮಾಜದ ಮೇಲೆ ನಿಯಂತ್ರಣ ಕಳೆದುಕೊಂಡಿದೆ. (ಮೇಲ್ಜಾತಿಯ) ಶ್ರೀಮಂತ ಭಕ್ತರು ಮತ್ತು ರಾಜಕೀಯ ನೇತಾರರು ಹೇಳಿದಂತೆ ಸ್ವಾಮಿಗಳು ಅರ್ಥಾತ್ ಮಠಾಧೀಶರು ಕೇಳಬೇಕಾಗಿದೆ. ಕೇಳದಿದ್ದರೆ ಅವರು ಮಠದ ಅಧಿಕಾರವನ್ನೇ ಬಿಡಬೇಕಾದ ಸನ್ನಿವೇಶವಿದೆ. ಒಂದು ಶ್ರೀಮಂತ ವಿರಕ್ತಮಠ; ಒಮ್ಮೆ ಅಲ್ಲಿ ಪ್ರಸಾದ ದಾಸೋಹ ನಡೆದಿತ್ತು. ಸ್ವಾಮಿಗಳು ಸ್ವಲ್ಪಸ್ವಲ್ಪ ಬಸವ ತತ್ತ್ವ ಅರ್ಥಾತ್ ಸಮಾನತೆಯ ಕಡೆಗೆ ಒಲಿಯುತ್ತಿದ್ದರು. ಪಂಕ್ತಿಯಲ್ಲಿ ಓರ್ವ ದಲಿತರು ಕುಳಿತಿದ್ದರು. ಮಠದ ಆಡಳಿತ ಸಮಿತಿಯ ಗಣ್ಯರು ನೋಡಿ ಎಬ್ಬಿಸ ಹೋದರಂತೆ. ಆಗ ಸ್ವಾಮಿಗಳು ಅದನ್ನು ತಡೆದಾಗ ಆ ಶ್ರೀಮಂತರು ಏಕ ವಚನದಲ್ಲೇ ಸ್ವಾಮಿಗಳನ್ನು ನಿಂದಿಸಿದರಂತೆ, "ಈ ಮಠದ ಸಂಪ್ರದಾಯ ಪಾಲಿಸಬೇಕಾದ್ದು ನಿಮ್ಮ ಕರ್ತವ್ಯ." ಎಂದು. ಆದರೆ ಇವರು ಮರೆತಿದ್ದಾರೆ ವಿರಕ್ತ ಮಠಾಧೀಶರು ಪಾಲಿಸಬೇಕಾದುದು ಬಸವ ಸಂಪ್ರದಾಯ ಎಂಬುದನ್ನು. ಬಸವ-ಅಲ್ಲಮ ಸಂಪ್ರದಾಯವಾಗಿ ಹೊರಟ ವಿರಕ್ತ ಪರಂಪರೆ ಮಧ್ಯಂತರದಲ್ಲಿ ಶೈವ-ವೈದಿಕ ನಂಬಿಕೆ, ಆಚರಣೆ ಅಳವಡಿಸಿಕೊಂಡು ಹಳಿ ತಪ್ಪಿತು. ಆದ್ದರಿಂದ ಈಗಲಾದರೂ ವಿರಕ್ತ ಮಠಾಧೀಶರು ಪ್ರಾಜ್ಞರಾಗಿ ನಿಂತರೆ ತಮ್ಮ ಮಠಗಳನ್ನು ಶರಣ ಪಥದ ಹಳಿಗಳ ಮೇಲೆ ಕುಳ್ಳಿರಿಸಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ವಿರಕ್ತ ಮಠಾಧೀಶರು ಬಸವ ತತ್ತ್ವ ನಿಷ್ಠರಾಗುತ್ತೇವೆ, ಎಂದರೆ ಸಾಕು, "ಹುಷಾರ್, ಬಾಯಿಬಿಟ್ಟೀರಿ." ಎಂದು ಮಠಗಳಿಗೆ ಸರ್ಪಗಾವಲಾಗಿ ನಿಂತಿದ್ದಾರೆ ಶ್ರೀಮಂತ ಭಕ್ತರು, ರಾಜಕಾರಣಿಗಳು ಮತ್ತು ಮೂಢ ಅನುಯಾಯಿಗಳು.

ಸ್ವಾ: 4 "ಬಸವ ತತ್ತ್ವ ಆಚರಿಸುವವರು ನಿಂದನೆಗೆ ಒಳಗಾಗಬೇಕಾಗುತ್ತದೆ". ಎಂಬುದು

ನಮಗೇನು ಹೊಸದಲ್ಲ. ಏಕೆಂದರೆ ಅದೇ ನಂಜನ್ನು ಕುಡಿದೇ ನಂಜುಂಡರಾಗಿದ್ದೇವೆ. ಆದರೆ ಈ ದಿಶೆಯಲ್ಲಿ ಸ್ವಾಮಿಗಳು ಮೌನವಾಗಿ ಆತ್ಮ ನಿರೀಕ್ಷಣೆ ಮಾಡಿಕೊಳ್ಳುವುದು ಒಳ್ಳೆಯದು. ಏಕೆಂದರೆ ಅವರು ನಿಂದನೆಗೆ ಒಳಗಾದರೆ ಅದಕ್ಕೆ ಕಾರಣ ಕೇವಲ ಬಸವ ತತ್ತ್ವ ಆಚರಣೆ ಮಾತ್ರವಲ್ಲ ಅವರ ಆಕ್ರಮಣಕಾರಿ ಮನೋಭಾವ, ಧನ ಮದ, ಅತಿರೇಕದ ನಡೆ ನುಡಿ, ದುರಾಕಾಂಕ್ಷೆ ಇತ್ಯಾದಿ.

ಮುರುಘಾಮಠ ಬಸವ ಪರಂಪರೆಯ ಮಠ, ಶೂನ್ಯ ಪರಂಪರೆಯ ಮಾರ್ಗಾನುಯಾಯಿಗಳು ಎಂದು ಪುಸ್ತಕಗಳಲ್ಲಿ ರಾಜಾ ರೋಷವಾಗಿ ಬರೆಸಿದ್ದರೂ ಆಚರಣೆಯಲ್ಲಿ ಮಾತ್ರ ಲಿಂ.ಮಲ್ಲಿಕಾರ್ಜುನ ಸ್ವಾಮಿಗಳ ಮಗ್ಗುಲಲ್ಲೇ ಟೀಪಾಯ ಮೇಲೆ ಪಂಚಾಂಗ ಇದ್ದುದನ್ನು ಸ್ವತಃ ಕಂಡಿದ್ದೇವೆ, ತಮಾಷೆ ಸಹ ಮಾಡಿದ್ದೇವೆ. ಇದಕ್ಕೆ ಅವರ ಆಡಳಿತಾಧಿಕಾರಿ ಶ್ರೀ ಬಸವರಾಜನ್ ಮತ್ತು ನಮ್ಮ ರಾಷ್ಟ್ರೀಯ ಬಸವ ದಳ ಅಧ್ಯಕ್ಷ ಶ್ರೀ ಬಿ.ವಿ.ಸತ್ಯನಾರಾಯಣ ಶೆಟ್ಟರು ಸಾಕ್ಷಿ. ಬನ್ನಿ ಗಿಡ, ಚೌಡೇಶ್ವರಿ ಎಲ್ಲವೂ ಪೂಜಿಸಲ್ಪಡುತ್ತಿದ್ದವು. ಈಗಿನ ಶ್ರೀಗಳು ಅವನ್ನೆಲ್ಲ ಬಿಡಿಸಿದ್ದು ಅಭಿನಂದನಾರ್ಹ. ಚಿತ್ರದುರ್ಗದಲ್ಲಿ ಪ್ರವಚನ ಆಗಿ ರಾಷ್ಟ್ರೀಯ ಬಸವ ದಳ ರಚನೆಯಾದ ಮೇಲೆಯೇ ಮಠದಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಬಂದುದು; ಆಮೇಲೆ ಎಷ್ಟೋ ಸಮಯದ ಮೇಲೆ ಮುರುಘೇಶಾಯನಮಃ ಬದಲು ಶ್ರೀಗುರು ಬಸವಲಿಂಗಾಯನಮಃ ಬಂದುದು. ತಾವು ಬಸವ ಪಥಕ್ಕೆ ಬಂದರು, ಮುರುಘಾಮಠವನ್ನು ಈ ಪಥಕ್ಕೆ ತಂದರು ಎಂಬುದು ಸಂತೋಷ ತಂದರೂ ನಂತರ ಶುರುವಾಯಿತು ಆಕ್ರಮಣಕಾರಿ ದಂಡಯಾತ್ರೆ. ಅನ್ಯರ ಆಸ್ತಿ, ಮಠಗಳನ್ನು ಕಬಳಿಸುವ ಸಂಚು, ಗೂಂಡಾಗಿರಿ, ಚಿತ್ರದುರ್ಗ ರಾಷ್ಟ್ರೀಯ ಬಸವ ದಳದವರ ಬಸವ ಮಂಟಪವನ್ನು ಗೂಂಡಾಗಳನ್ನು ನುಗ್ಗಿಸಿ ವಶಪಡಿಸಿಕೊಂಡ ಕ್ರೂರ ರೀತಿ, ಬಸವ ಕಲ್ಯಾಣದಲ್ಲಿ ಜರುಗಿದ ಮೊಟ್ಟ ಮೊದಲ ಕಲ್ಯಾಣ ಪರ್ವದಲ್ಲಿ ಡಿ.ಸಿ.ಎಸ್.ಪಿ.ಪೋಲಿಸ್ ಇಲಾಖೆ ಮತ್ತು ಈಶ್ವರ ಖಂಡ್ರೆ ಮೂಲಕ ನಡೆಸಿದ ದೌರ್ಜನ್ಯ ನಾಗರಿಕ ಪ್ರಜ್ಞೆ ಇರುವವರೆಲ್ಲ ನಾಚಿ ತಲೆ ತಗ್ಗಿಸಬೇಕಾದ ಪ್ರಸಂಗಗಳು. ಅತ್ಯಂತ ವೇಗದಲ್ಲಿ ಬೆಳೆಯುತ್ತಿದ್ದ ರಾಷ್ಟ್ರೀಯ ಬಸವ ದಳಗಳನ್ನು ಒಡೆದು ಛಿದ್ರಗೊಳಿಸಿದ್ದು ಇವೆಲ್ಲ ನಿಂದೆ ತರದೆ ಕೀರ್ತಿ ತರುವಂತಹ ಕಾರ್ಯಗಳೆ?

ಲಿಂಗದೇವ ವಚನಾಂಕಿತ ಸಲುವಾಗಿ ಕೊಟ್ಟ ಹಿಂಸೆ ಎಷ್ಟು; ಹಾಕಿದ ಕ್ರಿಮಿನಲ್ ಮತ್ತು ಸಿವಿಲ್ ಕೇಸುಗಳೆಷ್ಟು? ನಮಗೆ ಇವರು ಬಸವ ತತ್ತ್ವ ಕಲಿಸಬೇಕೆ? ಬಸವಣ್ಣನವರಿಗೆ ಆದಿ ಶರಣರಿಗಾಗಿ ಜೀವನ ಮುಡುಪಿಟ್ಟ ನಮಗೆ ಬಸವ ನಿಷ್ಠೆಯ ಪಾಠ ಕಲಿಸಲು ಬರುವರೆ? ಅನುಭವ ಮಂಟಪದಲ್ಲಿ, ವಿಚಾರ ಭಿನ್ನಾಭಿಪ್ರಾಯಗಳಿದ್ದರೆ ಸಂವಾದದ ಮೂಲಕ ಸ್ಪಷ್ಟ ಪಡಿಸಿಕೊಳ್ಳುತ್ತಿದ್ದರೇ ವಿನಾ ಗೂಂಡಾಗಿರಿ ಮಾಡುತ್ತಿರಲಿಲ್ಲ. 12ನೆಯ ಶತಮಾನದಲ್ಲಿ ಬಸವ ಧರ್ಮವು ಸಂಸ್ಥಾಪನೆಯಾಗಿರುವಾಗ, ತಾವು ಅದರ ಸ್ಥಾಪಕರೆಂದು ಪ್ರಚಾರ ಕೊಟ್ಟುಕೊಳ್ಳುವುದು ಹಾಸ್ಯಾಸ್ಪದ, ಅಸಹ್ಯ ಮತ್ತು ನಿಂದನೀಯವಲ್ಲವೇ? ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದೀಕ್ಷೆ ಎಲ್ಲರಿಗೂ ಉಂಟು; ದೀಕ್ಷಾನಂತರವೂ ಮಾಂಸಾಹಾರವು ನಿಷಿದ್ಧವಲ್ಲ. ಆಹಾರವು ವೈಯಕ್ತಿಕ ಆಯ್ಕೆ ಎನ್ನುವುದು ಬಸವಣ್ಣನಿಗೆ, ಬಸವ ಧರ್ಮಕ್ಕೆ ಮಾಡಿದ ಅಪಚಾರ ಮತ್ತು ಅವಮಾನವಲ್ಲವೆ?. ಶ್ರೀಮಂತ ಸಂಪ್ರದಾಯ ಮಠದ ಸ್ವಾಮಿಗಳ ಹೇಳಿಕೆ ಎಂದು ಲಿಂಗಾಯತ ಸಮಾಜದ ಗಣ್ಯರು ಅಂತರಂಗದಲ್ಲಿ ಇಷ್ಟವಿಲ್ಲದಿದ್ದರೂ ಯಾವ ಪ್ರತಿಭಟನೆಯನ್ನೂ ಮಾಡದೆ ಮೌನವಾಗಿ ಸಹಿಸಿಕೊಂಡರು. ಅದೇ ನಾವು ತತ್ತ್ವ ಶುದ್ಧೀಕರಣಕ್ಕೆ ಅತ್ಯಗತ್ಯ ಎಂದು ಸೈದ್ಧಾಂತಿಕ ಹಿನ್ನೆಲೆಯಲ್ಲಿ ವಚನಾಂಕಿತ ಬದಲಾವಣೆ ಮಾಡಿ ಸ್ಥಾವರ ಸೂಚಕ ಕೂಡಲ ಸಂಗಮದೇವನ ಬದಲು ಜಂಗಮ ಲಿಂಗ ಸೂಚಕ ಲಿಂಗದೇವವನ್ನು ಅಳವಡಿಸಿದಾಗ ಅದರ ಮಹತ್ವವನ್ನು ಅರಿತುಕೊಳ್ಳುವ ಸೌಜನ್ಯವೂ ಇಲ್ಲದೆ ಗದ್ದಲ, ಪ್ರತಿಭಟನೆ, ಗೂಂಡಾಗಿರಿ ಮಾಡಿಸಿದರಲ್ಲ. ಇದು ನಿಂದನೀಯವಲ್ಲವೆ?

ಬಸವ ತತ್ತ್ವ, ಬಸವ ಧರ್ಮವು ಬಲಗೊಳ್ಳಬೇಕು ಎಂಬ ಪ್ರಾಮಾಣಿಕ ಕಳಕಳಿ ಇದ್ದರೆ ಇದಕ್ಕಾಗಿ ಮಿಡಿಯುತ್ತಿರುವವರು ಯಾರೇ ಇರಲಿ ಪರಸ್ಪರ ಕೆಸರು ಎರಚಲು ಹೋಗಬಾರದು. ಇಬ್ಬರು ನಿಂತು, "ನೀನು ಅಯೋಗ್ಯ, ನೀನು ಅಯೋಗ್ಯ" ಎಂದು ಪರಸ್ಪರ ಬೈದಾಡುತ್ತಿದ್ದರೆ ಅದನ್ನು ನಿಂತು ನೋಡುವವರು "ಗೊತ್ತಾಯ್ತು ಬಿಡಿ, ನೀವಿಬ್ಬರೂ ಅಯೋಗ್ಯರೆ" ಎಂದು ಉದ್ಗರಿಸುತ್ತಾರೆ. ಇನ್ನೊಬ್ಬರ ತೇಜೋವಧೆ ಮಾಡಿ ತನ್ನ ಪ್ರಭಾವವನ್ನು ಬೆಳೆಸಿಕೊಳ್ಳಬೇಕಾಗಿಲ್ಲ; ತಾನು ವಿಧಾಯಕ ಕಾರ್ಯ ಮಾಡಿ ಪ್ರಭಾವವನ್ನು ವಿಸ್ತರಿಸಿಕೊಳ್ಳಬೇಕು. ಚಿತ್ರದುರ್ಗ ಶ್ರೀಗಳು, ಅವರ ಬಸವ ಕೇಂದ್ರಗಳವರು ಈವರೆಗೂ ನಮಗೆ, ರಾಷ್ಟ್ರೀಯ

ಬಸವ ದಳಗಳವರಿಗೆ ಕೊಟ್ಟ ಯಾತನೆ ಊಹಿಸಲೂ ಅಸಾಧ್ಯ. ಈಗ ಕೆಲವಾರು ತಿಂಗಳಿಂದ ಯಾಕೋ ತಣ್ಣಗಿದ್ದಾರೆ. ಬಹುಶಃ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ, ಈಶ್ವರ ಖಂಡ್ರೆ ಮುಂತಾದವರಿಗೆ ಚುನಾವಣೆ ನಂತರ ವಿವೇಕೋದಯವಾದಂತೆ ತೋರುತ್ತದೆ. ಮಾಡಬೇಕಾದ ಕೆಲಸಗಳಿಗೇ ಎಷ್ಟು ಜನರಾದರೂ ಸಾಲದು ಎಂದಿರುವಾಗ ಕಟ್ಟುವ ಕೆಲಸ ಬಿಟ್ಟು ಕೆಡಿಸುವ ಕೆಲಸಕ್ಕೆ ಶ್ರೀಗಳು, ಬಸವ ಕೇಂದ್ರಗಳವರು ವಿರಾಮಕೊಡುವುದು ಒಳ್ಳೆಯದು. ಆದ್ದರಿಂದ, ನಿಂದನೆಗೆ ಒಳಗಾಗಲು ಕೇವಲ ತಮ್ಮ ಬಸವ ತತ್ತ್ವ ಆಚರಣೆಯೇ ಕಾರಣ ಎಂದು ಬಸವ ತತ್ತ್ವಕ್ಕೆ ಮಸಿ ಹಚ್ಚುವ ಬದಲು ತಮ್ಮ ಇನ್ನಿತರ ನಡೆ, ನುಡಿ, ಹೇಳಿಕೆ, ಆಚರಣೆಗಳೂ ಕಾರಣ ಎಂಬುದನ್ನು ಶ್ರೀಗಳು ಆತ್ಮಾವಲೋಕನ ಮಾಡಿಕೊಂಡು ತಿಳಿದುಕೊಳ್ಳುವುದು, ತಿದ್ದಿಕೊಳ್ಳುವುದು ಅಗತ್ಯ.

ಸ್ವಾ: 5. ಸಮಾಜದಲ್ಲಿ ಒಳ್ಳೆಯ ಕೆಲಸ ಮಾಡುವವರು ಕೆಟ್ಟ ಮಾತುಗಳನ್ನು ಕೇಳಬೇಕಾಗುತ್ತದೆ.
ಅಹುದು ; ಇದು ಜಗತ್ತಿನ ನಡೆ. ಆದರೆ ಕೆಟ್ಟ ಮಾತುಗಳನ್ನು ಆಡುವವರು ಯಾರು? ಎಂಬುದರ ಮೇಲೆ ವ್ಯಕ್ತಿ ಮಾಡಿದ ಕೆಲಸ ಒಳ್ಳೆಯದೋ ಕೆಟ್ಟದೋ ನಿರ್ಧಾರವಾಗುತ್ತದೆ. ಪ್ರಾಮಾಣಿಕರು, ಸಾತ್ವಿಕರು, ಸಜ್ಜನರೂ ಆದ ಶರಣರು ಒಳ್ಳೆಯ ಕೆಲಸಕ್ಕೆ ಎಂದೂ ಕೆಟ್ಟ ಮಾತು ಆಡರು. ಸಂಪ್ರದಾಯವಾದಿ, ಜಾತಿವಾದಿ ಜನರು ಕೆಟ್ಟ ಮಾತು ಆಡುವಾಗ ನಿಜ ಶರಣರು ಸತ್ಯವಾದಿಗಳ ಬೆಂಬಲಕ್ಕೆ ನಿಲ್ಲುತ್ತಾರೆ. ಇದು ನಮ್ಮ ಅನುಭವ; ಇದು ಎಲ್ಲ ಮಹಾತ್ಮರ ಅನುಭವವೂ ಅಹುದು.

ಸ್ವಾ: 6. ಈ ದೇಶದಲ್ಲಿ ಕ್ರಾಂತಿಕಾರಿಗಳನ್ನು ಪುರಾಣ ಪುರುಷರನ್ನಾಗಿ ಮಾಡಲಾಗುತ್ತಿದೆ. ಸ್ವಾಮಿಗಳ ಈ ಮಾತು ಸತ್ಯ ಸಂಗತಿಯೇ ಒಬ್ಬ ಸ್ವತಂತ್ರ ವಿಚಾರವಾದಿ ಕ್ರಾಂತಿಕಾರಿಯನ್ನು ನಾಶ ಮಾಡುವ ವಿಧಾನವೇ ಅವನನ್ನು ಪೌರಾಣಿಕ ವ್ಯಕ್ತಿಯನ್ನಾಗಿ ಮಾಡುವುದು. ಪುರಾಣ ಶೈಲಿಯನ್ನು ಬಸವಾದಿ ಪ್ರಮಥರು ಒಪ್ಪಲಿಲ್ಲ ಆದರೆ ಅವರ ಬಗ್ಗೆಯೇ ಪುರಾಣ-ಕಾವ್ಯಗಳು ರಚನೆಯಾದುದು ಒಂದು ವಿಪರ್ಯಾಸ. ಪುರಾಣಗಳಲ್ಲಿ ನಂದಿಯ ಅವತಾರ ಎಂದು ಎನ್ನುತ್ತಲೇ ಕ್ರಾಂತಿಪುರುಷ ಬಸವಣ್ಣನವರನ್ನು ನಂದಿಯನ್ನಾಗಿ ಜಡಗಟ್ಟಿಸಲಾಯಿತು. ಕಲ್ಯಾಣದ ಬಸವಣ್ಣ, ಉಳವಿ ಚನ್ನಬಸವಣ್ಣ ಎಲ್ಲರೂ ಎತ್ತುಗಳೇ ಆಗಿಬಿಟ್ಟರು. ನನಗೆ ಹಾಗೆಯೇ ಆಲೋಚಿಸುವಾಗ ಲಿಂಗಾಯತರಷ್ಟು ದಡ್ಡ ಜನ, ಅಜ್ಞಾನಿಗಳು ಎಲ್ಲಿಯೂ ಸಿಗಲಿಕ್ಕಿಲ್ಲ ಎನ್ನಿಸುತ್ತದೆ.

ಪರ್ಯಾಯ ವ್ಯವಸ್ಥೆಯೊಂದನ್ನು ಇಂದು ರೂಪಿಸಲೇ ಬೇಕಾಗಿದೆ. ಮಗುವು ಮಣ್ಣು ತಿನ್ನುವಾಗ ಅದನ್ನು ಬಿಡಿಸಿ ಹಣ್ಣನ್ನು ಕೊಡಲೇಬೇಕು. ಹಾಗೆ, ನಂದಿಯ ಮೂರ್ತಿಗಳಿದ್ದಲ್ಲಿ ಅವನ್ನು ತೆಗೆದು ಐತಿಹಾಸಿಕ ಬಸವಣ್ಣನವರ ಮೂರ್ತಿಗಳನ್ನು ಕೂರಿಸಬೇಕು. ಬೌದ್ಧಿಕ ತರಬೇತಿ, ವಚನ ಸಾಹಿತ್ಯ ಸಂಸ್ಕಾರ ಇಲ್ಲದ ಜನರು ನಂದಿಯನ್ನು ತೆಗೆಯಲು ಒಪ್ಪದಿದ್ದರೆ ಅದರ ಮೇಲೆ ಬಸವಣ್ಣನವರ ಮುಖ ಇರುವ ಹಿತ್ತಾಳೆ, ಬೆಳ್ಳಿಯ ಮೂರ್ತಿಗಳನ್ನಾದರೂ ಇಡಬೇಕು. ಎಲ್ಲ ನಂದಿಯ ಗುಡಿಗಳಲ್ಲಿ ಮೊದಲು ಬಸವಣ್ಣನವರ ಭಾವಚಿತ್ರ ಹಾಕಿಸಬೇಕು.

ಧಾರವಾಡದ ಉಳವಿ ಚನ್ನಬಸವಣ್ಣನವರ ಗುಡಿಗೆ ದಿ.1-6-2005ರಂದು ಹೋದಾಗ ಮಹಾದ್ವಾರದ ಮೇಲೆ ದೊಡ್ಡ ನಂದಿ ನೋಡಿ, "ಚನ್ನಬಸವಣ್ಣ, ಬಸವಣ್ಣ ಎತ್ತುಗಳಲ್ಲ" ಎಂದು ಹೇಳಿದಾಗ ಸೆಕ್ರೆಟರಿ "ಗದಗಿನ ಮಠದ ಹೆಬ್ಬಾಗಿಲ ಮೇಲೆ ನಂದಿ ಇದೆ. ಅದನ್ನು ನೋಡಿಯೇ ನಾವು ಕೂರಿಸಿದ್ದೇವೆ." ಎಂದರು. ಆದ್ದರಿಂದ ಗದಗಿನ ತೋಂಟದಾರ್ಯ ಜಗದ್ಗುರುಗಳು ಬಸವ ಭಕ್ತರನ್ನು ಎತ್ತಿನ ಮಕ್ಕಳನ್ನಾಗಿ ಮಾಡದೆ ಬಸವ ಸಂತಾನವನ್ನಾಗಿ ಮಾಡಬೇಕಾಗಿದೆ. ಮೊದಲು ಆ ಎತ್ತನ್ನು ತೆಗೆದು ಗುರು ಬಸವಣ್ಣನವರ ಮೂರ್ತಿಯನ್ನು ಕೂರಿಸಲಿ. ಹಾವೇರಿ ನಗರದಲ್ಲಿ ಕುರುಬ ಸಮಾಜ ಬಾಂಧವರು ಕಾಗಿನೆಲೆಗೆ ಮಾರ್ಗ ಸೂಚಿಸುವ ಒಂದು ಕಮಾನು ಮಾಡಿದ್ದಾರೆ. ಅದರ ಮೇಲೆ ಶ್ರೀ ಕನಕದಾಸರ ಮತ್ತು ಶ್ರೀ ಬಸವಣ್ಣನವರ ಮೂರ್ತಿಗಳನ್ನಿಟ್ಟಿದ್ದಾರೆ. ಅವರ ಪ್ರಜ್ಞಾವಂತಿಕೆ, ಹೃದಯ ವೈಶಾಲ್ಯ ನೋಡಿ ಸಂತೋಷವೆನಿಸಿತು.

ಪಂಚಪೀಠಾಧೀಶರು ಬಸವ ತತ್ತ್ವದ ವಿರೋಧಿಗಳು ಎಂಬುದು ಸ್ಪಷ್ಟ ಸತ್ಯ. ವಿರಕ್ತ ಮಠಾಧೀಶರಾದರೂ ಪ್ರಾಮಾಣಿಕವಾಗಿ ಬಸವ ಪಥದಲ್ಲಿ ಸಾಗಲಿ. ಶ್ರೀಮಂತ ಸಾಂಪ್ರದಾಯಿಕ ಭಕ್ತರ ಹಿಡಿತದಲ್ಲಿ ಬಹುಪಾಲು ಮಠಾಧೀಶರು ಇರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೂ ಇವರೆಲ್ಲ

ಒಂದಾಗಿ ದಿಟ್ಟ ಹೆಜ್ಜೆಯನ್ನಿಟ್ಟು ಮುನ್ನಡೆದರೆ ಭಕ್ತರು ಅನುಸರಿಸಬಹುದು ಇಲ್ಲವೇ ದೂರವಾಗಬಹುದು. ಇದಕ್ಕೆಲ್ಲ ಹೆದರಬಾರದು. ಧರ್ಮಗುರು ಬಸವಣ್ಣನವರು ಬೇಕೋ ಮಠ ಬೇಕೋ ಅಥವಾ ಭಕ್ತರು ಬೇಕೋ? ಎರಡೂ ಸಹಕಾರಿಯಾಗಿದ್ದರೆ ಇರಲಿ; ಇಲ್ಲದಿದ್ದರೆ ಬಸವ ಗುರುವನ್ನೇ ಆಯ್ದುಕೊಳ್ಳಲಿ; ಇಂಥ ತತ್ತ್ವ ನಿಷ್ಠೆ ವಿರಕ್ತರಲ್ಲಿ, ಅವರನ್ನು ಆಶ್ರಯಿಸಿದ ಸಾಹಿತಿಗಳಲ್ಲಿ ಬಂದರೆ ನಿಜಕ್ಕೂ ಸಮಾಜದಲ್ಲಿ ಪರಿವರ್ತನೆಯ ವಿದ್ಯುತ್ ಸಂಚಾರವಾಗದೆ ಇರದು.

ಬಸವ ಕಂದಳ ವಚನಗಳು

೧. ನಿನ್ನೊಳಗೆ ಬಸವಣ್ಣ, ಬಸವಣ್ಣನೊಳಗೆ ನೀನು
ಬಿಚ್ಚಿ ಬೇರಾಗದಂತೆ ಒಂದಾಗಿಪ್ಪಿರಯ್ಯಾ
ಪತಿ, ಪಿತರ ಸಮರಸವ ಕಂಡ ನಾನು
ಬಸವಲಿಂಗಾ, ಬಸವಲಿಂಗಾ, ಬಸವಲಿಂಗ
ಎನ್ನುತ್ತಾ ನಿಮ್ಮೊಳಗೆ ಅಡಗಿದೆನಯ್ಯಾ
ಬಸವ ಕಂದಳ ಪ್ರಿಯ ಸರ್ವೇಶ ಪ್ರಭುದೇವಯ್ಯಾ

೨. ಬಸವ ತತ್ತ್ವವು ಸುಲಿದ ಬಾಳೆಯ ಹಣ್ಣು
ಅದನುಂಡರೆ ತೆರೆವುದು ಅರಿವಿನ ಕಣ್ಣು
ವಾಸಿಯಾಗುವುದು ಭವರೋಗದ ಹುಣ್ಣು
ಬಸವ ತತ್ತ್ವವ ಬಿಟ್ಟರೆ ಮುಕ್ಕಿದಂತೆ ಮಣ್ಣು
ಬಸವ ಕಂದಳ ಪ್ರೀಯ ಸರ್ವೇಶ ಪ್ರಭುವೆ
ಬಸವ ಕಂದರಾಗುವರು ನಿನ್ನ ಪೆಣ್ಣು

೩. ಬಸವ ತತ್ತ್ವಗಳ ಪಸರಿಸಲೆಂದೇ ಜನ್ಮ ತಳೆದಿರಿ
ಬಸವ ಗುರುವಿನ ಸೇವೆಗಾಗಿ ಸವೆದು ಬದುಕಿದಿರಿ
ಬಸವ ಜ್ಯೋತಿಯನ್ನು ಮನೆ-ಮನಗಳಲ್ಲೂ ಹಚ್ಚಿದಿರಿ
ಬಸವ ಪ್ರವಚನ ಪಿತಾಮಹರೆಂದೇ ಖ್ಯಾತರಾದಿರಿ
ಬಸವ ಧರ್ಮಪೀಠಕ್ಕೆ ಪ್ರಥಮ ಮಹಾಜಗದ್ಗುರುವಾದಿರಿ
ಬಸವ ಲಿಂಗನು, ಬೆಸನು ಮುಗಿಯಿತು ಬಾ ಎಂದು ಕರೆದೊಡೆ
ಬಸವ ಕಂದಳ ಪ್ರಿಯ ಸರ್ವೇಶ ಪ್ರಭುವಿನ ನಿರೂಪಕ್ಕೆ
ಬಸವ ಪ್ರಸಾದವೆಂದು ಲಿಂಗಾನಂದದಿಂದ ಲಿಂಗದಲ್ಲಿ ಲೀನವಾದಿರಿ
ಬಸವ ಜಗತ್ತಿನಲ್ಲಿ ಎಂದೆಂದೂ ಅಮರರಾಗುಳ್ಳಿದಿರಿ

೪. ಭಾನು ವಾರಗಳಂದು ರಾಷ್ಟ್ರೀಯ ಬಸವದಳಕ್ಕೆ ಬನ್ನಿರಿ
ಶರಣ ಶರಣೆಯರೊಡನೆ ಅನುಭಾವವ ಮಾಡಿರಿ
ಬಸವ ತತ್ವಗಳನು ನಿಮ್ಮದಾಗಿಸಿಕೊಳ್ಳಿರಿ
ಗುರು ಬಸವ ತಂದೆ ಒಪ್ಪುವಂತೆ ಬಾಳಿರಿ
ಸರ್ವೇಶ ಪ್ರಭುವು ನಿಮ್ಮವನೆಂದು ತಿಳಿದುಕೊಳ್ಳಿರಿ

- ಬಸವ ಕಂದ, ಸರೋಜಮ್ಮ ನಾಗರಾಜು
ರಾಷ್ಟ್ರೀಯ ಬಸವ ದಳ, ಮೈಸೂರು

ಶರಣ ಸಂಸ್ಕೃತಿಯ ಸಂರಕ್ಷಣೆ

ಸನ್ಮಾನ್ಯ ಅಧ್ಯಕ್ಷರು ಮತ್ತು ಸದಸ್ಯರು ಉಳವಿ
(ಚನ್ನ)ಬಸವೇಶ್ವರ ದೇವಸ್ಥಾನ(ರಿ)ಟ್ರಸ್ಟ್ ಕಮಿಟಿ, ಧಾರವಾಡ
ಇವರಿಗೆ ಹೃತ್ಪೂರ್ವಕವಾದ,

ಬಸವ ಸ್ಮರಣಪೂರ್ವಕ ಶರಣು ಶರಣಾರ್ಥಿ. ತಮ್ಮ ಆಡಳಿತದ ಉಳವಿ ಚನ್ನಬಸವೇಶ್ವರ ದೇವಾಲಯ ಚೆನ್ನಾಗಿ ಅಭಿವೃದ್ಧಿ ಹೊಂದುತ್ತಿರುವುದು ಸಂತೋಷದ ಸಂಗತಿ. ಕೆಲವಾರು ವರ್ಷಗಳ ಹಿಂದೆ ನೋಡಿದ್ದೆ. ಪುನಃ ನನಗೆ ದಿ.1-6-2005ರಂದು ಸಂದರ್ಶಿಸುವ ಅವಕಾಶ ದೊರೆಯಿತು. ಸುಜ್ಞಾನವು ನೆಲೆಗೊಳ್ಳದ ಲಿಂಗಾಯತ ಸಮಾಜವು ಇಂದಿಗೂ ಧರ್ಮ ಗುರು ಬಸವಣ್ಣ, ಷಟಸ್ಥಲ ಜ್ಞಾನಿ ಚನ್ನಬಸವಣ್ಣನವರನ್ನು 'ಎತ್ತು' ಎಂದೇ ಪೂಜಿಸುವಷ್ಟು ಅಜ್ಞಾನದಲ್ಲಿರುವಾಗ ನಂದಿಯ ಮುಖದ ಹಿಂದೆ ಚನ್ನಬಸವಣ್ಣನವರ ಅಮೃತ ಶಿಲಾ ಮೂರ್ತಿಯನ್ನು ಪ್ರತಿಷ್ಠಾಪಿಸಿರುವುದು ನಮಗೆ ತುಂಬಾ ಸಂತೋಷ ತಂದಿತು. ಅದೇ ರೀತಿ ವಚನ ಸಾಹಿತ್ಯವನ್ನು ಸಂರಕ್ಷಿಸಿದ ವೀರ ಮಾತೆ ಅಕ್ಕನಾಗಲಾಂಬಿಕೆಯನ್ನು ಸಹ ಮೂರ್ತಿಯ ರೂಪದಲ್ಲಿ ನೆಲೆಗೊಳಿಸಿರುವುದು ತುಂಬಾ ಸಂತೋಷ ತಂದಿದೆ. ಇದಕ್ಕಾಗಿ ಸಮಿತಿಯವರಿಗೆ ಅಭಿನಂದನೆಗಳು. ಇನ್ನೂ ಕೆಲವು ಬದಲಾವಣೆ ಅಗತ್ಯವಿವೆ.

1. ಓಂಕಾರವನ್ನು ನಾವು ದೃಢವಾಗಿ ನಂಬುತ್ತೇವಾದರೂ ಓಂಕಾರ ರೂಪಿ ಪರಮಾತ್ಮನ ಕುರುಹು ಇಷ್ಟಲಿಂಗ. ಆದ್ದರಿಂದ ಮಹಾದ್ವಾರ, ದೇವಾಲಯಗಳ ವಿವಿಧ ಸ್ಥಳಗಳಲ್ಲಿ ಷಟಸ್ಥಲದ ಕುರುಹಾದ ಷಟ್‌ಕೋನ ಸಹಿತ ಇಷ್ಟಲಿಂಗ ಇರುವ ಷಟ್‌ಸ್ಥಲ ಧ್ವಜವನ್ನು ಹಾಕಿಸಿರಿ. ಲಿಂಗಾಯತ ಧರ್ಮದ ಮುಖ್ಯ ಲಾಂಛನವೇ ಇಷ್ಟಲಿಂಗ ಎಂಬುದನ್ನು ಎಂಥಾ ಅಜ್ಞ ಲಿಂಗಾಯತರೂ ತಿಳಿದಿರುವರಲ್ಲವೇ ?

2. ಹಿಂದೆ, ಅಂದರೆ ವಚನ ಸಾಹಿತ್ಯವು ಲಭ್ಯವಾಗುವ ಮೊದಲು ಬಸವ ಪುರಾಣವಷ್ಟೇ ಲಭ್ಯವಿದ್ದಾಗ ಬಸವಣ್ಣ, ಚನ್ನ ಬಸವಣ್ಣ ಎಂದರೆ ಎತ್ತು(ನಂದಿ) ಎಂಬ ಅಜ್ಞಾನ ತುಂಬಿತ್ತು. ಲಿಂ.ಶರಣ.ಫ.ಗು.ಹಳಕಟ್ಟಿಯವರ ಪರಿಶ್ರಮದಿಂದ ಇವರೆಲ್ಲರ ವಚನಗಳು ಲಭ್ಯವಾದ ಮೇಲೆ ಇವರು ಐತಿಹಾಸಿಕ ಮಹಾಪುರುಷರು ಎಂಬುದು ಮನದಟ್ಟಾಗುತ್ತಿದೆ. ಆದ್ದರಿಂದ ದೇವಾಲಯದ ದ್ವಾರದ ಬಳಿ ನಂದಿಯನ್ನು ಕೂರಿಸಿ ನಮ್ಮ ಸಮಾಜದ ಅಜ್ಞಾನವನ್ನು ಬಯಲುಗೊಳಿಸುವ ಬದಲು ಚನ್ನಬಸವಣ್ಣನವರ ಮೂರ್ತಿಯನ್ನೇ ಉಳವಿಯಲ್ಲಿ ಕೂರಿಸಿದಂತೆ ನಿರ್ಮಿಸಿದರೆ ಒಳ್ಳೆಯದು. ಮಧ್ಯೆ ಬಸವಣ್ಣನವರು, ಒಂದು ಮಗ್ಗುಲಿಗೆ ಚನ್ನಬಸವಣ್ಣ, ಇನ್ನೊಂದು ಮಗ್ಗುಲಿಗೆ ಅಕ್ಕನಾಗಲಾಂಬಿಕೆ-ಹೀಗೆ ಮೂರು ಜನ ಶರಣರ ಮೂರ್ತಿಗಳು ಪ್ರಸ್ತುತ ದೇವಾಲಯಕ್ಕೆ ಸೂಕ್ತ.

3. ಟ್ರಸ್ಟಿನ ಹೆಸರು ಉಳವಿ ಬಸವಣ್ಣ ದೇವಸ್ಥಾನ ಟ್ರಸ್ಟ್ ಎಂಬುದಾಗಿ ಇದೆಯಲ್ಲವೆ? ಉಳವಿ ಬಸವಣ್ಣ ಎಂದರೆ ಚನ್ನಬಸವಣ್ಣ, ಕಲ್ಯಾಣದ ಬಸವಣ್ಣ ಎಂದರೆ ಧರ್ಮಗುರು ಬಸವಣ್ಣ ಎಂದು ಹಿಂದಿನವರು ಭಾವಿಸಿದ್ದರು. ಈ ಗೊಂದಲವಿನ್ನೇಕೆ? ಉಳವಿ ಚನ್ನಬಸವೇಶ್ವರ ದೇವಾಲಯ ಟ್ರಸ್ಟ್ ಎಂದೇ ಬದಲಿಸುವುದು ಅತ್ಯಂತ ಸೂಕ್ತ.

4. 63 ಪುರಾತನರು ತಮಿಳು ನಾಡಿನ ಶಿವಭಕ್ತರು. ಅವರ ನಂಬಿಕೆ, ಆಚಾರ ವಿಚಾರಗಳು ಲಿಂಗಾಯತ ಸಂಸ್ಕೃತಿಗೆ ಹೊಂದವು. ಅವರಲ್ಲಿ ಅನೇಕರು ಮಾಂಸಾಹಾರಿಗಳು.

ಸಿರಿಯಾಳ ಚೆಂಗಳೆಯಂತೆ ಶಿಸುವಧೆಯ ಮಾಡಿದವನಲ್ಲ
ನಂಬಿ-ಬಲ್ಲಾಳರಂತೆ ಕಾಮುಕತನವ ಮಾಡಿದವನಲ್ಲ
ಬೊಮ್ಮಯ್ಯ - ಕಣ್ಣಪ್ಪರಂತೆ ಜೀವ ಹಿಂಸೆಯ ಮಾಡಿದವನಲ್ಲ
ಗುಹೇಶ್ವರಾ, ನಿಮ್ಮ ಶರಣರಿಗಿಕ್ಕಿದ ತೊಡರು ಸಂಗನ ಬಸವಣ್ಣ.

ಈ ಆರು ಜನರು 63 ಪುರಾತನರ ಪಟ್ಟಿಯಲ್ಲಿರುವವರು. ಇವು ಕನ್ನಡ ಸಂಸ್ಕೃತಿಯ ಹೆಸರು, ಇವೇ ಹೆಸರುಗಳು ನಿಮ್ಮ ದೇವಾಲಯದಲ್ಲಿ ತಮಿಳು ಭಾಷೆಯಲ್ಲಿವೆ. ಪುರಾತನರು ಬೇರೆ; ಪುರಾತರು ಬೇರೆ. ನಮ್ಮ ಶರಣರನ್ನು ವಚನಗಳಲ್ಲಿ ಪುರಾತರು ಎಂದು ಕರೆಯಲಾಗಿದೆ. ಎರಡರ ವ್ಯತ್ಯಾಸವರಿಯದೆ 63

ತಮಿಳು ನಾಡಿನ ಪುರಾತನರು ನಮ್ಮ ಶರಣರಿಗೆ ಗೌರವಾರ್ಹರೆಂದು ಅಜ್ಞರು ಭಾವಿಸಿದ್ದಾರೆ. ಈ ಬಗ್ಗೆ ಡಾ. ಕಲಬುರ್ಗಿಯವರಂಥ ಸಂಶೋಧಕರನ್ನು ಕೇಳಿರಿ ಎಂದು ವಿವರಿಸ ಹೋದಾಗ, "ಕಲಬುರ್ಗಿಯ ಚರಿತ್ರೆ ಏನು ಎಂದು ನನಗೆ ಗೊತ್ತಿದೆ" ಎಂದು ನಿಮ್ಮ ಸಂಸ್ಥೆಯ ಪದಾಧಿಕಾರಿಗಳು ದಿ.1 ರಂದು ಹರಿಹಾಯ್ದರು. ಅಧ್ಯಯನ ಮಾಡಬೇಕಾಗಿರುವುದು ಕಲಬುರ್ಗಿಯವರ ಚರಿತ್ರೆಯನ್ನಲ್ಲ; ಶರಣರ ಚರಿತ್ರೆಗಳನ್ನು. ಉಳವಿಯ ಗೋಪುರದಲ್ಲಿ ತಮಿಳು ಪುರಾತನರ ಮೂರ್ತಿ ಮಾಡದೆ ಬಸವಾದಿ ಪ್ರಮಥರಾಗಿ ಸಾಗಿ ಬಂದ ಶರಣ ಪರಂಪರೆಯ ಶರಣರ ವಿಗ್ರಹ ಮಾಡಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಬಸವಣ್ಣನವರೇ ಆದಿ ಪ್ರಮಥರಾಗಿ ಸಾಗಿ ಬಂದ ಶರಣ ಪರಂಪರೆಯ 63 ಶರಣರ(ಪುರಾತರ) ಪಟ್ಟಿಯನ್ನು ಕಳಿಸಿದ್ದೇನೆ. ಶ್ರೀ ಸಿದ್ಧರಾಮೇಶ್ವರರ ಸ್ತೋತ್ರ ತ್ರಿವಿಧಿಯಿಂದ ಈ ಹೆಸರುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆದ್ದರಿಂದ ಗೂಡುಗಳ ಮುಂದಿರುವ ತಮಿಳು ಹೆಸರುಗಳನ್ನು ತೆಗೆದು ಈ ಶರಣರ ಹೆಸರನ್ನು ಬರೆಸಬೇಕೆಂದು ವಿನಂತಿಸುತ್ತೇವೆ. ಈಗ ನಾವು ಬಸವ ಕಲ್ಯಾಣದಲ್ಲಿ ಈ ಎಲ್ಲ ಶರಣರ ಚಿಕ್ಕ ಚಿಕ್ಕ ಮೂರ್ತಿ ಮಾಡಿಸುತ್ತಿದ್ದೇವೆ. ನೀವು ಸಹ ಗೂಡಿನ ಅಳತೆಗೆ ತಕ್ಕಂತೆ ಈ ಶರಣರ ಮೂರ್ತಿ ಮಾಡಿಸುವುದಾದರೆ ಆ ಕಲಾವಿದರನ್ನು ನಿಮಗೆ ಪರಿಚಯ ಮಾಡಿಸಬಹುದು. ಖರ್ಚು ಬಹಳ ಬರದು. ನಾವು ನಿಮ್ಮ ವಿರೋಧಿಗಳಲ್ಲ; ಗುಡಿಯ ಯಾವುದೇ ಅಧಿಕಾರಕ್ಕಾಗಿ ಪೈಪೋಟಿ ಮಾಡುವವರೂ ಅಲ್ಲ. ಶರಣರ ಸ್ಥಾನ ಎಂಬ ಅಭಿಮಾನದಿಂದ ಬದಲಾವಣೆ ಸೂಚಿಸುತ್ತಿದ್ದೇವೆ.

ಶುಭಹಾರೈಕೆಗಳೊಡನೆ
ಮಾತಾಜಿ

63 ಪುರಾತರ (ಶರಣರ) ಹೆಸರುಗಳು

1. ಧರ್ಮಗುರು ಬಸವಣ್ಣನವರು
2. ಚಿನ್ಮಯಜ್ಞಾನಿ ಚನ್ನಬಸವಣ್ಣನವರು
3. ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು
4. ಲಿಂಗಾಂಗಯೋಗಿ ಸಿದ್ಧರಾಮೇಶ್ವರ
5. ವೀರ ವೀರಾಗಿಣಿ ಅಕ್ಕಮಹಾದೇವಿ
6. ವೀರ ಗಣಾಚಾರಿ ಮಡಿವಾಳ ಮಾಚಿದೇವ
7. ವೀರ ಮಾತೆ ಅಕ್ಕನಾಗಲಾಂಬಿಕೆ
8. ದಾಸೋಹ ಮೂರ್ತಿ ನೀಲಾಂಬಿಕೆ
9. ಹುತಾತ್ಮ ಚೇತನ ಹರಳಯ್ಯ-ಕಲ್ಯಾಣಮ್ಮ
10. ಹುತಾತ್ಮ ಚೇತನ ಮಧುವರಸ
11. ಹುತಾತ್ಮ ಶರಣ ಶೀಲವಂತಯ್ಯ
12. ಒಕ್ಕಲಿಗ ಮುದ್ದಣ್ಣ
13. ಪರಮ ಪ್ರಸಾದಿ ಡೋಹಾರ ಕಕ್ಕಯ್ಯ
14. ತತ್ತ್ವ ನಿಷ್ಠುರಿ ಅಂಬಿಗರ ಚೌಡಯ್ಯ
15. ಕಾಶ್ಮೀರದ ಮೋಳಿಗೆ ಮಾರಯ್ಯ ಮಹಾದೇವಿಯಮ್ಮ
16. ಪ್ರಸಾದಿ ಭೋಗಣ್ಣ
17. ಭೃತ್ಯಾಚಾರಿ ಹಡಪದ ಅಪ್ಪಣ್ಣ
18. ನಿಜಲಿಂಗಯೋಗಿ ಅಜಗಣ್ಣ
19. ಅಮುಗಿದೇವಯ್ಯ-ರಾಯಮ್ಮ
20. ಅರಿವಿನ ಮಾರಿತಂದೆ
21. ಅವಸರದ ರೇಕಣ್ಣ
22. ವಚನ ಭಂಡಾರಿ ಶಾಂತರಸ
23. ಸೌರಾಷ್ಟ್ರದ ಆದಯ್ಯ
24. ಮೇದಾರ ಕೇತಯ್ಯ
25. ಕುಂಬಾರ ಗುಂಡಯ್ಯ
26. ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ
27. ಶರಣೆ ಸತ್ಯಕ್ಕ
28. ಉಗ್ಘಡಿಸುವ ಗಬ್ಬಿದೇವಯ್ಯ
29. ಗೊಬ್ಬೂರಿನ ಬಬ್ಬಬಾಚಯ್ಯ
30. ಮಹಾಜ್ಞಾನಿ ಉರಿಲಿಂಗದೇವ
31. ಸ್ವಾನುಭವನಿಧಿ ಉರಿಲಿಂಗ ಪೆದ್ದಿ
32. ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ
33. ಕರುಳ ಕೇತಯ್ಯ
34. ಏಲೇಶ್ವರದ ಕೇತಯ್ಯ
35. ಒಕ್ಕಲಿಗ ಮುದ್ದಣ್ಣ
36. ಗುಡ್ಡಾಪುರದ ದಾನಮ್ಮ
37. ಕಂದಹಾರದ ಮರುಳು ಶಂಕರದೇವ
38. ಗಾಣದ ಕನ್ನಪಯ್ಯ
39. ಕಿನ್ನರಿಯ ಬ್ರಹ್ಮಯ್ಯ
40. ನಿಜ ವಿರಕ್ತ ನಿರ್ಲಜ್ಜ ಶಾಂತಿಮಯ್ಯ
41. ಜೇಡರ ದಾಸಿಮಯ್ಯ-ದುಗ್ಗಳೆ
42. ಬಾಹೂರ ಬೊಮ್ಮಣ್ಣ
43. ಸದ್ಯೋನ್ಮುಕ್ತೆ ಮುಕ್ತಾಯಕ್ಕ
44. ಬಾಚಿ ಕಾಯಕದ ಬಸವಯ್ಯ
45. ಘಟ್ಟಿವಾಳಯ್ಯ

46. ನಿಜಾನುಭವಿ ನುಲಿಯ ಚಂದಯ್ಯ
47. ಮುನಿಮಾರ್ಗಶೀಲ ರೇವಣಸಿದ್ದೇಶ್ವರ
48. ಶ್ರೀಶೈಲದ ಪಂಡಿತಾರಾಧ್ಯ
49. ವಿಶ್ವಬಂಧು ಮರುಳು ಸಿದ್ಧೇಶ್ವರ
50. ಏಕೋರಾಮಾರಾಧ್ಯ
51. ಬಹುರೂಪಿ ಚೌಡಯ್ಯ
52. ಗಜೇಶ ಮಸಣಯ್ಯ
53. ವೈದ್ಯ ಸಂಗಣ್ಣ
54. ಸಕಲೇಶ ಮಾದರಸ
55. ರುದ್ರಮುನಿದೇವರು
56. ಸೊಡ್ಡಳ ಬಾಚರಸ
57. ವೀರ ಶರಣ ಜಗದೇವಯ್ಯ
58. ಧೀರ ಶರಣ ಮಲ್ಲಿಬೊಮ್ಮಣ್ಣ
59. ಸಗರದ ಬ್ರಹ್ಮಯ್ಯ
60. ಮೊರನ ವೇಮಯ್ಯ
61. ಢಕ್ಕೆಯ ಬೊಮ್ಮಣ್ಣ
62. ಪಡಿಹಾರಿ ಉತ್ತಣ್ಣ
63. ದಾಸೋಹದ ಸಂಕಣ್ಣ

ಉಳವಿ ಚನ್ನಬಸವಣ್ಣನವರ ದೇವಾಲಯದವರಿಗೆ

ಈ ರೀತಿ ಒಂದು ಪತ್ರವನ್ನು ಧಾರವಾಡದ ಉಳವಿ ಚನ್ನಬಸವಣ್ಣನವರ ದೇವಾಲಯದವರಿಗೆ ಬರೆದು ಅವನ್ನು ತಲುಪಿಸಲು ನಮ್ಮ ಧಾರವಾಡದ ರಾಷ್ಟ್ರೀಯ ಬಸವ ದಳದವರ ಕೈಲಿ ಕೊಟ್ಟು ಬೆಂಗಳೂರಿಗೆ ಬಂದೆನು. ಕಲ್ಯಾಣ ಕಿರಣದ ಓದುಗರ ಗಮನಕ್ಕೆ ಬರಲೆಂದು ಪತ್ರವನ್ನು ಪ್ರಕಟಿಸಲಾಗಿದೆ.

ಈಗ ಹೊಸದಾಗಿ ಮಹಾದ್ವಾರ ಕಟ್ಟುವವರು ಸಹ ನಂದಿಯನ್ನು ಕೂರಿಸುತ್ತಿರುವುದು ಅದೂ ಶರಣರ ಸ್ಥಾನಗಳಲ್ಲಿ ನಿಜಕ್ಕೂ ಖಂಡನಾರ್ಹ. ಧಾರವಾಡದ ಚನ್ನಬಸವಣ್ಣನವರ ಗುಡಿಯ ಗರ್ಭಗುಡಿಯ ಬಾಗಿಲ ಚೌಕಟ್ಟಿನ ಮೇಲೆ ಡೊಳ್ಳು ಹೊಟ್ಟೆಯ ಗಣಪತಿಯನ್ನು ಕೂರಿಸಲಾಗಿದೆ. ಇದು ಶುದ್ಧ ತಪ್ಪು ಮತ್ತು ಅಪರಾಧ. ಹುಟ್ಟು ಬ್ರಾಹ್ಮಣರಾಗಿಯೂ ಲಿಂಗಾಯತ ಧರ್ಮ ಸ್ವೀಕರಿಸಿದ ಭೀಮಕವಿ, ಚಾಮರಸ ಮುಂತಾದವರೇ ತಾವು ರಚಿಸಿದ ಬಸವ ಪುರಾಣ, ಪ್ರಭುಲಿಂಗಲೀಲೆಯಲ್ಲಿ ಉಳಿದ ವೈದಿಕ-ಶೈವ ಕವಿಗಳಂತೆ ಆರಂಭದಲ್ಲಿ ಗಣಪತಿಯನ್ನು ಸ್ತುತಿಸದೆ ಕ್ರಮವಾಗಿ ಬಸವ ಗುರು ಮತ್ತು ಗುಹೇಶ್ವರ ಲಿಂಗವನ್ನು ಸ್ತುತಿಸಿದ್ದಾರೆ. ಆದ್ದರಿಂದ ಬಸವಣ್ಣನವರು ಮತ್ತು ಅವರ ಪರಂಪರೆಯ ಯಾರೇ ಶರಣರ ಗುಡಿ-ಗದ್ದುಗೆಗಳ ತಲೆ ಬಾಗಿಲಲ್ಲಿ ಲಿಂಗಾಯತ ಧರ್ಮದ ಗಣಪತಿ ಬಸವಣ್ಣನವರ ಚಿತ್ರ, ಶಿಲ್ಪ ಕೆತ್ತಬೇಕೇ ವಿನಾ ಸಾಂಪ್ರದಾಯಕ ಗಣಪತಿಯನ್ನಲ್ಲ.

ಇನ್ನೊಂದು ವಿಲಕ್ಷಣ ಬೆಳವಣಿಗೆಯನ್ನು ನಾವು ಗುರುತಿಸಬಹುದು. ಅನುಭವ ಮಂಟಪದ ಶರಣರ ಸಂಬಂಧ ಬಹಳ ಮಧುರ. ಲಿಂಗದೇವನೇ ತಂದೆ, ಬಸವಣ್ಣನೇ ತಾಯಿ. ಇವರ ಸಂತತಿ ಎಲ್ಲ ಶರಣರು ಎಂಬ ಭಾವ ಎಲ್ಲರಲ್ಲಿ ತುಂಬಿ ತುಳುಕುತ್ತದೆ. ಇದನ್ನೇ ಚನ್ನಬಸವಣ್ಣನವರು ಹೀಗೆ ಹೇಳುವುದು.

ಅಯ್ಯಾ, ಅಯ್ಯಾ, ಎಂದಡೆ ಅಯ್ಯ ಓ ಎಂಬುದ ಮಾಣ್ಬನೆ?
ಅವ್ವಾ, ಅವ್ವಾ ಎಂದಡೆ ಅವ್ವೆ ಓ ಎಂಬುದ ಮಾಣ್ಬಳೆ ?
ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ
ಬಸವಲಿಂಗಾ, ಬಸವಲಿಂಗಾ, ಬಸವಲಿಂಗಾ ಎಂದಡೆ ಎನ್ನ ಕಾಯ ಬಯಲಾಗದೆ ?

ಪರಸ್ಪರರಲ್ಲಿ ಎಂಥ ಗೌರವ-ವಿಶ್ವಾಸ ! ಇವರೆಲ್ಲರ ಹೃದಯ, ಜೀವಾಳ ಬಸವಣ್ಣನವರು. ಆದರೆ ಆ ಶರಣರುಗಳ ಹೆಸರಿನ ಗುಡಿಗಳನ್ನು ನಡೆಸುತ್ತಿರುವ ಇಂದಿನ ಆಡಳಿತ ವರ್ಗದವರು ಬಸವಣ್ಣನವರಿಗಿಂತಲೂ ಇವರೇ ದೊಡ್ಡವರು ಎಂಬ ಭಾವ ಬರುವಂತೆ ವರ್ತಿಸುವುದಲ್ಲದೇ ಬಸವಣ್ಣನವರ ಫೋಟೋ ಸಹ ಆ ಗುಡಿ-ಗದ್ದುಗೆಗಳಲ್ಲಿ ಇಡುವುದಿಲ್ಲ. ಇತಿಹಾಸ, ತತ್ತ್ವ ಏನೂ ಗೊತ್ತಿರದ ಶ್ರೀಮಂತರು, ರಾಜಕಾರಣಿಗಳೇ ಆಡಳಿತ ನಡೆಸುವವರು. ಸೊಲ್ಲಾಪುರದ ಸಿದ್ಧರಾಮೇಶ್ವರ ಗುಡಿ, ಉಳವಿ ಚನ್ನಬಸವೇಶ್ವರ ಗುಡಿ, ಗೊಡಚಿ ವೀರಭದ್ರ ಇತ್ಯಾದಿ ಇಂಥ ನೂರಾರು ಉದಾಹರಣೆ ಕೊಡಬಹುದು. ಗೊಡಚಿ ಮಡಿವಾಳ ಮಾಚಿದೇವರ ಲಿಂಗೈಕ್ಯ ಕ್ಷೇತ್ರ. ಕಾಲಜ್ಞಾನ ವಚನಗಳಲ್ಲಿ ಲಿಂಗೈಕ್ಯರಾದ ಮಡಿವಾಳ ಮಾಚಿದೇವರನ್ನು ಗೊಡಚಿ ಗಿಡದ ಬುಡದಲ್ಲಿ ಇಟ್ಟರು ಎಂದು ಹೇಳಲಾಗಿದೆ. ಕ್ರಾಂತಿವೀರ ಮಾಚಿದೇವರನ್ನು ವೀರಭದ್ರನ ಅವತಾರ ಎಂದು ಮೊದಲು ಕರೆದು, ನಂತರ ಮಾಚಿದೇವರನ್ನು ಮರೆಸಿ, ವೀರಭದ್ರನನ್ನೇ ಮೆರೆಸಲಾಗುತ್ತಿದೆ. ಇಂಥ ಅತಿರೇಕ ನಿಲ್ಲಬೇಕಾದರೆ ಜನರು ಜಾಗೃತವಾಗುದೊಂದೇ ಉಳಿದಿರುವ ದಾರಿ.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ 810ನೆಯ ಲಿಂಗೈಕ್ಯ ದಿನಾಚರಣೆ



ಬುಧ (ಚನ್ನ) ವಾರ ದಿ. 10-8-2005 ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ

ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್)

ಶರಣರ ಬರುವೆಮಗೆ ಪ್ರಾಣ ಜೀವಾಳ

ಶ್ರಾವಣ ಮಾಸ-ಶರಣ ಮಾಸ

ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಅಶುಭವಲ್ಲ ಶುಭವೂ ಅಲ್ಲ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಸ್ವಯಂ ಪ್ರೇರಣೆಯಿಂದ ಬದ್ಧರಾಗಲು ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲೀಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ, ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ 2 ಸಲ ಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡುವುದು ಅತ್ಯಂತ ಶ್ರೇಯಸ್ಕರ. ಈ ಅವಧಿಯಲ್ಲಿ ಆಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಶ್ರಾವಣ ಮಾಸವು ಶ್ರವಣ ಮಾಸವಾಗುವುದು ಮಾತ್ರವಲ್ಲ ಶರಣ ಮಾಸವೇ ಆಗುತ್ತದೆ.

ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಮತ್ತು ಬಸವ ಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರು ಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ಧಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಕಾಲ ಬಸವಣ್ಣನವರ ವಚನಗಳನ್ನು ಬೆಳಿಗ್ಗೆ 54 ಸಂಜೆ 54ರಂತೆ ಭಾಗ ಮಾಡಿ ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ-ಸಮಾಗಮದಲ್ಲಿ ಪಾಲ್ಗೊಂಡು ಧರ್ಮಪಿತರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯಳಾದ ನೀಲಮ್ಮ ಷಷ್ಠಿಯ ದಿನ. ಅಂದು ಬೆಳಿಗ್ಗೆ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಗೆ ಭಾಗಿಗಳಾಗಿ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು. ಬಸವ ಮಂಟಪ ಅಥವಾ ಸಾಮೂಹಿಕ ಸ್ಥಳಗಳಿದ್ದರೆ ಅಲ್ಲಿಯೇ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಬಹುದು. ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

ವಿಶ್ವಗುರು ಬಸವಣ್ಣನವರ 810ನೆಯ ಲಿಂಗೈಕ್ಯ ದಿನಾಚರಣೆ

ಬುಧ (ಚನ್ನ) ವಾರ ದಿ. 10-8-2005ರಂದು ಬೆಳಿಗ್ಗೆ 10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ.1134) 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ) ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು ''ಬಸವ ಪಂಚಮಿ'' ಎಂದು ಖ್ಯಾತಿವೆತ್ತಿದೆ. ಈ ವರ್ಷ 810ನೆಯ ಲಿಂಗೈಕ್ಯ ದಿನವು ಬುಧ (ಚನ್ನ) ವಾರ ದಿ.10-8-2005ರಂದು ಒದಗಿ ಬಂದಿದೆ.

ನೀಲಮ್ಮ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆ

ಧರ್ಮಪಿತ ಬಸವಣ್ಣನವರು ಕೊಟ್ಟ ಅಮೂಲ್ಯವಾದ ಒಂದು ಧಾರ್ಮಿಕ ಲಾಂಛನ ಇಷ್ಟಲಿಂಗ. ಏಕೇಶ್ವರವಾದವನ್ನು ಪ್ರತಿಪಾದಿಸಿದ ಮಹಾಪುರುಷ ಬಸವಣ್ಣನವರು. ಇಷ್ಟಲಿಂಗದ ಮೂಲಕ ಏಕದೇವೋಪಾಸನೆಗೆ ಅನುವು ಮಾಡಿಕೊಟ್ಟರು. ನಿರಾಕಾರನಾದ ದೇವನಿಗೆ ಮನುಷ್ಯರ, ಪಶುಪಕ್ಷಿಗಳ, ಕ್ರಿಮಿ ಕೀಟಗಳ ಆಕಾರ ಕೊಡುವುದು ಸೃಷ್ಟಿಕರ್ತ ಲಿಂಗದೇವನಿಗೆ ಮಾಡುವ ಅಪಚಾರವಾಗುವುದೆಂದು ಸಾರಿ, ವಿಶ್ವದಾಕಾರದಲ್ಲಿ ದೇವನನ್ನು ಪೂಜಿಸಲು ಕಲಿಸಿದರು. ಇಷ್ಟಲಿಂಗವನ್ನು ಗಣಲಾಂಛನವಾಗಿ ಮಾಡಿ, ಜಾತಿ-ವರ್ಣ-ವರ್ಗರಹಿತ ಧರ್ಮ ಸಹಿತ ಶರಣ ಸಮಾಜ ರಚನೆಗೆ ಅನುಕೂಲವಾಗುವ ಲಿಂಗಾಯತ ಧರ್ಮವನ್ನು ಕೊಟ್ಟರು.

ಪವಿತ್ರ ಹಬ್ಬ ನೀಲಮ್ಮ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಶರಣ ಬಂಧುಗಳು ಮಾಡುವುದು ಕಡ್ಡಾಯವಾದ ಕರ್ತವ್ಯವಾಗಿರುವುದು. ಆದ್ದರಿಂದ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಗುರು (ಪ್ರಭು) ವಾರ ದಿ.11-8-2005ರಂದು ಬೆಳಿಗ್ಗೆ 10 ಗಂಟೆಗೆ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ, ಉಪನ್ಯಾಸ ಮತ್ತು ನಂತರ ಗಣಪ್ರಸಾದ (ಭೋಜನ) ವನ್ನು ಏರ್ಪಡಿಸಲಾಗಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗಿಯಾಗಲು ಅನಾನುಕೂಲತೆ ಇದ್ದವರು ತಮ್ಮ ಮನೆಯವರೆಲ್ಲ ಸೇರಿ ಸಂಜೆಯ ಸಮಯದಲ್ಲಿ ಕೌಟುಂಬಿಕವಾಗಿ ಇಷ್ಟಲಿಂಗಾರ್ಚನೆ ಮಾಡಬೇಕು.

★ ಸರ್ವರಿಗೂ ಆದರದ ಸುಸ್ವಾಗತ ★

ಶರಣ ಎನ್. ಪುಟ್ಟರುದ್ರ, ಅಧ್ಯಕ್ಷರು,	ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು
ಲಿಂಗಾಯತ ಧರ್ಮ ಮಹಾಸಭಾ	ಪೀಠಾಧ್ಯಕ್ಷರು, ಬಸವ ಕಲ್ಯಾಣ



810ನೆಯ ಬಸವ ಲಿಂಗೈಕ್ಯ ಸಂಸ್ಮರಣೆ

ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 810ನೆಯ ಬಸವ ಪಂಚಮಿಯ ಆಚರಣೆ ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ(ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4
4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್‌ದಿಂದ ಹೊರಟು ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು, ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು, ಬೆನ್ನ ಮೇಲೆ ಬಸವ ರಕ್ಷೆ(ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲು ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದನ್ನೇ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು, ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿ ನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ(ಸಿಟಿ ಆಸ್ಪತ್ರೆ ಪಕ್ಕ) ಇದೆ. ಸರ್ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿ ರಸ್ತೆ ಮತ್ತು ಸಿಟಿ ಮಾರುಕಟ್ಟೆ ರಸ್ತೆ ಕೂಡುವಲ್ಲಿ ಇದೆ.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ
ಬೆಂಗಳೂರು-560010
ದೂರವಾಣಿ : 080-23325335 / 23322790

ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251,80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಅಪ್ಪುವನಪ್ಪಿದ ವಾರಿಕಲ್ಲಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹಿ ಎನ್ನಬಹುದೆ?
ಅನಲನಪ್ಪಿದ ಕರ್ಪೂರದಂತೆ, ಕೂಡಲ ಚನ್ನ ಸಂಗಯ್ಯ
ನಿಮ್ಮ ಶರಣ ಬಸವಣ್ಣನ ನಿಲುವು.

-ಚನ್ನಬಸವಣ್ಣ

ಸಮಸ್ಯೆ ..? ಸಮಾಧಾನ..!

? ನಾಗಶೆಟ್ಟಿ ಶೆಟಕಾರ, ರಾ.ಬ.ದಳ, ಬೀದರ್
ಜಯಘೋಷದಲ್ಲಿ ಸಕಲ ಶರಣ ಸಂತೋಂಕಿ ಜೈ ಎಂಬ ವಾಕ್ಯವಿದೆ. ಇದರ ಅರ್ಥ ವ್ಯಾಪ್ತಿ ಏನು ? ಸಂತ ಎಂದರೆ ಸಂತ ತುಕಾರಾಂ, ಸಂತ ರಾಮದಾಸ, ಶರಣರಲ್ಲದೆ ಬೇರೆ ಮಹಾತ್ಮರು ಎಂದು ನನಗೆ ಅನ್ನಿಸುತ್ತದೆ. ನಮಗೆ ಸಂಬಂಧವಿಲ್ಲದ ಅಂಥ ಸಂತರನ್ನು ಸ್ಮರಿಸುವುದು ಅಗತ್ಯವೆ ?

★ ಪರಮಾತ್ಮನಿಗೆ ಒಲಿದು ಉನ್ನತ ವ್ಯಕ್ತಿತ್ವ ಪಡೆದವರು ಸಂತರು ; ಶರಣ ಎಂದರೆ ದೇವರಿಗೆ ಶರಣಾದವನು ಲಿಂಗಾಯತ ಧರ್ಮದ ತಾತ್ತ್ವಿಕ ಪದ ಶರಣ. ಬಸವಣ್ಣನವರ ಪರಿಕಲ್ಪನೆಯ ಶರಣ ಬಹಳ ಉನ್ನತ ನಿಲುವಿನವ ನಿಜ. ಆದರೆ ಇನ್ನಿತರ ಧರ್ಮಗಳ ಅನುಭಾವಿಗಳೂ ಗೌರವಾರ್ಹರೆ ! ಸಾಂಪ್ರದಾಯಿಕ ಪುರೋಹಿತರು, ಪಂಡಿತರು, ವಿದ್ವಾಂಸರು ಬೇರೆ ಸಂತರು ಬೇರೆ. ಇವರು ಮಾನಸಿಕವಾಗಿ, ಜಾತಿ ಕುಲ ಮತಗಳ ಎಲ್ಲೆ ಮೀರಿದವರು Mystics of the whole world speak the same language ಎನ್ನುತ್ತಾಳೆ ಒಬ್ಬ ದಾರ್ಶನಿಕಳು. ಇಂಥ ಸಂತರಿಂದಲೇ ಭಕ್ತಿ ಅಧ್ಯಾತ್ಮ ಉಳಿದಿರುವುದು. ಆದ್ದರಿಂದ ಯಾವ ಧರ್ಮದವರೇ ಇರಲಿ ಅವರನ್ನು ನಾವು ಅನುಸರಿಸದಿದ್ದರೂ ಗೌರವಿಸಬೇಕು ಅದಕ್ಕಾಗಿ ಸಕಲ ಶರಣ, ಸಂತೋಂಕಿ ಜೈ ಎಂದು ಜಯ ಘೋಷದಲ್ಲಿ ಸೇರಿಸಿರುವುದು.

? ಸಾವಿತ್ರಿ, ರಾಷ್ಟ್ರೀಯ ಬಸವ ದಳ, ರಾಯಚೂರು
1. ಲಿಂಗಾಯತ ಧರ್ಮೀಯರು ಶ್ರೀಶೈಲ, ಮಂತ್ರಾಲಯ, ತಿರುಪತಿ ಮುಂತಾದ ಕ್ಷೇತ್ರಗಳಿಗೆ ಹೋಗಬಹುದೆ ?

★ ದೇವರನ್ನು ಹುಡುಕಿಕೊಂಡು ಯಾವುದೇ ಕ್ಷೇತ್ರಕ್ಕೆ ಹೋಗುವುದು ಲಿಂಗಾಯತ ಧರ್ಮೀಯರಿಗೆ ಸಲ್ಲದು. ಐತಿಹಾಸಿಕ ಸ್ಥಳ, ಪ್ರಕೃತಿ ಸೌಂದರ್ಯದ ತಾಣ ಅಂಥವಕ್ಕೆ ಸಂದರ್ಶನಕ್ಕೆಂದು ಹೋಗಬಹುದು. ಅಲ್ಲಿ ಹೋದಾಗಲೂ ತಮ್ಮ ಪಾಡಿಗೆ ತಾವು ಇಷ್ಟಲಿಂಗಾರ್ಚನೆ ಮಾಡಿಕೊಂಡು, ಕರುಣ ಪ್ರಸಾದ ಸ್ವೀಕರಿಸಬೇಕು ತಾತ್ತ್ವಿಕವಾಗಿ ಲಿಂಗಾಯತ ಧರ್ಮಕ್ಕೆ ಆ ಕ್ಷೇತ್ರಗಳ ಅಧಿದೇವತೆಗಳ ವಿಚಾರ ಧಾರೆಗೂ ಅಜಗಜಾಂತರ ವ್ಯತ್ಯಾಸವಿದೆ. ದೇವರ ಹೆಸರಲ್ಲಿ ತಲೆ ಬೋಳಿಸಿಕೊಳ್ಳುವುದು, ಎತ್ತಿ ಎಸೆಯುವ ತೀರ್ಥ ಪ್ರಸಾದ ಸ್ವೀಕರಿಸುವುದು ನಿಷಿದ್ಧ. ಸಮಾನತಾಭಾವದಿಂದ ಗುರು ಕೊಡುವ ಕರುಣ ಪ್ರಸಾದವಷ್ಟೇ ಸ್ವೀಕಾರಾರ್ಹ.

? 2. ಸ್ತ್ರೀ ದೇವತೆಗಳಾದ ಕಾಳಿಕಾ, ಚಾಮುಂಡಿ, ದುರ್ಗಾ ಮುಂತಾದವನ್ನು ಮಂಗಳವಾರ ಶುಕ್ರವಾರ ಅರ್ಚಿಸುವುದೇಕೆ ?

★ ಮೂಢರ ಧರ್ಮಾಚರಣೆಯಲ್ಲಿ ಒಂದೇ ಎರಡೇ ದೋಷಗಳು. ನಿರಾಕಾರ ದೇವನನ್ನು ಕೈಬಿಟ್ಟು ದೇವರಿಗೆ ಹೆಣ್ಣು ಗಂಡು ಎಂಬ ಭೇದವನ್ನು ಕಲ್ಪಿಸಿರುವುದಲ್ಲದೆ ದಿನಕ್ಕೊಂದು ದೇವತೆಯನ್ನು ಪೂಜಿಸುತ್ತಾರೆ. ಇದೆಲ್ಲ ಮೌಢ್ಯತೆಯ ಪರಮಾವಧಿ. ದೇವನು ಒಬ್ಬ ; ಅವನನ್ನೇ ಎಲ್ಲ ದಿವಸಗಳಂದೂ ಅರ್ಚಿಸಬೇಕು.

? 3. ನಿಮ್ಮ ಮೂರ್ತಿಗೊಳಿಸುವೆನಯ್ಯಾ ಬಸವಣ್ಣ ಅಹಂ ಸೋಹಂ ಎಂಬ ಶಬ್ದ ಉಳ್ಳನ್ನಕ್ಕ ಎಂಬ ಮಾಚಿದೇವರ ವಚನ ವಾಕ್ಯದ ಅರ್ಥವೇನು ?

★ ಅಹಂ ಎಂದರೆ ನಾನು ಅರ್ಥಾತ್ ಜೀವಾತ್ಮ; ಸೋಹಂ ಎಂದರೆ ಅವನೇ ನಾನು ಎಂಬ ಭಾವ; ಅಂದರೆ ಪರಮಾತ್ಮ. ಜೀವಾತ್ಮ-ಪರಮಾತ್ಮ, ಪೂಜಕ-ಪೂಜ್ಯ, ಅಂಗ-ಲಿಂಗ ಎಂಬ ದ್ವಂದ್ವ ಇರುವತನಕ ಗುರು ಬಸವಣ್ಣನ ಅರ್ಚನೆಯೂ ಬೇಕೇ ಬೇಕು. ಅರ್ಚನೆಗೆ ಬಸವ ಮೂರ್ತಿಯೂ ಬೇಕು ಎಂದರ್ಥ!

? ಚಂದ್ರಕಾಂತ ಬಿರಾದಾರ, ಗುಲಬರ್ಗಾ
ಕೆಲವರು ಪೂಜ್ಯ ಲಿಂಗಾನಂದ ಅಪ್ಪಾಜಿಯವರನ್ನು ತುಂಬಾ ಹೊಗಳುತ್ತಾರೆ. ನಿಮ್ಮನ್ನು ತೆಗಳುತ್ತಾರೆ. ಏಕೆ? ನೀವು ಉಭಯತರ ವಿಚಾರಧಾರೆಯೂ ಒಂದೇ ಆಗಿದೆಯಲ್ಲವೆ ?

★ ನಮ್ಮ ದೇಶದಲ್ಲಿ ಒಂದು ಸಂಪ್ರದಾಯವಿದೆ. ಇರುವಾಗ ವ್ಯಕ್ತಿಗಳನ್ನು ಟೀಕಿಸುವುದು, ಕಿರುಕುಳ ಕೊಡುವುದು. ಅವರು ತೀರಿಕೊಂಡ ನಂತರ ಹೊಗಳುವುದು. ನಮಗೂ ಅಂಥವರಿಂದ ಸತ್ತ ನಂತರ ಹೊಗಳಿಸಿಕೊಳ್ಳಲು ಚಾನ್ಸ್ ಸಿಕ್ಕೇ ಸಿಗುತ್ತೆ ಬಿಡಿರಿ. ಅದಕ್ಕೆ ಅವಸರ ಪಡುವುದೇಕೆ ?

? ಎ.ಹೆಚ್.ವೃಷಭೇಂದ್ರಪ್ಪ , ರಾಷ್ಟ್ರೀಯ ಬಸವ ದಳ , ತಿಮ್ಮಪ್ಪಯ್ಯನಹಳ್ಳಿ

1. ನಮ್ಮ ಊರಿನಲ್ಲಿ ಗುರುಬೋಧ ಎಂಬ ಸಂಘವಿದೆ. ಅವರು ಮಾನವನಿಗೆ ಪುನರ್‌ಜನ್ಮವಿಲ್ಲ ಎಂದು ಹೇಳುತ್ತಾರೆ. ?

★ ನಿಮ್ಮ ಊರಿನ ಸಂಘದವರೇ ಏಕೆ ಅದೇ ರೀತಿ ವಾದ ಮಾಡುವ ಅನೇಕರಿದ್ದಾರೆ. ಜೀವಾತ್ಮನಿಗೆ ಆದಿ-ಅಂತ್ಯ ಇರಲೇ ಬೇಕಲ್ಲವೇ? ಆದಿಯೂ ಪರಮಾತ್ಮನೆ ಅಂತ್ಯವೂ ಆ ಪರಮಾತ್ಮನೆ. ಜೀವಾತ್ಮವು ಇನ್ನೂ ಸಂಸ್ಕಾರಗೊಂಡು ಶುದ್ಧಾತ್ಮನಾಗಿರದಿದ್ದರೆ ಅದನ್ನು ದೇವರು ಹೇಗೆ ವಿಲೀನ ಮಾಡಿಕೊಳ್ಳುತ್ತಾನೆ? ಸತ್ತವರಿಗೆಲ್ಲ ಮುಕ್ತಿಯಾಗದು. ಜೀವನ್ಮುಕ್ತರಾಗಿ ಸತ್ತವರಿಗೆ ಮಾತ್ರ ಮುಕ್ತಿ ಸಾಧ್ಯ. ಗುರು ಬೋಧೆ ಪಡೆದು ಸತ್ಯ ಸದಾಚಾರ ಮಾರ್ಗದಲ್ಲಿ ನಡೆದು ಜೀವನ್ಮುಕ್ತರಾದವರು ಹುಟ್ಟಿ ಬರಬೇಕಿಲ್ಲ. ಹಾಗಲ್ಲದ ಎಲ್ಲ ಜೀವರು ಮುಕ್ತಿ ಹೊಂದುವ ತನಕ ಜನ್ಮವನ್ನು ಎತ್ತಲೇಬೇಕು.

? 2. ನಾನೊಬ್ಬ ನಿಷ್ಠಾವಂತ ಬಸವ ತತ್ತ್ವಾನುಯಾಯಿ. ಗುರುಹಿರಿಯರನ್ನು, ಸ್ನೇಹಿತರನ್ನು ಕಂಡಾಗ ಶರಣು ಎಂದು ಕೈ ಮುಗಿಯುತ್ತೇನೆ. ಯಾರ ಪಾದವನ್ನೂ ಮುಟ್ಟಿ ನಮಸ್ಕಾರ ಮಾಡುವುದಿಲ್ಲ. ಅದನ್ನು ಕೆಲವರು ಅಹಂಕಾರ ಎಂದು ಭಾವಿಸುತ್ತಾರೆ. ಎದೆಯ ಮೇಲಿರುವ ಇಷ್ಟಲಿಂಗವನ್ನು ನಮಸ್ಕರಿಸುವಾಗ ಕೆಳಗೆ ಮಾಡಬೇಕಾಗುವುದರಿಂದ ಪಾದ ನಮಸ್ಕಾರ ಮಾಡುವುದು ಇಷ್ಟವಾಗದು, ಇದು ತಪ್ಪೆ?

★ ನಿಮ್ಮ ವಿಚಾರ ಧಾರೆಯಲ್ಲಿ ತಪ್ಪೇನೂ ಇಲ್ಲ. ಈ ಬಗ್ಗೆ ನಾನು 1997 ರಲ್ಲೇ ಪಾದ ನಮಸ್ಕಾರ ನಿಷೇಧ ಎಂಬ ಪುಸ್ತಕ ಬರೆದಿದ್ದೇನೆ. ಪಾದ ನಮಸ್ಕಾರದಲ್ಲಿ ಕೆಲವೊಂದು ಸಮಸ್ಯೆಗಳಿವೆ. ಸಾಷ್ಟಾಂಗದಲ್ಲಿ ಇಷ್ಟಲಿಂಗವು ಕೆಳಗೆ ಆಗುತ್ತದೆ. ಮಾಡಿಸಿಕೊಳ್ಳುವವರಿಗೂ ಅಂಥ ಸುಖವೇನೂ ಇಲ್ಲ. ಜನ ಸಮುದಾಯ ಸೇರಿರುವಾಗ ನಮ್ಮ ಮುಖ ಕಾಣುತ್ತಲೇ ದುಡು ದುಡು ಓಡಿ ಬಂದು ನಮಸ್ಕರಿಸಲು ಮುಗಿಬೀಳುತ್ತಾರೆ. ಆಗ ಧೂಳು ಎದ್ದು ಗಂಟಲು ಕೆರೆದು ಕೆಮ್ಮು ಶುರುವಾಗುತ್ತದೆ. ಬಹಳ ಜನ ಕಾವಿಧಾರಿಗಳು ವೇದಿಕೆಯ ಮೇಲಿದ್ದರೆ ಯಾರಿಗೆ ಮಾಡುವುದು ಯಾರಿಗೆ ಬಿಡುವುದು ಎಂಬ ಸಂದಿಗ್ಧತೆ ಉಂಟಾಗುತ್ತದೆ. ಒಬ್ಬರಿಗೆ ಮಾಡಿದಾಗ ಇತರರು ತಮಗೆ ಮಾಡಲಿಲ್ಲ ಎಂದು ಬೇಸರ ಪಟ್ಟುಕೊಳ್ಳುತ್ತಾರೆ. ಆದ್ದರಿಂದ ಗುರು-ಶಿಷ್ಯ ಸಂಬಂಧಕ್ಕೆ ಮಾತ್ರ ಪಾದ ಸಮಸ್ಕಾರ ಸೀಮಿತಗೊಳಿಸಿ, ಗುರು-ಭಕ್ತ ಸಂಬಂಧದಲ್ಲಿ ಶರಣು-ಶರಣಾರ್ಥಿಯೇ ಸಾಕೆಂದು ನಮ್ಮದೂ ಅಭಿಪ್ರಾಯ.

? 3. ಚಿತ್ರದುರ್ಗ ಜಿಲ್ಲೆಯಲ್ಲಿ ಪಂಚಗಣಾಧೀಶ್ವರರೆಂದು ಖ್ಯಾತ ನಾಮರಾಗಿರುವ ತಿಪ್ಪೇರುದ್ರಸ್ವಾಮಿ, ಕೆಂಪಯ್ಯ, ಕೊಟ್ಟೂರು ಬಸವೇಶ್ವರ, ಕೋಲ ಶಾಂತಯ್ಯ, ಮದ್ದಾನಸ್ವಾಮಿ ಇವರು ಯೋನಿಜರಾಗಿ ಹುಟ್ಟಿ ಬಂದಿಲ್ಲ, ಉದ್ಭವಿಸಿದರು ಎಂದು ಕೆಲವರ ವಾದ. ಹಾಗಲ್ಲ; ಅವರು ತಾಯಿ ತಂದೆಯಿಂದಲೇ ಹುಟ್ಟಿದವರು ಎಂದು ನಾವು ಅಂದರೆ ಹಾಗಾದರೆ ಅವರ ತಾಯಿ ತಂದೆ, ಹುಟ್ಟಿದ ಊರಿನ ಹೆಸರು ಹೇಳಿರಿ ಎನ್ನುತ್ತಾರೆ. ನಿಮ್ಮ ಅಭಿಪ್ರಾಯವೇನು ?

★ ಮಾನವ ಶರೀರಧಾರಿಗಳಾದವರು ಯಾರೇ ಇರಲಿ, ಅವರೆಲ್ಲರೂ ತಾಯಿ ತಂದೆಯರ ಸಂಯೋಗದಿಂದಲೇ ಹುಟ್ಟಿದವರು. ತಾಯಿ ತಂದೆ ಹೆಸರು ಗೊತ್ತಿಲ್ಲ ಎಂದ ಮಾತ್ರಕ್ಕೆ ಅವರಿರಲೇ ಎಂದಲ್ಲ. ವರ್ಣಾಂತರ ವಿವಾಹದಿಂದ ಆದ ಕಲ್ಯಾಣ ಕ್ರಾಂತಿಯಿಂದಾಗಿ ಬಸವಣ್ಣನವರು ಗಡಿ ಪಾರಾದರು, ಶರಣರು ಚದುರಿದರು. ಆಗ, ಇಂದಿನ ಚಿತ್ರದುರ್ಗ ಜಿಲ್ಲೆಗೆ ಬಂದು ನೆಲೆಸಿರುವ 5 ಜನ ಶರಣರು ಕಲ್ಯಾಣದಿಂದ ಹೊರಟರು ; ಇವರೆಲ್ಲರೂ ಕಲ್ಯಾಣದ ಶರಣರು. ನಮ್ಮ ದೇಶದಲ್ಲಿ ತಾಯಿ ತಂದೆ ಹೆಸರುಗಳನ್ನು ಶರಣರು ದಾಖಲಿಸುವ ಪರಿಪಾಠವಿಲ್ಲ, ಹಾಗಾಗಿ ತಿಳಿದು ಬರುವುದಿಲ್ಲ. ದಿ.3-6-2005 ರಂದು ಗದಗಿಗೆ ಶರಣ ಕಾಮಣ್ಣನವರ ಮನೆಗೆ ಪೂಜೆಗೆ ಹೋಗುವಾಗ ದಾರಿಯಲ್ಲಿ ಒಂದು ಕಡೆ ಬೂದಿ ಬಸವೇಶ್ವರರ ಜಾತ್ರೆ ಎಂಬ ಬ್ಯಾನರ್ ನೋಡಿದೆ. ಪತ್ರಿಕೆಯಲ್ಲಿ ಅವರ ಬಗ್ಗೆ ಒಂದು ಲೇಖನವೂ ಬಂದಿತ್ತು, ಓದಿದಾಗ ತಿಳಿಯಿತು. ಅವರು ಕಲ್ಯಾಣದ ಶರಣರು. ಕ್ರಾಂತಿಯ ನಂತರ ಅಲ್ಲಿಂದ ಹೊರಬಂದರು. ವಿರಕ್ತ ಮಠಗಳನ್ನು ಅಲ್ಲಮ ಪ್ರಭುದೇವರ ಮಠ ಎಂಬ ಹೆಸರಲ್ಲಿ ಬಹಳಷ್ಟು ಊರುಗಳಲ್ಲಿ

ತೆರೆದಿದ್ದಾರೆ. ಅವರು ವಿಭೂತಿ, ರುದ್ರಾಕ್ಷಿ ಧಾರಣೆಯ ಮೂಲಕ ಭಕ್ತರನ್ನು ಅನುಗ್ರಹಿಸುತ್ತಿದ್ದುದರಿಂದ ಬೂದಿ ಬಸವೇಶ್ವರ ಎಂದು ಹೆಸರಾಯಿತು. ಇದರಿಂದ ತಿಳಿಯುವುದೇನೆಂದರೆ ಕಲ್ಯಾಣ ಕ್ರಾಂತಿಯ ನಂತರ ಚದುರಿದ ಶರಣರು ಆಂಧ್ರ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಹಬ್ಬಿ ಶರಣ ಸಂಸ್ಕೃತಿಯ ಕಂಪನ್ನು ಹರಡಿದ್ದಾರೆ. ಲಿಂಗಾಯತ ಧರ್ಮವನ್ನು ಬೆಳೆಸಿದ್ದಾರೆ. ಅವರ ಪೂರ್ವಾಶ್ರಮದ ವಿವರಗಳು ತಿಳಿಯುವುದಿಲ್ಲ ಅಷ್ಟೆ.

? 4. ಒಬ್ಬರು ಸ್ವಾಮಿಗಳು ಬಂದಿದ್ದರು. ಇಷ್ಟಲಿಂಗಾರ್ಚನೆ ಮಾಡುವಾಗ ಓಂ ನಮಃ ಶಿವಾಯ ಮಂತ್ರ ಸರಿಯಾಗದು; ಓಂ ಲಿಂಗಾಯ ನಮಃ ಸರಿ ಎಂದು ಹೇಳಿದೆವು. ಆಗ ಅವರು "ಬಸವಣ್ಣನವರೇ ಹೇಳಿದ್ದಾರಲ್ಲ 'ಓಂ ನಮಃ ಶಿವಾಯ' ಎನಗಿದೇ ಮಂತ್ರ" ಎಂದು ಉತ್ತರಿಸಿದರು. ಇದಕ್ಕೆ ತಮ್ಮ ವಿವರಣೆ ಏನು ?

★ ಭಕ್ತರ ಮಾತಿರಲಿ ಎಷ್ಟು ಜನ ಸ್ವಾಮಿಗಳಿಗೆ ಇಷ್ಟಲಿಂಗದ ಸ್ವರೂಪವು ಗೊತ್ತಿದೆ? ಇಷ್ಟಲಿಂಗವು ಶಿವನ ಯೋಗಿರಾಜ ಕುರುಹು ಅಲ್ಲ, ನಿರಾಕಾರ ಸೃಷ್ಟಿಕರ್ತ ಲಿಂಗದೇವನ ಕುರುಹು ಎಂಬುದನ್ನು ತಿಳಿದಿದ್ದರೆ ಇಷ್ಟಲಿಂಗಕ್ಕೆ ರುದ್ರಾಭಿಷೇಕವನ್ನು ಮಾಡಿಯಾರೆ? ನವ ಧರ್ಮ ದ್ರಷ್ಟಾರರಾಗಿ ಹೊಸ ಧರ್ಮವನ್ನು ಬಸವಣ್ಣನವರು ಕೊಡುವ ಪೂರ್ವದಲ್ಲಿ ಅವರು ಸ್ಥಾವರ (ಶಿವ) ಲಿಂಗೋಪಾಸಕರಾಗಿದ್ದರು. ನಂತರ ಅವರಿಂದ ಸೃಷ್ಟಿಕರ್ತನ ಕುರುಹು ಇಷ್ಟಲಿಂಗ ರೂಪು ತಾಳಿದೆ. ಶ್ರೀಗುರು ಬಸವ ಲಿಂಗಾಯ ನಮಃ ಎಂಬ ಮಂತ್ರ ಆಗಲೇ ಚಲಾವಣೆಗೆ ಬಂದಿತು. ಇದರಲ್ಲಿ ಶ್ರೀಗುರು ಬಸವ-ಗುರು ಬಸವ ವಾಚಕ, ಲಿಂಗಾಯ ನಮಃ-ದೇವ ವಾಚಕ. ಬುದ್ಧಂ ಶರಣಂ ಗಚ್ಛಾಮಿ ಬುದ್ಧನು ಹೇಳಿದ ಮಂತ್ರವಲ್ಲ; ನಂತರದಲ್ಲಿ ದಾರ್ಶನಿಕರು ಸೂತ್ರೀಕರಿಸಿದ ಮಂತ್ರ. ಸಾಮಾನ್ಯ ಜ್ಞಾನದಿಂದ ಚಿಂತನೆ ಮಾಡಿದರೆ ಗೊತ್ತಾಗುತ್ತದೆ, "ಇಷ್ಟಲಿಂಗಾರ್ಚನೆಗೆ, ಲಿಂಗ ಪದ ಸಹಿತವಾದ ಓಂ ಲಿಂಗಾಯ ನಮಃ ಎಂಬ ಷಡಕ್ಷರ ಮಂತ್ರ ಅಥವಾ ಓಂ ಶ್ರೀ ಲಿಂಗದೇವಾಯ ನಮಃ ಎಂಬ ನವಾಕ್ಷರ ಮಂತ್ರ ಸೂಕ್ತವಾಗಿದೆ." ಎಂಬುದು . ಚಕ್ರಗಳ ದೃಷ್ಟಿಯಿಂದಲೂ ಷಟ್ ಚಕ್ರಗಳಾದ ಆಧಾರ ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಆಜ್ಞಾ ದೃಷ್ಟಿಯಿಂದ ಓಂ ಲಿಂಗಾಯ ನಮಃ ಎಂಬ ಷಡಕ್ಷರಿಯು, ಸಹಸ್ರಾರ, ಶಿಖಾ ಮತ್ತು ಪಶ್ಚಿಮ ಚಕ್ರ ಸೇರಿಸಿದರೆ ನವಾಕ್ಷರ ಮಂತ್ರ ಓಂ ಶ್ರೀ ಲಿಂಗದೇವಾಯ ನಮಃ ಅತ್ಯಂತ ಸೂಕ್ತ.

? 5. 108 ಅಡಿಯ ಬೃಹತ್ ಮೂರ್ತಿಗೆ ಒಂದೂವರೆ ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಬಸವಣ್ಣನವರು ಮೂರ್ತಿ ಪೂಜೆಯ ವಿರೋಧಿಗಳು; ಬೃಹತ್ ಮೂರ್ತಿಯ ಬದಲು ಅದೇ ಹಣವನ್ನು ಧರ್ಮ ಪ್ರಚಾರ ಶರಣ ತತ್ತ್ವದ ಪ್ರಚಾರಕ್ಕೆ ಬಳಸಬಹುದಲ್ಲವೆ ? ಎಂಬುದಾಗಿ ಒಬ್ಬರು ಕೇಳಿದರು. ಇದಕ್ಕೆ ನಿಮ್ಮ ಉತ್ತರವೇನು ?

★ 108 ಮೂರ್ತಿಯ ನಿರ್ಮಾಣ ಪೂರ್ತಿಗೊಂಡಾಗ ಹೇಗೆ ಇದು ಧರ್ಮ ಪ್ರಚಾರಕ್ಕೆ ಸಹಾಯಕವಾಗುತ್ತದೆ ಎಂಬುದು ಎಲ್ಲರಿಗೆ ತಿಳಿಯುತ್ತದೆ. ಭವ್ಯ ಸ್ಮಾರಕಗಳ ಮೂಲಕ ಜನರನ್ನು ಆಕರ್ಷಿಸುವ ಕಲೆಯನ್ನು ಕ್ರೈಸ್ತ ಮತ್ತು ಬೌದ್ಧ ಧರ್ಮದಲ್ಲಿ ಕಾಣುತ್ತೇವೆ. ಮೈಸೂರಿಗೆ ಬಂದ ಪ್ರವಾಸಿಗರು ಸೇಂಟ್ ಫಿಲೋಮಿನಾ ಚರ್ಚ್, ಬಿಜಾಪುರಕ್ಕೆ ಬಂದವರು ಗೋಲ್ ಗುಂಬಜ್ ಹೇಗೆ ನೋಡಿ ಹೋಗುತ್ತಾರೆ, ಎಷ್ಟು ದೊಡ್ಡ ಸಮಾಜವಿದ್ದೂ ಸಹ ಲಿಂಗಾಯತರು ತಮ್ಮ ಶರಣ ಸಂಸ್ಕೃತಿಯನ್ನು ದೇಶ-ವಿದೇಶಗಳ ಜನರಿಗೆ ಪರಿಚಯ ಮಾಡಿಸುವ ಭವ್ಯ ಸ್ಮಾರಕಗಳನ್ನು ಮಾಡಲೇ ಇಲ್ಲ. ಕೂಡಲ ಸಂಗಮದಲ್ಲಿ ನಿರ್ಮಾಣವಾದ ಶರಣ ಮೂರ್ತಿಗಳು ಎಷ್ಟು ಜನರನ್ನು ಆಕರ್ಷಿಸುತ್ತಿವೆ ನೋಡಿರಿ. ಸ್ಮಾರಕಗಳ ಮೂಲಕ ನಾವು ತತ್ತ್ವ ಪ್ರಚಾರವನ್ನು, ಪರಂಪರೆಯ ರಕ್ಷಣೆಯನ್ನು ಇನ್ನೂ ಚೆನ್ನಾಗಿ ಮತ್ತು ಬೇಗನೆ ಮಾಡಬಹುದು.

? 6. ಲಿಂಗದೇವ ಪದವನ್ನು ಬಸವಣ್ಣನವರ ವಚನಗಳಲ್ಲಿ ಬಳಸಿದ್ದಾರೆ ಅದನ್ನು ನೀವು ಗುರುತಿಸಿ ಲಿಂಗಾಯತ ಧರ್ಮದ ದೇವರು ಲಿಂಗದೇವರು ಎಂಬುದನ್ನು ನಿರ್ದಿಷ್ಟ ಪಡಿಸಿ ಅಭಿನಂದನಾರ್ಹರಾಗಿದ್ದೀರಿ. ಆದರೆ ಈಗ ನಮಗಿರುವ ಸಂದೇಹ ಬಸವಣ್ಣನವರೇ ಏಕೆ ತಮ್ಮ ವಚನಾಂಕಿತ ಬದಲಿಸಿಕೊಳ್ಳಬಾರದಿತ್ತು ? ಅವರಿಗೆ ಹೊಳೆಯಲಿಲ್ಲವೆ ?

★ ಬಸವಣ್ಣನವರು ಬಹುದೇವತೋಪಾಸನೆಯಿಂದ ಏಕದೇವೋಪಾಸನೆಗೆ ಸಾಗುತ್ತಲೇ ಅವರಿಗೆ ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನಿಗಿಂತಲೂ ಸೃಷ್ಟಿಕರ್ತ ಲಿಂಗದೇವನು ಪರಮ ಶ್ರೇಷ್ಠ ಎನಿಸಿದೆ. ಹಾಗೆಯೇ ವಚನಾಂಕಿತವನ್ನು ಸಹ ಅವರು ಎಂದೇ ಸ್ಥಾವರಲಿಂಗೋಪಾಸನೆ ನಿಷೇಧಿಸಿದರು. ನಂತರ ಅದು ಬೆಳಕಿಗೆ ಬಂದುದು ಬದಲಿಸಿರಲೇ ಬೇಕು. ವಚನ ಸಾಹಿತ್ಯ ವನವಾಸಕ್ಕೆ ಒಳಗಾಯಿತು. ನಂತರ ಅದು ಬೆಳಕಿಗೆ ಬಂದುದು 15ನೆಯ ಶತಮಾನದಲ್ಲಿ. ಅಷ್ಟೊತ್ತಿಗೆ ಬಸವ ಧರ್ಮದ ಮೂಲ ಚೈತನ್ಯ ಬತ್ತಿ ಹೋಗಿತ್ತು. ಜನರು ನಾಯಕರಿಲ್ಲದೆ ನಿಸ್ಸಹಾಯಕರಾಗಿದ್ದಾಗ ಪುನಃ ಶೈವರು, ಪುರೋಹಿತಶಾಹಿ ಜನ ಒಳನುಗ್ಗಿ ಸಾಹಿತ್ಯವನ್ನು ಕಲುಷಿತಗೊಳಿಸಿದರು. ಅನುಭವ ಗೋಷ್ಠಿ ಎಂಬ ಶರಣ ಸಂಸ್ಕೃತಿಯ ಪದ ಶಿವಾನುಭವ ಗೋಷ್ಠಿಯಾಯಿತು, ಲಿಂಗದೇವ ಶಿವಲಿಂಗದೇವನಾದ, ವೀರಶೈವ ಪದ ದಾಳಿ ಮಾಡಿತು. ಪ್ರತಿ ಭಾನುವಾರ ಶೂನ್ಯ ಸಂಪಾದನೆ ಕುರಿತು ಪ್ರವಚನ ಹೇಳುತ್ತಿದ್ದೇನೆ. ಅದರ ಕಥಾನಾಯಕರಾದ ಅಲ್ಲಮಪ್ರಭು ದೇವರು ಅರಿತು ಮರೆತಾದರೂ ವೀರಶೈವ ಪದವನ್ನು ತಮ್ಮ ಸಮಗ್ರ ವಚನದಲ್ಲಿ ಒಂದು ಕಡೆ ಸಹ ಬಳಸಿಲ್ಲ. ಆದರೆ ಸಂಪಾದನಾಕಾರನಾದ ಗೂಳೂರು ಸಿದ್ಧವೀರಣ್ಣದೇವರು ಅಲ್ಲಮಪ್ರಭು ದೇವರನ್ನು ಶ್ರೀ ವೀರಶೈವಾಚಾರ ಶಿರೋರತ್ನ, ಶ್ರೀ ವೀರಶೈವಾಚಾರ ಪ್ರಮಥ ನಾಯಕ, ಶ್ರೀ ವೀರಶೈವಾಚಾರ ದೀಕ್ಷಾಚಾರ್ಯ ಎಂದು ಬಣ್ಣಿಸುತ್ತಾನೆ.

ವಿಜಯನಗರದ ಅರಸು ಪ್ರೌಢದೇವರಾಯ ಅಥವಾ 2ನೆಯ ದೇವರಾಯ 1419 ರಿಂದ 1447 ರ ಆಳ್ವಿಕೆ ನಡೆಸಿದ್ದು ಆತನು ವೀರಶೈವನಾದ. ಆ ಕಾಲದಲ್ಲಿ ಶೈವ ಮಾರ್ಗದ ಪುನರುತ್ಥಾನಕ್ಕೆ ಒಳ್ಳೆಯ ಅವಕಾಶ ಸಿಕ್ಕಿತು. ಈ ಹಿನ್ನೆಲೆಯಲ್ಲಿ ಲಿಂಗಾಯತ ಧರ್ಮದ ಕವಿಗಳು, ಸಂಪಾದನಾಕಾರರು ಶೈವ-ವೀರಶೈವಗಳ ಮುಸುಕನ್ನು ಹೊದ್ದಿಸಿ ವಚನ ಸಾಹಿತ್ಯವನ್ನು ಕಗ್ಗತ್ತಲೆಯಿಂದ ಹೊರತಂದಂತೆ ಕಾಣುತ್ತದೆ. ಹೀಗಾಗಿ ವಚನ ಸಾಹಿತ್ಯ ವನವಾಸದಿಂದ ಬಿಡುಗಡೆಗೊಂಡರೂ ಶೈವದ ಛದ್ಮ ವೇಷ ತೊಟ್ಟು ಅಜ್ಞಾತ ವಾಸವನ್ನು ಹೊಂದುವಂತಾಗಿದೆ. ವಚನಗಳನ್ನು ಪ್ರತಿ ಮಾಡುವವರು ಆಳವಾದ ತಾತ್ತ್ವಿಕ ಜ್ಞಾನ ಇಲ್ಲದ್ದರಿಂದ ಬದಲಾವಣೆಗೊಂಡ ಲಿಂಗದೇವ ಇದ್ದರೂ ಪುನಃ ಕೂಡಲ ಸಂಗಮದೇವಕ್ಕೆ ಮೊರೆ ಹೋಗಿರುವ ಸಾಧ್ಯತೆ ಇದೆ. ಇದೆಲ್ಲ ಏನೇ ಇರಲಿ, ಬಸವಣ್ಣನವರು ವಿವರಿಸುವ ದೇವರ ಕಲ್ಪನೆಯನ್ನು ಅರ್ಥ ಮಾಡಿಕೊಂಡರೆ ಆಗ 'ಲಿಂಗದೇವ' ವಚನಾಂಕಿತ ಮಹತ್ವ ತಿಳಿಯಲು ಸಾಧ್ಯ!

? ಆರ್. ಶಿವಲೀಲಾ, ಜಾಲಹಳ್ಳಿ, ಬೆಂಗಳೂರು

ಯಾವುದೇ ರಾಷ್ಟ್ರದ ಪ್ರಗತಿ ಸಮಾಜ ಮತ್ತು ಸರ್ಕಾರ ಜೋಡಿ ಎತ್ತುಗಳಾಗಿ ಬಂಡಿಯನ್ನು ಮುನ್ನಡೆಸಿದರೆ ಮಾತ್ರ ಸಾಧ್ಯ. ಇಂದಿನ ಪರಿಸ್ಥಿತಿ ನಾನಿತ್ತ ಎಳೆದರೆ, ತಾನತ್ತಲೆಳೆಯುವುದು ಎಂಬಂತಾಗಿದೆ. ಸ್ಪಷ್ಟ ಬಹುಮತವಿಲ್ಲದ ಸರ್ಕಾರ ತನ್ನ ತಕ್ಕಡಿಯಲ್ಲಿರುವ ಕಪ್ಪೆಗಳನ್ನು ಹಾರಿ ಹೋಗದಂತೆ ನೋಡಿಕೊಂಡು ಮುಂದಿನ ಚುನಾವಣೆಯನ್ನು ಎದುರಿಸಲಿಕ್ಕೆ ಸಜ್ಜಾಗುವುದರಲ್ಲಿಯೇ ಕಾಲ ವ್ಯಯಿಸುವ ಸರ್ಕಾರ ಒಂದು ಕಡೆಯಾದರೆ, ತನ್ನ ಬದುಕನ್ನು ಸಾಗಿಸಲು ಹೆಣಗಾಡುತ್ತಿರುವ ಶ್ರೀ ಸಾಮಾನ್ಯನಿಗೆ ಸರ್ಕಾರದ ವಿರುದ್ಧ ಸಮರ ಸಾರುವ ಆತ್ಮಸ್ಥೈರ್ಯ ಇಲ್ಲವಾಗಿದೆ. ಹೀಗೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವ ಸರ್ಕಾರ ಮತ್ತು ಸಮಾಜದಿಂದ "ಬಸವ ರಾಜ್ಯ" ಸ್ಥಾಪನೆ ಸಾಧ್ಯವೆ? ಇಲ್ಲ ಕನಸೆ? ಆಗುವುದಾದರೆ ಹೇಗೆ?

★ ಇಂದು ಸಮಾಜ, ರಾಷ್ಟ್ರ ಸಾಗಿರುವ ದಿಕ್ಕು ನೋಡಿದರೆ ಯಾವ ಬೆಳಕೂ ಕಾಣಬರುತ್ತಿಲ್ಲ. ಸಮಷ್ಟಿಯನ್ನು ತಿದ್ದಲು ಆಗದು, ಆದರ್ಶ ವ್ಯಕ್ತಿಗಳು ತಮ್ಮ ಅಂತರಂಗದಲ್ಲಿ, ಸುತ್ತಲಿನ ಪರಿಸರದಲ್ಲಿ ಬಸವ ರಾಜ್ಯ ಅರ್ಥಾತ್ ಕಲ್ಯಾಣ ರಾಜ್ಯ ಅರ್ಥಾತ್ ಮೌಲ್ಯ ಸಹಿತ ವಾತಾವರಣ ನಿರ್ಮಾಣಕ್ಕೆ ವೈಯಕ್ತಿಕವಾಗಿ ಪ್ರಯತ್ನಿಸಬೇಕು ಅಷ್ಟೆ! ಒಂದು ಕಡೆ ಬೃಹತ್ತಾದ ಅಜ್ಞಾನಯುಕ್ತ ಸಮಾಜ; ಇನ್ನೊಂದು ಕಡೆ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಧೂರ್ತ ನೇತಾರರು. ಸ್ವಾತಂತ್ರ್ಯ ಹೋರಾಟದಂತಹ ಮತ್ತೊಂದು ಬಹುದೊಡ್ಡ ಆಂದೋಲನ ಆಗಬೇಕು, ಆದರೆ ಅಂಥ ಯಾವ ಆಂದೋಲನಗಳು ಆಗಲಾರದಂತೆ ಮೊಳಕೆಯಲ್ಲೇ ಚಿವುಟಿ ಹಾಕುವ ಮೇಲೆ ಸೂಚಿಸಿದ ಧೂರ್ತ ನೇತಾರರು ಸದಾ ಸನ್ನದ್ಧರಾಗಿದ್ದಾರೆ. ಆದ್ದರಿಂದ ವೈಯಕ್ತಿಕ ನೆಲೆಯಲ್ಲೇ ವ್ಯಕ್ತಿಯು ಒಳ್ಳೆಯವನು, ಆದರ್ಶವಾದಿಯೂ ಆಗಿ ತನ್ನ ಕೈಲಾದಷ್ಟು ಒಳ್ಳೆಯದು ಮಾಡಲು ಶ್ರಮಿಸಬೇಕು. ಇದೊಂದೇ ಉಳಿದಿರುವ ಮಾರ್ಗ!

? ಮಾತೆ ಕಸ್ತೂರಿದೇವಿ, ಬಸವ ಗಂಗೋತ್ರಿ

1. ತಾಯಿ ಗರ್ಭಿಣಿ ಇರುವಾಗ ಹುಟ್ಟಲಿರುವ ಪ್ರತಿ ಮಗುವಿಗೂ ಗರ್ಭಲಿಂಗ ಸಂಸ್ಕಾರ ಮಾಡಬೇಕೋ ಅಥವಾ ಮೊದಲನೆಯ ಮಗುವಿಗೆ ಮಾಡಿದರೆ ಸಾಕೋ?

★ ಗೃಹಿಣಿ ಚೊಚ್ಚಲು ಗರ್ಭಿಣಿಯಿದ್ದಾಗ ಸೀಮಂತ ಮಾಡುವರು (ಉತ್ತರ ಕರ್ನಾಟಕದಲ್ಲಿ ಕುಬುಸದ ಕಾರ್ಯಕ್ರಮ ಎನ್ನುವರು) ಸಂತೋಷ ಸಂಭ್ರಮದ ಈ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮೊದಲನೆಯ ಗರ್ಭಕ್ಕೆ ಮಾತ್ರ ಮಾಡಿದರೆ ಸಾಕು. ಆದರೆ, ಗರ್ಭ ಲಿಂಗಧಾರಣೆಯನ್ನು ಮಾತ್ರ ಎಲ್ಲ ಮಕ್ಕಳಿಗೆ ಮಾಡಿಸಲೇ ಬೇಕು. ಏಕೆಂದರೆ ಅವರವರ ಬದುಕು, ಭವಿಷ್ಯ, ಏಳಿಗೆ ಪ್ರತ್ಯೇಕವಾಗಿಯೇ ಇರುವುದಷ್ಟೆ!

? 2. ಸತ್ಯವನ್ನು ನಿರ್ಣಯಿಸುವದರಲ್ಲಿ ಕಾಲದ ಪಾತ್ರ ದೊಡ್ಡದೊ? ಅಥವಾ ಅನುಭವ ಜ್ಞಾನದ ಪಾತ್ರ ದೊಡ್ಡದೊ?

★ ಕಾಲಕ್ಕಿಂತ ಅನುಭವ ಜ್ಞಾನದ ಪಾತ್ರ ದೊಡ್ಡದು. ಅದನ್ನೇ ಸೂಚ್ಯವಾಗಿ ಚನ್ನಬಸವಣ್ಣನವರು ಅಕ್ಕ ಮಹಾದೇವಿಯನ್ನು ಹೊಗಳುತ್ತ ಹೀಗೆ ಕೇಳುವುದು. 'ಅಜಕೋಟಿ ಕಲ್ಪವರ್ಷದವರೆಲ್ಲರೂ ಹಿರಿಯರೆ?' ಎಂದು. ಅಜ್ಞಾನದ ಸ್ಥಿತಿಯಲ್ಲಿ ಎಷ್ಟು ಕಾಲ ಕಳೆದರೂ ಸತ್ಯದ ದರ್ಶನವಾಗದು. ಅನುಭವ ಜ್ಞಾನ ಉಂಟಾದಾಗ ಸತ್ಯದ ದರ್ಶನವಾಗುವುದು. ಆದ್ದರಿಂದ ಅನುಭವ ಜ್ಞಾನವೇ ಶಕ್ತಿಶಾಲಿ.

? ಗುರು ಬಸವ ಪ್ರಭು, ರಾಷ್ಟ್ರೀಯ ಬಸವ ದಳ, ಬಳ್ಳಾರಿ

ಯೋಗಿರಾಜ ಶಿವನ ಫೋಟೋದಲ್ಲಿ ಮತ್ತು ಮೂರ್ತಿಗಳಲ್ಲಿ ಜನಿವಾರ ಹಾಕಲಾಗಿರುತ್ತದೆ. ಶಿವನು ಚತುರ್ವರ್ಣಗಳಲ್ಲಿ ಯಾವ ವರ್ಣಕ್ಕೆ ಸೇರಿದವನು?

★ ಯೋಗಿರಾಜ ಅತ್ಯಂತ ಪುರಾತನ ಐತಿಹಾಸಿಕ ವ್ಯಕ್ತಿ. ಅವನ ಕಾಲದಲ್ಲಿ ಚತುರ್ವರ್ಣಗಳ ಕಲ್ಪನೆ ಇರಲಿಲ್ಲ. ನಂತರ ಆರ್ಯರು ಬಂದರು. ಆಗ ವರ್ಣಗಳ ಕಲ್ಪನೆ ಬಂದಿತು. ಶಿವನು ಯೋಗಿ ಆತನಿಗೆ ವರ್ಣ, ಜಾತಿ, ಕುಲ, ಮತಗಳ ಗೊಂದಲವಿಲ್ಲ. ಆರ್ಯರು ಬಂದಾಗ ಶಿವನು ಅತ್ಯಂತ ಪ್ರಭಾವಶಾಲಿ ಪೂಜಾರ್ಹ ದೇವತೆಯಾಗಿದ್ದ. ಅವರು ಪೂಜಿಸುವುದು ಅನಿವಾರ್ಯವಾದಾಗ ಜನಿವಾರವನ್ನು ತೊಡಿಸಿ ಪೂಜಿಸಿದರು. ಆದರೆ ನಿಜವಾಗಿಯೂ ಹೇಳುವುದಾದರೆ ಸಮತಾವಾದಿ ಶಿವನಿಗೆ ಜನಿವಾರ ತೊಡಿಸುವುದು ತಪ್ಪು. ಜನಿವಾರಕ್ಕೆ ಇರುವ ಇನ್ನೊಂದು ಪದ ಯಜ್ಞೋಪವೀತ. ಇದರ ಧಾರಣೆ ವೇದಗಳ ಅಧ್ಯಯನಕ್ಕೆ, ಬೋಧನೆಗೆ, ಯಜ್ಞ ನಿರ್ವಹಣೆಗೆ ಅಧಿಕಾರ ನೀಡುತ್ತದೆ. ಶಿವನು ಯಜ್ಞ ವಿರೋಧಿ ಅಂದಾಗ ಆ ದೃಷ್ಟಿಯಿಂದಲೂ ಶಿವನಿಗೆ ಜನಿವಾರ ತೊಡಿಸುವುದು ತಪ್ಪು.

ಬಸವ ಕಂದಳ ವಚನ

ಮನೆ ಬಿಟ್ಟು ಹೊರಟವರೆಲ್ಲ ವಿರಾಗಿಗಳಲ್ಲ
ಮದುವೆಯಾಗದವರೆಲ್ಲ ಬ್ರಹ್ಮಚಾರಿಗಳಲ್ಲ
ಪುರಾಣ ಹೇಳುವವರೆಲ್ಲ ಪುಣ್ಯಪುರುಷರಲ್ಲ
ಶಿಷ್ಯರುಳ್ಳವರೆಲ್ಲ ಸದ್ಗುರುಗಳಾಗಿರುವುದಿಲ್ಲ
ಮಠಕಟ್ಟಿದವರೆಲ್ಲ ಮೋಹಬಿಟ್ಟಿರುವುದಿಲ್ಲ
ಲಿಂಗಕಟ್ಟಿದವರೆಲ್ಲ ಲಿಂಗಾಯತರಾಗುವುದಿಲ್ಲ
ಪ್ರವಚನ ಮಾಡುವವರೆಲ್ಲ ಲಿಂಗಾನಂದ ಅಪ್ಪಾಜಿಯವರಾಗುವುದಿಲ್ಲ
ಅಪ್ಪಾಜಿಯವರ ಶಿಷ್ಯರೆಲ್ಲ ಬಸವಾತ್ಮಜೆಯಾಗಿಲ್ಲ
ಬಸವಕಂದಳ ಪ್ರಿಯ ಸರ್ವೇಶ ಪ್ರಭುವೇ
ತನ್ನ ತಾನರಿಯದವರ ನೀನೊಪ್ಪುವುದಿಲ್ಲ, ಅಪ್ಪುವುದಿಲ್ಲ

-ಸರೋಜಮ್ಮ ನಾಗರಾಜು

ಗುಡ್ಡಾಪುರ ದಾನಮ್ಮನ ಚರಿತ್ರೆಯಲ್ಲಿ ಪಂಚಪೀಠಾಧೀಶರ ಹಸ್ತಕ್ಷೇಪ

ಗುಡ್ಡಾಪುರದ ದಾನಮ್ಮನ ಗುಡಿಯ ಪೂಜಾರಿಗಳಲ್ಲೊಬ್ಬರಾಗಿ, ಸೈನ್ಯದಲ್ಲಿ ಸೇರಿ ಸೇವೆ ಸಲ್ಲಿಸಿ, ಅಲ್ಲಿಂದ ನಿವೃತ್ತಿ ಪಡೆದು ಮೀರಜಿನಲ್ಲಿ ನೆಲೆಸಿರುವ ಶರಣ ಸಿದ್ಧರಾಮ ಸೋಮಯ್ಯ ಪೂಜಾರಿಯವರದು ಅಭಿನಂದನಾರ್ಹ ಹೋರಾಟ. ವಚನ ಸಾಹಿತ್ಯವನ್ನು ಓದುತ್ತಲಿರುವ ಕರ್ನಾಟಕದ ಜನರಿಗೆ ಲಿಂಗಾಯತ ಧರ್ಮದ ಇತಿಹಾಸ ಕುರಿತು, ವಚನ ಸಾಹಿತ್ಯ ಕುರಿತು, ಅಲ್ಪ ಸ್ವಲ್ಪವಾದರೂ ಜ್ಞಾನವಿದೆ. ಹೀಗಾಗಿ ಡಾ.ಶಿವಕುಮಾರಸ್ವಾಮಿ, ಡಾ.ವಿದ್ಯಾಶಂಕರ್, ಡಾ.ಸಾ.ಶಿ. ಮರುಳಯ್ಯ ಮುಂತಾದವರು ಏನೇ ಸುಳ್ಳನ್ನು ಸಾಧಿಸಹೋದರೂ ಅಷ್ಟು ನಡೆಯದು. ಮಹಾರಾಷ್ಟ್ರ ಲಿಂಗಾಯತರಲ್ಲಿ ಬಹುಪಾಲು ಜನಕ್ಕೆ ಕನ್ನಡ ಬರದು, ವಚನ ಸಾಹಿತ್ಯ ತಿಳಿಯದು. ಆದರೂ ಬಸವಣ್ಣನವರು ನಮ್ಮ ಗುರು ಎಂಬ ಭಾವ ಅಂತರ್ಗತವಾಗಿದೆ. ಪಂಚ ಪೀಠಾಧೀಶರಲ್ಲಿ ಒಂದಿಬ್ಬರು ಓಡಾಡುವ ಪೂನಾ, ಬಾರ್ಸಿ, ಸೊಲ್ಲಾಪುರ ಇಂಥಲ್ಲಿ ಜನರ ಮನಸ್ಸನ್ನು ಕಲಕುವ ಕಾರ್ಯ ನಡೆದಿದೆ. ಈ ಸನ್ನಿವೇಶ ಬಳಸಿಕೊಂಡು ಪಂಚಪೀಠಾಧೀಶರ ಆಜ್ಞಾನುವರ್ತಿಗಳಾದ ಕೆಲವರು ಹೊಸ ಹೊಸ ಕೃತ್ರಿಮ ಸಾಹಿತ್ಯ ರಚಿಸುತ್ತಲಿರುತ್ತಾರೆ. ಇಂಥ ಕೃತ್ರಿಮ ಗ್ರಂಥಗಳನ್ನು, ಬರಹಗಳನ್ನು ತಕ್ಷಣವೇ ಖಂಡಿಸುವ ಕಾರ್ಯವನ್ನು ಶರಣ.ಸಿದ್ಧರಾಮ ಪೂಜಾರಿಯವರು ಮಾಡುತ್ತಾರೆ. ಪತ್ರಿಕೆಗಳಿಗೆ ಲೇಖನ ಬರೆಯುವ ಮೂಲಕ ಶರಣ.ಸಿದ್ಧರಾಮ ಪೂಜಾರಿಯವರು ಮಹತ್ವ ಪೂರ್ಣ ಸೇವೆ ಮಾಡುತ್ತಿದ್ದಾರೆ. ತಮ್ಮ ಸ್ವಂತ ಹಣವನ್ನು ಈ ಗಣಾಚಾರದ ಕೆಲಸಕ್ಕೆ ವಿನಿಯೋಗಿಸುವ ಮೀರಜ್ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಸಿದ್ಧರಾಮಯ್ಯ ಪೂಜಾರಿಯವರ ಸತ್ಯ ನಿಷ್ಠೆಯನ್ನು ಮೆಚ್ಚಿಕೊಳ್ಳಬೇಕು.

ಇದೇ 2005ರ ಮಾರ್ಚ್ 8 ಮಹಾಶಿವರಾತ್ರಿಯಂದು ಒಂದು ಪುಸ್ತಕವನ್ನು ಶರಣ.ಸಿದ್ಧರಾಮ ಪೂಜಾರಿ ಅವರು ಬಿಡುಗಡೆ ಮಾಡಿದ್ದಾರೆ. ಅದು ಹೊಟಗಿ ಬೃಹನ್ಮಠದ ಪಂಡಿತ ನಾಗನಾಥ ರುದ್ರಮುನಿ ಶಾಸ್ತ್ರಿ ಬರೆದ "ಶ್ರೀ ಸುಕ್ಷೇತ್ರ ಗುಡ್ಡಾಪುರ ದಾನಮ್ಮ ದೇವಿ ಚರಿತಾಮೃತ" ಎಂಬ ಗ್ರಂಥಕ್ಕೆ ಸವಾಲು ಎಸೆದು, ಅದು ಕೃತ್ರಿಮ ಇತಿಹಾಸದಿಂದ ಕೂಡಿದ ಪುಸ್ತಕ ಎಂದು ಆ ಕೃತಿಯ ವಿಮರ್ಶೆ ಮಾಡಲಾದ ಗ್ರಂಥ. ಪಂಚ ಪೀಠಾಧೀಶರು ಮತ್ತು ಅವರ ಆಜ್ಞಾನ ವರ್ತಿಗಳಾದ ಶಾಖಾ ಮಠದವರು, ಅವರ ಕೃಪಾ ಪೋಷಿತ ಸಾಹಿತಿಗಳು ಕಾಲ್ಪನಿಕ ವ್ಯಕ್ತಿಗಳನ್ನು ಸೃಷ್ಟಿಸುವುದರಲ್ಲಿ, ಕೃತ್ರಿಮ ಇತಿಹಾಸ ಬರೆಯುವಲ್ಲಿ ಸಿದ್ಧಹಸ್ತರು.

ಶ್ರೀ ತ.ಸು.ಶಾಮರಾಯರು ಶಿವಶರಣರ ಕಥಾರತ್ನಕೋಶ ಎಂಬ ಅತ್ಯಂತ ಮಹತ್ವಪೂರ್ಣ ಕೃತಿಯನ್ನು ರಚಿಸಿದ್ದು, ಇದು ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು ಇಲ್ಲಿಂದ 1967ರಲ್ಲಿ ಇದರ ಮೊದಲನೆಯ ಆವೃತ್ತಿ ಪ್ರಕಟವಾಗಿದೆ. ಅಸಂಖ್ಯಾತ ಕಾವ್ಯ, ಪುರಾಣ ಗ್ರಂಥಗಳನ್ನು ಓದಿ ವಿಪುಲವಾದ ಮಾಹಿತಿಯನ್ನು ಸಂಗ್ರಹಿಸಿರುವ ಪರಿಶ್ರಮಪೂರ್ಣ ಕೆಲಸವನ್ನು ಶ್ರೀ.ತ.ಸು.ಶಾಮರಾಯರು ಮಾಡಿದ್ದಾರೆ. ಲಭ್ಯವಿರುವ ಪುರಾಣ ಮತ್ತು ಕಾವ್ಯಗಳ ಆಧಾರದ ಮೇಲೆ ಮಾಹಿತಿ ಸಂಗ್ರಹಿಸಿರುವುದರಿಂದ ಅದರಲ್ಲಿ ಕೆಲವು ಪೌರಾಣಿಕ ಮಾತುಗಳು ಬಂದರೂ ಐತಿಹಾಸಿಕ ಸಂಗತಿಗಳಿಗೆ "ಶಿವಶರಣರ ಕಥಾರತ್ನಕೋಶ" ಒಂದು ಮಹತ್ವ ಪೂರ್ಣ ಆಕರ. ಅದರಲ್ಲಿ ದಾನಮ್ಮನನ್ನು ಕುರಿತು ಬರುವ ವಿವರಗಳು ಹೀಗಿವೆ.

1. ಜತ್ತ ಸಂಸ್ಥಾನದ (ಇಂದಿನ ಹೆಸರು) ಉಮರಾಣಿ ಎಂಬ ಊರಿನಲ್ಲಿದ್ದ ಅನಂತರಾಯ ಮತ್ತು ಸಿರಸಮ್ಮ ಎಂಬ ಅಕ್ಕಸಾಲಿಗ ಶಿವಭಕ್ತ ದಂಪತಿಗಳ ಗರ್ಭದಲ್ಲಿ ಜನಿಸಿದ ಮಗುವಿಗೆ ಲಿಂಗಮ್ಮನೆಂದು ಹೆಸರಿಡಲಾಯಿತು. ಸಾತ್ವಿಕ ಸ್ವಭಾವದ ಈ ಬಾಲೆ ಯೌವ್ವನಕ್ಕೆ ಬಂದ ನಂತರ ಭಕ್ತಿ ಭಾವ ಪ್ರೇರಿತಳಾಗಿ ಬಸವ ಕಲ್ಯಾಣಕ್ಕೆ ನಡೆದಳು.

2. ಕಲ್ಯಾಣಕ್ಕೆ ಹೋದ ಈಕೆ ಮಹಾದೇವಿ ಎಂಬ ಕಡುಬಡವಿಯೋರ್ವಳ ಮನೆಯಲ್ಲಿ ಆಶ್ರಯ ಪಡೆದಳು. ತಂದೆಯು ಬಂದು ವಾಪಸ್ಸು ಬರಲು ಒತ್ತಾಯ ಮಾಡಲು, ಒಂದು ವರ್ಷ ಕಲ್ಯಾಣದಲ್ಲಿ ಶರಣರ ಸತ್ಸಂಗದಲ್ಲಿದ್ದು ವಾಪಸ್ಸು ಬರುವುದಾಗಿ ಆಶ್ವಾಸನೆ ನೀಡಿದಳು.

3. ಒಂದು ದಿವಸ ಮಹಾಮನೆಯ ಬಳಿಯ ಉದ್ಯಾನವೊಂದರಲ್ಲಿ ಧ್ಯಾನಾಸಕ್ತಳಾಗಿ ಕುಳಿತ ಲಿಂಗಮ್ಮನನ್ನು

ಕಂಡ ಬಸವಣ್ಣನವರು ನೀಲಾಂಬಿಕೆಯೊಡನೆ ಹೋಗಿ ಆಕೆಯಲ್ಲಿದ್ದ ಆಧ್ಯಾತ್ಮಿಕ ಸಾಧಕ ಪ್ರವೃತ್ತಿ ಕಂಡು ಅನುಗ್ರಹಿಸಿ, ಮಹಾಮನೆಗೆ ಕರೆತಂದರು. ಶರಣರ ಮಧ್ಯೆ ಹಲವು ಕಾಲ ಇದ್ದಳು.

4. ಸಂಕ ಗ್ರಾಮದ ಸಂಗಮನಾಥ ಎಂಬ ತರುಣ ಶರಣನನ್ನು ವಿವಾಹವಾದಳು. ಬಸವಣ್ಣನವರು ಉಭಯತರನ್ನೂ ಆಶಿಸಿ, ತಮ್ಮೂರಿಗೆ ಹೋಗಿ ಧರ್ಮಪ್ರಚಾರ ಕಾರ್ಯ, ದಾಸೋಹ ಸೇವೆಯನ್ನು ಕೈಗೊಳ್ಳಬೇಕೆಂದು ಹರಸಿ, ವರದಾನಿ, ದಾನಮ್ಮನಾಗು ಎಂದು ಕಳಿಸಿದರು.

5. ಮುಂದೆ ದಾನಮ್ಮ ಮತ್ತು ಸಂಗಮನಾಥ (ಸೋಮನಾಥ ಎಂಬ ಹೆಸರೂ ಉಲ್ಲೇಖಗೊಂಡಿದೆ) ದಂಪತಿಗಳು ಕಲ್ಯಾಣದಿಂದ ಬಂದು ಗುಡ್ಡಾಪುರ ಎಂಬಲ್ಲಿ ನೆಲೆಸಿದರು. ಧರ್ಮಪ್ರಚಾರ, ಲಿಂಗದೀಕ್ಷೆ, ಅನ್ನ ದಾಸೋಹಗಳಿಂದ ದಾನಮ್ಮನ ಕೀರ್ತಿ ವಿಸ್ತಾರಗೊಂಡಿತು.

6. ದಂಪತಿಗಳು ಲಿಂಗಾಯತ ಧರ್ಮವನ್ನು ಹಬ್ಬಿಸುವ ಆಕಾಂಕ್ಷೆಯಿಂದ ವ್ಯಾಪಕವಾಗಿ ಸಂಚರಿಸಿದರು, ತೆಲುಗು ನಾಡಿನ ಆದವಾನಿ (ಆಗ ಜತ್ತ, ಗುಡ್ಡಾಪುರ, ಸೊಲ್ಲಾಪುರ, ಆದವಾನಿ ಕನ್ನಡ ಪ್ರದೇಶಗಳಾಗಿದ್ದವು), ಶ್ರೀ ಶೈಲದ ಬಳಿಯ ಅಲಂಪುರ ಮುಂತಾದಲ್ಲಿ ದೀಕ್ಷೆ ನೀಡಿದಳು.

7. ದಕ್ಷಿಣದ ಯಾತ್ರೆಯನ್ನು ದಂಪತಿಗಳು ಕೈಗೊಂಡರು. ಕಾವೇರಿ ಕಪಿಲಾ ತೀರಗಳನ್ನು ಸಂದರ್ಶಿಸಿ, ರಾಮೇಶ್ವರಕ್ಕೆ ಹೋದರು. ಅಲ್ಲಿ ಬಸವೇಶ್ವರನ ಗುಡಿಯನ್ನು ಕಟ್ಟಿಸಿದಳು. ಚೋಳರಾಜನ ಕಾಂಚೀಪುರಕ್ಕೆ ಹೋದರು. ಅಲ್ಲಿ ಸಾಕಷ್ಟು ಜನ ವೈಷ್ಣವರು ಪರಿವರ್ತನೆಗೊಂಡರು ; ನಂತರ ಉತ್ತರಕ್ಕೆ ಪ್ರಯಾಣ ಮಾಡಿ ಕಾಶಿಯನ್ನು ಸಂದರ್ಶಿಸಿದರು . ಸೊನ್ನಲಾಪುರದ ಸಿದ್ಧರಾಮೇಶ್ವರರ ಬಳಿಗೆ ಬಂದು , ಕೆಲಕಾಲ ಇದ್ದು ಕೂಡಲಸಂಗಮ ಬಾಗೇವಾಡಿಗಳನ್ನೂ ಸಂದರ್ಶಿಸಿ ಗುಡ್ಡಾಪುರಕ್ಕೆ ಹಿಂತಿರುಗಿ ಕೆಲಕಾಲವಿದ್ದು ಲಿಂಗೈಕ್ಯರಾದರು . ಅಲ್ಲಿಯೇ ದಾನಮ್ಮನ ಗುಡಿ ಇದೆ .

[ಶಿವಶರಣರ ಕಥಾರತ್ನಕೋಶ ಪುಟ 385-386. ಆಧಾರ: ಹಳಕಟ್ಟಿಯವರ ಅಮರ ಗಣಾಧೀಶ್ವರರ ಚರಿತ್ರೆಗಳು. ಶರಣ ಚರಿತಾಮೃತ]

ಇನ್ನು ಕೆಲವು ಸಂಗತಿಗಳೆಂದರೆ, ಕಲ್ಯಾಣ ಕ್ರಾಂತಿಯ ನಂತರ ವಚನ ಸಾಹಿತ್ಯವನ್ನು ಸಂರಕ್ಷಿಸಲು ಶರಣರು ಖಡ್ಗ ಹಿಡಿದು ಹೋರಾಟ ಮಾಡುವ ಸನ್ನಿವೇಶ ಒದಗಿದಾಗ ದಾನಮ್ಮ-ಸಂಗಮ(ಸೋಮ)ನಾಥರು ಗಣಾಚಾರದಳದೊಡನೆ ಹೋಗಿ ಮುರುಗೋಡದ ಹೋರಾಟದಲ್ಲಿ ಅಕ್ಕನಾಗಮ್ಮನಿಗೆ ನೆರವಾದರು ಮಹಾರಾಷ್ಟ್ರದಲ್ಲಿ ಲಿಂಗಾಯತ ಧರ್ಮೀಯರ ಸಂಖ್ಯೆ ದಟ್ಟವಾಗಿ ಇರಲು ಮುಖ್ಯ ಸೂತ್ರಧಾರಿಗಳು ಲಿಂಗಾಂಗಯೋಗಿ ಸಿದ್ಧರಾಮೇಶ್ವರ ಮತ್ತು ವರದಾನಿ ಗುಡ್ಡವ್ವೆ (ಗುಡ್ಡಾಪುರದ ದಾನಮ್ಮ ಶರಣೆ) ಎಂಬುದು ಉಲ್ಲೇಖನಾರ್ಹ. ಅವರು ವ್ಯಾಪಕವಾಗಿ ಸಂಚರಿಸಿ ಲಿಂಗದೀಕ್ಷೆ ನೀಡಿದ್ದಾರೆ. ಹೀಗಾಗಿಯೇ ಉಭಯತರೂ ಜನಪ್ರಿಯ ಶರಣರಾಗಿದ್ದಾರೆ. ನೊಳಂಬ ಸಮಾಜದ ರಾಜವಂಶಿಕರು ಸಿದ್ಧರಾಮೇಶ್ವರರಿಂದ ಅನುಗ್ರಹಿತರಾದ ಕಾರಣ ಅವರನ್ನು ತಮ್ಮ ಕುಲಗುರು ಎಂದು ಆರಾಧಿಸುತ್ತಾರೆ. ಪಂಚಮಸಾಲೆ ಜನಾಂಗದವರು ದಾನೇಶ್ವರಿಯಿಂದ ದೀಕ್ಷಿತರಾಗಿರುವ ಕಾರಣ ತಮ್ಮ ಕುಲದೇವತೆ ಎಂದು ಆರಾಧಿಸುತ್ತಾರೆ. ಇಂಥ ಶರಣ ಪರಂಪರೆ ಹೊಂದಿದ ನಮಗೆ ಅತೀವ ಹೆಮ್ಮೆ ಎನಿಸುತ್ತದೆ.

ಪಂಚಪೀಠಾಧೀಶರ ಕುತಂತ್ರ

ಆದರೆ, ದಾನಮ್ಮನ ಚರಿತ್ರೆಯನ್ನು ತಿರುಚಿ ಪಂಚಪೀಠದ ಅನುಯಾಯಿಯಾದ ಪಂಡಿತ ನಾಗನಾಥ ರುದ್ರಮುನಿ ಶಾಸ್ತ್ರಿ ಬೃಹನ್ಮಠ, ಹೊಟಗಿ ಇವರು ರಚಿಸಿದ ದಿ.25-9-2004 ರಂದು ಬಿಡುಗಡೆಯಾದ ಶ್ರೀ ಸುಕ್ಷೇತ್ರ ಗುಡ್ಡಾಪುರ ದಾನಮ್ಮದೇವಿಯ ಚರಿತಾಮೃತ ಕೃತಿಯ ವಿವರಗಳನ್ನು ಕೇಳಿರಿ.

ಗುಡ್ಡಾಪುರದಲ್ಲಿ ಒಂದು ಹಿರೇಮಠವಿದ್ದು ಇದರ ಅಧಿಕಾರಿಯಾಗಿದ್ದ ಶಾಂತವೀರ ಶಿವಾಚಾರ್ಯ ಉರ್ಫ ಗುರು ಬಸಯ್ಯ ಹಿರೇಮಠರು ಸಮರ್ಥವಾಗಿ ಆಡಳಿತ ನಡೆಸದೆ ಕೆಟ್ಟ ಹೆಸರು ತೆಗೆದುಕೊಂಡಿದ್ದರಿಂದ ಅವರನ್ನು ರಂಭಾಪುರಿ ಶ್ರೀಗಳು ದಿ.4-4-2000ದ ಪತ್ರದ ಮೂಲಕ ಪದಚ್ಯುತ ಗೊಳಿಸಿ ಶ್ರೀ ಸಂಗಮೇಶ್ವರ ದೇವರು ಎಂಬುವವರನ್ನು ನೇಮಿಸಲಾಯಿತು.(ಪುಟ 2). ಆದರೂ ಅವರು

ಅಧಿಕಾರ ತೂರೆಯದ್ದರಿಂದ ಅವರಿಗೆ ಬಹಿಷ್ಕಾರ ಹಾಕಲಾಯಿತು. ಇಂಥ ಮಠದೊಡನೆ ದಾನಮ್ಮ ದೇವಿಗೆ ಕೃತ್ರಿಮ ಸಂಬಂಧ ಸ್ಥಾಪಿಸುವಂತೆ ರಂಭಾಪುರಿ ಶ್ರೀಗಳು ಪುಸ್ತಕಕ್ಕೆ ಆಶೀರ್ವಚನ ಬರೆದಿದ್ದಾರೆ, "ಬಾಳೆಹೊನ್ನೂರಿನ ಶ್ರೀ ಜಗದ್ಗುರು ರಂಭಾಪುರಿ ಪೀಠಕ್ಕೂ ಗುಡ್ಡಾಪುರ ಕ್ಷೇತ್ರಕ್ಕೂ ನಿಕಟವಾದ ಸಂಬಂಧವಿದೆ. ಅಲ್ಲಿರುವ ಹಿರೇಮಠ ರಂಭಾಪುರಿ ಪೀಠದ ಶಾಖಾಮಠವಾಗಿ ಕಾರ್ಯಮಾಡುತ್ತಿದೆ. ದಾನಮ್ಮದೇವಿ ಶ್ರೀಮಠದ ಶಾಖಾ ಸೂತ್ರಾನು ದೇವತೆ ಶ್ರೀ ಜಗದ್ಗುರುಗಳ ಪ್ರಭಾಪುಂಜದಲ್ಲಿ ಬೆಳಗುತ್ತಿದ್ದಾಳೆ." ದಾನಮ್ಮನನ್ನು ದೇವತೆಯನ್ನಾಗಿ ಮಾಡುವ ಹುನ್ನಾರ ಒಂದು ಕಡೆ, ತಮ್ಮ ಪೀಠದ ಆಶ್ರಿತ ವ್ಯಕ್ತಿಯನ್ನಾಗಿ ಮಾಡುವ ಸಂಚು ಮತ್ತೊಂದು ಕಡೆ.

ಗುಡ್ಡಾಪುರದಲ್ಲಿ 800 ವರ್ಷಗಳಿಂದಲೂ "ಗಣಮಠ" ಎಂಬುದು ಸಾಗಿ ಬಂದಿದ್ದು ಗಣ ಎಂಬುದು ಶರಣ ಸಂಸ್ಕೃತಿಯ ಪದ. ಗಣಂಗಳು ಎಂದರೆ ಶರಣರ ಸಮೂಹ. ಸಮಾಜ ಬಾಂಧವರಿಂದ ನಿಯಂತ್ರಿಸಲ್ಪಡುತ್ತಿದ್ದ ಮಠ ಗಣಮಠ. ಬಾಳೇ ಹೊನ್ನೂರು ಶ್ರೀಗಳ ಆಶೀರ್ವಚನದಲ್ಲಿ ದಾನಮ್ಮ ಅವರ ಶಾಖಾ ಸೂತ್ರಾನುದೇವತೆಯಾದರೆ ಅದೇ ಪುಸ್ತಕದಲ್ಲಿ ಇರುವ ಉಜ್ಜಯನಿ ಪೀಠದ ಶ್ರೀಗಳ ಪ್ರಕಾರ ದಾನಮ್ಮ ಶ್ರೀಮದ್ ಉಜ್ಜಯನಿ ಶಾಖಾ ಮಠದ ಶ್ರೀ ಬೊಮ್ಮಲಿಂಗೇಶ್ವರರಿಂದ ಶಿವದೀಕ್ಷೆ ಪಡೆದವಳಾಗಿದ್ದಾಳೆ. ಸಮಿಶ್ರ ಸರ್ಕಾರದ ಹೊಂದಾಣಿಕೆಯಂತೆ ಈ ಪಂಚ ಪೀಠಾಧೀಶರ ಸಹಕಾರ ಸಹ. ಆದರೆ ಎಲ್ಲ ಪೀಠಗಳವರು ಎಲ್ಲಾ ಮಹಾತ್ಮರ ತಲೆ ಮೇಲೂ ಕೈ ಇಡಲು ಹೋಗುತ್ತಾರೆ. ಒಬ್ಬರು ರುದ್ರಯ್ಯ ಸಿದ್ಧಯ್ಯ ಬುಕಸಾಗರಮಠ ಎಂಬುವವರ ತಾಡ ಓಲೆ ಗ್ರಂಥವನ್ನು ಆಧಾರವಾಗಿ ಇಟ್ಟುಕೊಂಡು ಪಂಡಿತ ನಾಗನಾಥ ಶಾಸ್ತ್ರಿಗಳು "ಶ್ರೀ ಸುಕ್ಷೇತ್ರ ಗುಡ್ಡಾಪುರ ದಾನಮ್ಮದೇವಿ ಚರಿತಾಮೃತ" ಎಂಬ ಕೃತಿಯನ್ನು ರಚಿಸಿರುವುದಾಗಿ ಈ ಪಂಚಪೀಠಾಧೀಶರು ಕೃತಿಕಾರರನ್ನು ಅಭಿನಂದಿಸಿದ್ದಾರೆ. ಇದ್ದಕ್ಕಿದ್ದಂತೆಯೇ ಆಧಾರ ಗ್ರಂಥವಾದ ತಾಡ ಓಲೆಯ ಕೃತಿ ಏಕೆ ಎಲ್ಲೂ ಕನ್ನಡದ ಅಪ್ರಕಟಿತ ತಾಡ ಓಲೆಗಳ ಪಟ್ಟಿಯಲ್ಲಿ ಮುದ್ರಣಗೊಂಡಿಲ್ಲ. ಒಮ್ಮೆಲೇ ಯಾವ ತಿಪ್ಪೆಯಲ್ಲಿ ಶಾಸ್ತ್ರಿಗಳಿಗೆ ಸಿಕ್ಕಿತು ?

ಕಾಶಿ ಜಂಗಮವಾಡಿ ಮಠದ ಜಗದ್ಗುರುಗಳು ದಾನಮ್ಮನನ್ನು ಬಸವಣ್ಣನವರಿಗಿಂತಲೂ 341 ವರ್ಷ ಹಿಂದಿನವಳನ್ನಾಗಿ ಮಾಡಿದ್ದಾರೆ. ದಾನಮ್ಮ-ಸೋಮನಾಥರು ಧರ್ಮ ಪ್ರಚಾರಕ್ಕಾಗಿ ಸಂಪೂರ್ಣ ಭಾರತವನ್ನು ಮಾತ್ರವಲ್ಲದೆ ನೇಪಾಳಕ್ಕೂ ಇವರ ಲೇಖನಿಯ ಮೂಲಕ ಹೋಗಿ ಬಂದಿದ್ದಾರೆ. ಆ ತಾಡ ಓಲೆ ಗ್ರಂಥದಲ್ಲಿ, ದಾನಮ್ಮನ ಪತಿ ಸೋಮನಾಥನು ಕೈಲಾಸದಿಂದ ಬರುವ ಮುನ್ನ "ಕರ್ನಾಟಕ ರಾಜ್ಯದಿ ಶೋಭಿಸುವ ಜತ್ತ ಸಮೀಪದಲ್ಲಿರುವ ಗುಡ್ಡಾಪುರದ ಬೃಹನ್ ಮಠದಲ್ಲಿನ ಸತ್‌ಕುಲ ಸಂಪನ್ನ ಜಂಗಮ ವಂಶದಲ್ಲಿ ನಾನು ಬರುತ್ತೇನೆ." ಎಂದು ಹೇಳುತ್ತಾನೆ. ಶಾಸ್ತ್ರಿಗಳು ಹೇಳುವಂತೆ 9ನೆಯ ಶತಮಾನದಲ್ಲಿ ಕರ್ನಾಟಕ, ಜತ್ತ ಮುಂತಾದ ಪ್ರಾಂತ್ಯಗಳ ಹೆಸರುಗಳಿದ್ದವೆ?

★ ಆ ಕೃತಿಯ 2ನೆಯ ಸಂಧಿಯಲ್ಲಿ ಪರಶಿವನು ಗುಡ್ಡಾಪುರ ವೀರಗೋತ್ರಿಯ ಹಿರೇಮಠದ ಗಂಗಮ್ಮ ಚಂದ್ರಶೇಖರ ದಂಪತಿಗಳ ಗರ್ಭದಲ್ಲಿ ಸೋಮನಾಥ ಎಂಬ ಹೆಸರಿನಿಂದ ಜನಿಸಿ 8ನೆಯ ವರ್ಷಕ್ಕೆ ಮಠದ ಶಾಂತವೀರ ಶಿವಾಚಾರ್ಯರಿಂದ ಮಹೇಶ್ವರ ದೀಕ್ಷೆ ಪಡೆದನಂತೆ. ಗುಡ್ಡಾಪುರದಲ್ಲಿರುವ ಕೆಲವರು ಮೊದಲು ಮಠಪತಿ ಎಂಬ ಅಡ್ಡಹೆಸರು ಹೊಂದಿದ್ದು ಇತ್ತೀಚೆಗೆ ಅದನ್ನು ಹಿರೇಮಠ ಎಂದು ಬದಲಿಸಿ ಕೊಂಡಿದ್ದಾರಂತೆ.

ದಾನಮ್ಮ ಅಕ್ಕಸಾಲಿ ಜನಾಂಗದ ಅನಂತರಾಯ-ಸಿರಿಸಮ್ಮನ ಮಗಳು ಎಂಬುದು ಖಚಿತವಾಗಿ ಪ್ರಚಾರದಲ್ಲಿದೆ. ಆದರೆ ಈ ಶಾಸ್ತ್ರಿಗಳು ಕಲ್ಪನಾ ವಿಲಾಸದಲ್ಲಿ ದಾನಮ್ಮ ಉಮರಾಣಿ ಗ್ರಾಮದ ನಂದಿಗೋತ್ರ ನಂದಿಕೋಲ ಮಠದ ಶಿವಮ್ಮ-ಶಂಕರಯ್ಯ ಎಂಬ ಅಯ್ಯನವರ ಮಗಳು ಆಕೆ ಹುಟ್ಟಿದ 13ನೆಯ ದಿವಸಕ್ಕೆ ಲಿಂಗಮ್ಮ ಎಂದು ನಾಮಕರಣವಾಯಿತು. ತಕ್ಷಣವೇ ತಾಯಿ ತಂದೆ ಸತ್ತು ಹೋಗುತ್ತಾರೆ. ಶಿವಮ್ಮನ ಆಪ್ತ ಗೆಳತಿ ಸಿರಸಮ್ಮನಿಗೆ ಆಗಿದ್ದ ಗಂಡು ಮಗು ಸತ್ತು ಹೋಗಿರುತ್ತದೆ. ಹೀಗಾಗಿ ಆಕೆ ಲಿಂಗಮ್ಮನನ್ನು ದತ್ತು

ಪಡೆಯುತ್ತಾಳೆ, ಬೆಳೆಸುತ್ತಾರೆ. ಸುಳ್ಳು ಹೇಳಿದರೂ ನಂಬುವಂಥ ಸುಳ್ಳು ಹೇಳುವ ಜಾಣತನ ಇರಬೇಕಲ್ಲವೇ? ದಾನಮ್ಮ ಅಕ್ಕಸಾಲಿಗ ಕುಲದಲ್ಲಿ ಹುಟ್ಟಿದವಳೆಂಬುದನ್ನು ಮುಚ್ಚಿ ಹಾಕಲು ಈ ಕಥೆಯನ್ನು ಹೆಣೆಯಲಾಗಿದೆ. ಸಾಮಾನ್ಯವಾಗಿ ಅಯ್ಯನವರು ಮಗುವನ್ನು ಸಾಕಲು ಕೊಡುವುದಾದರೆ ಇನ್ನಿತರರಿಗೆ ಜಾತಿ ಬಿಟ್ಟು ಏಕೆ ಕೊಟ್ಟರು ?

★ ಜತ್ತ ಸಂಸ್ಥಾನ ನಿರ್ಮಾಣವಾಗಿದ್ದು ಕೇವಲ 200 ವರ್ಷಗಳ ಹಿಂದೆ; ಅದಕ್ಕೂ ಮೊದಲಿಗೆ ಜತ್ತ ಸ್ವತಂತ್ರ ಸಂಸ್ಥಾನವಾಗಿರದೆ ಕಲ್ಯಾಣ ಚಾಳುಕ್ಯರ ಅಧೀನದಲ್ಲಿದ್ದ ಮಂಗಳವೇಢೆಯ ಮಾಂಡಲಿಕರ ಅಧೀನದಲ್ಲಿತ್ತು.

ಈ ಕಾಲ್ಪನಿಕ ಕಾವ್ಯದ 7ನೆಯ ಸಂಧಿಯಲ್ಲಿ ಲಿಂಗಮ್ಮ ಮತ್ತು ಸೋಮನಾಥರು ಬನಶಂಕರಿಯಲ್ಲಿ 41 ದಿವಸ ಅನುಸ್ಥಾನ ಮಾಡಿದ್ದಾಗಿಯೂ ಅನುಷ್ಠಾನ ಮುಕ್ತಾಯ ಸಮಯದಲ್ಲಿ 1001 ಜಂಗಮ ದಂಪತಿಗಳಿಗೆ ಊಟ ಮಾಡಿಸಿ ಕಾಣಿಕೆ ನೀಡಿ ಸಂತೃಪ್ತಿ ಪಡಿಸಿದಾಗ ಆ ಜಂಗಮರು ದಾನಮ್ಮ ಎಂಬ ಬಿರುದನ್ನು ಲಿಂಗಮ್ಮನಿಗೆ ಕರುಣಿಸಿದರೆಂದು ಬರೆಯಲಾಗಿದೆ. ಆ ಸಮಾರಂಭಕ್ಕೆ ಜತ್ತ ಸಂಸ್ಥಾನದ ರಾಜರು ಮಾತ್ರವಲ್ಲದೆ ವಿಜಯನಗರದ ರಾಜರು ಸಹ ಬಂದಿದ್ದರಂತೆ. ಬಸವಣ್ಣನವರಿಗೆ 341 ವರ್ಷ ಮೊದಲು ದಾನಮ್ಮ ಇದ್ದಳು ಎಂದು ಬರೆದ ಕವಿಗಳು ಮರೆತು ಬಿಟ್ಟು ವಿಜಯನಗರದ ರಾಜರನ್ನು ಆಹ್ವಾನಿಸಿದ್ದಾರೆ. ವಿಜಯ ನಗರ ಸಾಮ್ರಾಜ್ಯ, ನಂತರ ಜತ್ತ ಸಂಸ್ಥಾನ ಹುಟ್ಟಿದ್ದು ಯಾವಾಗ ಅನ್ನುವುದು ಅವರ ನೆನಪಿಗೆ ಬಂದಂತೆ ಕಾಣದು.

10ನೆಯ ಸಂಧಿಯಲ್ಲಿ ದಾನಮ್ಮ ಸೋಮನಾಥರು ರಾಮೇಶ್ವರಕ್ಕೆ ಬರುತ್ತಾರೆ. ರಾಮೇಶ್ವರ ಮಂದಿರದ ಪೂಜೆ ಬ್ರಾಹ್ಮಣರಿಗೆ ಸಿಗದಿರಲಿ ಎಂದು ಶಪಿಸುತ್ತಾರೆ. ನಂದಿಕೇಶ್ವರ ಮಠದವರಿಗೇ ರಾಮೇಶ್ವರ ಲಿಂಗದ ಪೂಜೆಯ ಹಕ್ಕು ಇರುವುದು ಎಂದು ಆದೇಶಿಸುತ್ತಾರೆ. ಇದು ಎಷ್ಟು ಮೂರ್ಖ ವಿಚಾರ! ದಾನಮ್ಮನು ಶಾಪಕೊಟ್ಟರೂ ಅದು ನಡೆಯಲಿಲ್ಲವಲ್ಲವೆ ? ಹಾಗಾಗಿಯೇ ಬ್ರಾಹ್ಮಣರಿಂದಲೇ ಪೂಜೆ ಇಂದಿಗೂ ನಡೆಯುತ್ತಿದೆ. ಇಂತಹ ಕಲ್ಪನೆಗಳಿಂದ ಮಹಾತ್ಮರ ವ್ಯಕ್ತಿತ್ವಕ್ಕೆ ಕುಂದುಂಟಾಗುತ್ತದೆ ಎಂಬ ಪರಿವೆ ಸಹ ಪಂ.ನಾಗನಾಥ ಶಾಸ್ತ್ರಿಗಳಿಗೆ ಇದ್ದಂತಿಲ್ಲ. ಹೀಗೆ ಪಂಚಪೀಠದವರು ಬರೀ ಕೃತ್ರಿಮ ವ್ಯಕ್ತಿಗಳನ್ನು ಸೃಷ್ಟಿಸುವುದರಲ್ಲಿ ಬಲ್ಲಿದರು. ಗುಡ್ಡಾಪುರ ದಾನಮ್ಮನ ಪೂಜಾ ಹಕ್ಕು ಅಯ್ಯನವರ ಕೈಲಿಲ್ಲ. ಬಹುಶಃ ಅದನ್ನು ಲಪಟಾಯಿಸಲು ಈ ಕೃತ್ರಿಮ ಗ್ರಂಥ ಬರೆದಿರಬಹುದು.

ಧರ್ಮಪಿತ ಬಸವಣ್ಣನವರು ಸದ್ಭಾವಿಗಳು, ಸಮತಾವಾದಿಗಳು, ಹೃದಯ ವೈಶಾಲ್ಯ ಉಳ್ಳವರು. ಅದೇಕೆ ಶರಣರ ಹೆಸರುಗಳ ಹಿಂದೆ ಸಮಗಾರ ಹರಳಯ್ಯ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ, ಮೇದಾರ ಕೇತಯ್ಯ ಎಂದು ಜಾತಿ ಮತ್ತು ವೃತ್ತಿ ಸೂಚಕವಾದ ವಿಶೇಷಣಗಳನ್ನು ಉಳಿಸಿದರು. ಎಂದು ನಮಗೆ ಕೆಲವು ಕಾಲ ಅಸಮಾಧಾನವಾಗುತ್ತಿತ್ತು. ಆದರೆ ನಂತರ ಅರ್ಥವಾಯಿತು. ಒಂದು ವೇಳೆ ಈ ಜಾತಿ ಮತ್ತು ವೃತ್ತಿ ಸೂಚಕ ಪದಗಳು ವಿಶೇಷಣಗಳಾಗಿ ಇರದಿದ್ದರೆ ಇವರೆಲ್ಲರನ್ನೂ ಅಯ್ಯನವರ ಮನೆತನದಲ್ಲಿ ಪುರಾಣಕಾರರು ಹುಟ್ಟಿಸಿ ಬಿಡುತ್ತಿದ್ದರು; ಯಾರು ಬೇಕಾದರೂ ಗುರು-ಜಂಗಮರಾಗಬಹುದು ಎಂಬ ಬಸವ ತತ್ತ್ವದ ಮಹತ್ವವನ್ನೇ ನಿಸ್ಸಾರಗೊಳಿಸುತ್ತಿದ್ದರು ವ್ಯಕ್ತಿಯ ಜಾತಿ ಮತ್ತು ಕಸುಬು ಯಾವುದಾದರೇನು ಅವನ ಗುಣ, ಶೀಲ, ನಡತೆ, ಆಚಾರ, ಜ್ಞಾನವನ್ನು ನೋಡಿ ಗೌರವಿಸಬೇಕು ಎಂಬ ತತ್ತ್ವವನ್ನು ಸಾರಲೋಸುಗವೇ ಈ ಪದಗಳನ್ನು ಹೆಸರಿನ ಜೊತೆಗೆ ಬಸವಣ್ಣನವರು ಇಟ್ಟಂತೆ ಭಾಸವಾಗುತ್ತಿದೆ.

ಐತಿಹಾಸಿಕ ವ್ಯಕ್ತಿಯಾಗಿ ಗುರು ಬಸವಣ್ಣನವರಿಂದ ಅನುಗ್ರಹಿತಳಾಗಿ ಅನುಭವ ಮಂಟಪದಲ್ಲಿದ್ದು, ನಂತರವೆ ವೈವಾಹಿಕ ಜೀವನ ಸ್ವೀಕರಿಸಿ ಪತಿಯೊಡನೆ ಗುಡ್ಡಾಪುರದಲ್ಲಿ ನಿಂತು ದಾಸೋಹ ಮೂರ್ತಿಯಾಗಿ ಬಾಳಿದುದಲ್ಲದೆ ಧರ್ಮ ಪ್ರಚಾರ, ಧರ್ಮ ವಿಸ್ತರಣೆಯ ಕಾರ್ಯ ಮಾಡಿದ ದಾನಮ್ಮ ಆದರ್ಶ ಶರಣೆಯೂ ಆದರ್ಶ ಗೃಹಿಣಿಯೂ ಆಗಿದ್ದಾಳೆ. ಇಂಥ ಮಹಿಮಾನ್ವಿತೆಯ ಬಗ್ಗೆ ಕಾಲ್ಪನಿಕ ಕೃತಿ ರಚಿಸಿ ಪುಸಕ ಬರೆದುದು ಖಂಡನಾರ್ಹವಾದರೆ; ಇಂಥ ಖೋಟಾ ಪುಸ್ತಕಕ್ಕೆ ಆಶೀರ್ವಚನ ಬರೆದು ಅಭಿನಂದನೆ ಸಲ್ಲಿಸಿದ ಪಂಚ ಪೀಠಾಧೀಶರ ಕಾರ್ಯವು ಅಷ್ಟೇ ಖಂಡನಾರ್ಹ. ಈ ಉಭಯತರ ಕುತಂತ್ರ-ಕುಚೋದ್ಯಗಳನ್ನು ಬಯಲಿಗೆಳೆದು ವಿಮರ್ಶಾ ಗ್ರಂಥವನ್ನು ಬರೆ ಸ್ವತಃ ಪ್ರಕಾಶಿಸಿದ ಶರಣ. ಸಿದ್ಧರಾಮ ಪೂಜಾರಿಯವರ ಪ್ರಯತ್ನ ಅಭಿನಂದನಾರ್ಹ. ★

ಬಸವ ಧರ್ಮಪೀಠದ ವಿವಿಧೋದ್ದೇಶಗಳಿಗೆ ಮೇ-ಜೂನ್ ತಿಂಗಳಲ್ಲಿ ಧನ ಸಹಾಯ ಸಲ್ಲಿಸಿದವರು

ಕಟ್ಟಡ ನಿಧಿಗೆ ಶರಣರುಗಳಾದ :

ವನಜಾಕ್ಷಮ್ಮ ಭೋಗ ನಂಜುಂಡಯ್ಯ, ಬೆಂಗಳೂರು	2,00,000
ಪ್ರಕಾಶ್ ನಾಗಪ್ಪ ಗರಗದ, ಧಾರವಾಡ(ಸಿಂಗಲ್ ರೂಂ)	61,000
ಕಲ್ಲಮ್ಮ ವಿರುಪಾಕ್ಷಗೌಡ ಪಾಟೀಲ್, ಧಾರವಾಡ	50,000
ಆರ್.ಬಿ.ಹೆಬ್ಬಳ್ಳಿ, ಅಂಬರನಾಥ, ಮುಂಬಯಿ	25,000
ಪಿ.ರಾಮರೆಡ್ಡಿ, ಶಿರಗುಪ್ಪ	25,000

ಬಸವಣ್ಣನವರ 108 ಅಡಿಯ ಬೃಹತ್ ಪುತ್ಥಳಿಗಾಗಿ ಶರಣರುಗಳಾದ :

ಪ್ರೇಮಾ ಮತ್ತು ಬಿ.ಚಂದ್ರಯ್ಯ, ದಾವಣಗೆರೆ	1,00,000
ವನಜಾಕ್ಷಮ್ಮ ಬಿ.ಎಸ್.ಓಂಕಾರಸ್ವಾಮಿ, ಬೆಂಗಳೂರು	50,000
ಸಣ್ಣಯಲ್ಲಮ್ಮ ಡ್ರೈವರ್ ಪಂಪನಗೌಡ, ಶಿರಗುಪ್ಪ	11,001
ಶರಣಮ್ಮ ಮತ್ತು ಬಸವರಾಜಪ್ಪ ಶಿರಗುಪ್ಪ	11,001
ಶೋಭಾ ಮತ್ತು ಜಿ.ಮರಿ ಬಸವನಗೌಡ "	11,001
ಪದ್ಮಾವತಿ ಮತ್ತು ಎಸ್.ಶ್ರೀನಿವಾಸ(ಬುಜ್ಜಿ) "	11,001
ಛಾಯಾ ಮತ್ತು ಜಯರಾಜ್ ವಕೀಲರು, ಬೆಂಗಳೂರು	11,001
ಭಾರತಿ ಮತ್ತು ಶಿವಶರಣಪ್ಪ ಮದ್ದೂರು, ಸೇಡಂ(ಬೆಂ)	11,001
ಬಿ.ಬಸಂತ ಕುಮಾರ್, ಸಾಸ್ಕೆನ್ ಕಮ್ಯುನಿಕೇಷನ್,ಬೆಂ	11,001
ಸುಮಂಗಲಾ ಮತ್ತು ಬಸವರಾಜ ದವಾಖಾನೆ, ಹುಬ್ಬಳ್ಳಿ	11,111
ಆನಂದ ಸಿ.ಬಿ. ಬೇವನೂರು, ಪೂನಾ	11,001
ಬಾಣೂರು ಚನ್ನಪ್ಪ, ಚಿಕ್ಕಮಗಳೂರು	11,001
ಮೂರುಸಾವಿರಪ್ಪ ಅಂಬಲಿ, ಹುಬ್ಬಳ್ಳಿ	11,001
ಹುಚ್ಚಮ್ಮ ಎ.ನಾಗಪ್ಪ, ಶಿರಗುಪ್ಪ	11,001
ಜಿ.ಡಿ.ಗುಂಡಳ್ಳಿ,ವಕೀಲರು, ಶಿರಗುಪ್ಪ	11,001
ಶಾರದಮ್ಮ ಹನುಮಂತರೆಡ್ಡಿ	1,100
ಲಕ್ಷ್ಮೀದೇವಮ್ಮ ಲಿಂ॥ಮಾಣಿಕಯ್ಯ	1,100
ದಾಕ್ಷಾಯಣಮ್ಮ ದೊಡ್ಡಪೇಟೆ, ಚಿತ್ರದುರ್ಗ	1,001

ಬಸವ ಕಲ್ಯಾಣದ ದಾಸೋಹ ನಿಧಿಗೆ 1200ರೂ ಕೊಟ್ಟವರು ಶರಣರುಗಳಾದ :

ಹೆಚ್.ಎಸ್.ರತ್ನಮ್ಮ ಕೊಂ.ಸಂಗಪ್ಪ, ಕೊಲ್ಲಳ್ಳಿಗ್ರಾಮ
ಹೆಚ್.ಎಸ್.ಗಾಯಿತ್ರಿ ಪತಿ ಜಿ.ಸಿ.ಮುರುಗೇಶ್,ತುಮಕೂರು
ಹೆಚ್.ಎಸ್.ಸಾವಿತ್ರಿ ಪತಿ ಡಾ॥ ದೇವರಾಜು, ಬೆಂಗಳೂರು
ಬಿ.ಬಿ.ಲಕ್ಷ್ಮೀಶ್ವರ, ಹುಬ್ಬಳ್ಳಿ
ಸುಮಂಗಲಾ ಮತ್ತು ಶಿವಕುಮಾರ್, ಬೆಳಗಾಂವ
ಎಂ.ಎಂ.ನಾಗವೇಣಿ ಎಸ್.ಹೆಚ್.ಸಿದ್ದಲಿಂಗಯ್ಯ, ಅಗಸನೂರು
ಪ್ರೇಮಲತಾ ಚಂದ್ರಶೇಖರ ಹತ್ತಾಳ, ಶಿರಗುಪ್ಪ
ಪಾರ್ವತಿ ಜಿ.ಡಿ ವಿಜಯಕುಮಾರ್, ಬಳ್ಳಾರಿ
ಎಂ. ಸುಜಾತಾ ಎಂ.ಶಿವಕುಮಾರ್,ಶಿರಗುಪ್ಪ
ಸುಲೋಚನಾ ಆರ್.ಮಾರುತಿಶೆಟ್ಟಿ,ಶಿರಗುಪ್ಪ
ಎಂ.ಪಂಪಾಪತಿ ಶೆಟ್ಟರು,ಶಿರಗುಪ್ಪ
ಚಾಸಿ ಸೀತಾರಾಮ ಶೆಟ್ಟಿ, ಶಿರಗುಪ್ಪ
ಪಾರ್ವತಿ.ಡಿ.ಭೀಮರೆಡ್ಡಿ, ಶಿರಗುಪ್ಪ
ಕೆ.ಬಿ.ಎರೇಗೌಡ ಅಂಜನಗೌಡ, ಶಿರಗುಪ್ಪ
ಲಕ್ಷ್ಮೀದೇವಮ್ಮ ಲಿಂ॥ ತಿಮ್ಮಯ್ಯ ಶೆಟ್ಟಿ, ಪಂಪವಾಲ್, ಶಿರಗುಪ್ಪ

ಕೂಡಲ ಸಂಗಮದ ದಾಸೋಹ ನಿಧಿಗೆ 1111 ರೂ ಕೊಟ್ಟವರು ಶರಣರುಗಳಾದ :

ಮಮತಾ ಕೆ.ಎಸ್ ಮತ್ತು ದಿನೇಶ್, ಬೆಂಗಳೂರು
ಹೆಚ್.ಪಿ.ಸಂಗಪ್ಪ ಕೊಲ್ಲಳ್ಳಿ
ಲಾಯಿರಿ ಬಸವರಾಜು, ಎಳನಡು ಗ್ರಾಮ
ಸುಜಾತಾ, ಬೆಂಗಳೂರು
ಕಲ್ಲನಗೌಡ.ಶಿ.ಕೌಜಗೇರಿ

ಗ್ರಂಥ ಪ್ರಕಟಣೆಗಾಗಿ

ಶರಣ.ಸೋಮಶೇಖರಪ್ಪ ತೋಟದ ಮನೆ,
ಎಳನಡು, ತಾ-ಚಿಕ್ಕನಾಯಕನ ಹಳ್ಳಿ
(ಶ್ರೀ ಸಿದ್ಧರಾಮೇಶ್ವರ ಕುರಿತು ಗ್ರಂಥ ಪ್ರಕಟಣೆಗೆ) 10,001-00

ಗುರು ಕಾಣಿಕೆ ಶರಣರುಗಳಾದ :

ವಿಲಾಸ ಶಿವಣ್ಣನವರು, ಬೆಂಗಳೂರು	1001
ಬಸವ ಪ್ರಶಾಂತ, ಮುಂಬಯಿ	1001
ಪಿ.ಕುಸುಮ ಮಾಲಿನಿ, ಬೆಂಗಳೂರು	1001

ಈ ಎಲ್ಲ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಗುರು ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಕರುಣಿಸಲೆಂದು ಹಾರೈಸುತ್ತೇವೆ.

(ವಿಶೇಷ ಸೂಚನೆ : ದಾಸೋಹಿಗಳು ಕೆಲವೊಮ್ಮೆ ನಮ್ಮ ಕೈಗೆ ಕಾಣಿಕೆಯನ್ನು ಕೊಟ್ಟಿರುತ್ತಾರೆ. ರಸೀತಿ ಹಾಕಿಸಲು ಮರೆಯುತ್ತಾರೆ ನಂತರ ಅತ್ಯಂತ ಅವಸರದಲ್ಲಿ ನಾವು ಯಾರು ಕೊಟ್ಟರೆಂಬುದನ್ನು ನೆನಪಿಸಿಕೊಳ್ಳಲು ಆಗುವುದಿಲ್ಲ. ಆದ್ದರಿಂದ ಕಾಣಿಕೆ ಜೊತೆಗೆ ಒಂದು ವಿವರದ ಚೀಟಿ ಇಡಿರಿ. ಮರೆಯದೆ ರಸೀತಿ ಹಾಕಿಸಿಕೊಳ್ಳಿರಿ. ಕಲ್ಯಾಣ ಕಿರಣದಲ್ಲಿ ಹೆಸರು ಪ್ರಕಟವಾಗದಿದ್ದರೆ ದಯವಿಟ್ಟು ನೆನಪಿಸಿ, ಸಂಕೋಚಪಡಬೇಡಿರಿ)

ಅನಾಥಾಲಯಗಳಿಗೆ ದೇಣಿಗೆ

1. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ನಡೆಯುವ ಅನಾಥಾಲಯಕ್ಕೆ ಶರಣೆ ಸರೋಜಮ್ಮ ನಾಗರಾಜ್, ಮೈಸೂರು 1000(ಒಂದು ಸಾವಿರ)ರೂ ದೇಣಿಗೆ ಕೊಟ್ಟಿದ್ದಾರೆ.
2. ವಿ.ಸಂತೋಷ್ ಕುಮಾರ್, ಬೆಂಗಳೂರು ಪ್ರತಿ ತಿಂಗಳು 600ರೂ ಕೊಡುತಿದ್ದಾರೆ
3. ಶ್ರೀ ಸುರೇಶ ಕುಮಾರ್ ಕೇವಲ ಚಂದ್, ಧಾರವಾಡ ಅವರು 30 ಮಕ್ಕಳಿಗೆ ಆಶ್ರಮದಲ್ಲಿದ್ದಾಗ ತೊಡುವ ಸಮವಸ್ತ್ರಕ್ಕೆ ಬೇಕಾಗುವ ಬಟ್ಟೆಯನ್ನು ದಾನ ಮಾಡಿದ್ದಾರೆ.

ಬಸವ ಧರ್ಮಪೀಠದ ಅಂಗ ಸಂಸ್ಥೆಗಳಿಂದ ಅನಾಥಾಲಯಗಳ ಪ್ರಾರಂಭ

ಹೆಚ್ಚುತ್ತಿರುವ ಸಾಮಾಜಿಕ ಅಶಾಂತಿ, ಆರ್ಥಿಕ ಸಂಕಷ್ಟ ಮುಂತಾದವುಗಳನ್ನು ಗಮನದಲ್ಲಿ ಇರಿಸಿಕೊಂಡು ಅನಾಥ ಮತ್ತು ನಿರ್ಗತಿಕ ಮಕ್ಕಳಿಗೆ ಆಸರೆ-ವಿದ್ಯಾಭ್ಯಾಸ ಒದಗಿಸುವ ಉದಾತ್ತ ಉದ್ದೇಶದಿಂದ ಅನಾಥಾಲಯಗಳನ್ನು ನಡೆಸಲಾಗುತ್ತಿದೆ.

1. ಬಸವ ಗಂಗೋತ್ರಿ ಅನಾಥಾಲಯ, ಕುಂಬಳಗೋಡು ಗ್ರಾಮ, ಬೆಂಗಳೂರು-ಮೈಸೂರು ಹೆದ್ದಾರಿ 20ನೇ ಕಿಲೋಮೀಟರ್, ಬೆಂಗಳೂರು ದಕ್ಷಿಣ-ತಾ, ದೂರವಾಣಿ : 28481804/ 9845399698, ವ್ಯವಸ್ಥಾಪಕರು : ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ.
2. ಅಕ್ಕನಾಗಲಾಂಬಿಕಾ ಅನಾಥಾಲಯ, ಬಸವ ಮಹಾಮನೆ, ಮುಖ್ಯ ರಸ್ತೆ ಬಸವ ಕಲ್ಯಾಣ-585327, ದೂರವಾಣಿ : 08481-251921/252856, ವ್ಯವಸ್ಥಾಪಕರು : ಪೂಜ್ಯ ಶ್ರೀ ಮಾತೆ ನೀಲಗಂಗಾದೇವಿ.
3. ಅಕ್ಕಮಹಾದೇವಿ ಆಶ್ರಮದ ಅನಾಥಾಲಯ, ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ, ಧಾರವಾಡ-580003, ದೂರವಾಣಿ :0836-2773005/5577965, ವ್ಯವಸ್ಥಾಪಕರು : ಪೂಜ್ಯ ಶ್ರೀ ಮಾತೆ ಸತ್ಯಾದೇವಿ.
4. ಬಸವ ಕೃಪಾ ಅನಾಥಾಲಯ, ಮಹಾಮನೆ ಮಹಾಮಠ, ಕೂಡಲ ಸಂಗಮ-587115, ತಾ-ಹುನಗುಂದ, ಜಿಲ್ಲೆ-ಬಾಗಲಕೋಟೆ, ದೂರವಾಣಿ : 08351-268038/268338 ವ್ಯವಸ್ಥಾಪಕರು : ಸೋದರಿ ರಾಜೇಶ್ವರಿ, ಬಸವ ಧರ್ಮಪೀಠ.

2005-2006ನೆಯ ಸಾಲಿನ ಅನಾಥಾಲಯಗಳನ್ನು ಜೂನ್ 1 ರಿಂದ ಪ್ರಾರಂಭಿಸಲಾಗಿದೆ. ಕೆಳಗಿನಂತೆ ಪ್ರವೇಶ ನೀಡಲಾಗಿದ್ದು.

1. ಧಾರವಾಡದಲ್ಲಿ 30 ಜನರಿಗೆ ಪ್ರವೇಶ ನೀಡಲಾಗಿದೆ. ಸ್ಥಾನಗಳು ಭರ್ತಿಯಾಗಿ, 5 ಹೆಚ್ಚುವರಿ ಆಗಿವೆ.
2. ಬೆಂಗಳೂರಿನಲ್ಲಿ 26, 1. ಹೆಚ್ಚುವರಿ.
3. ಕೂಡಲ ಸಂಗಮದಲ್ಲಿ 22 ಮಕ್ಕಳು (3 ಜನರಿಗೆ ಪ್ರವೇಶಾವಕಾಶವಿದೆ)
4. ಬಸವ ಕಲ್ಯಾಣದಲ್ಲಿ 25 ಮಕ್ಕಳು (ಭರ್ತಿಯಾಗಿದೆ)

ಸರ್ಕಾರದಿಂದ ಧನ ಸಹಾಯವು ಸಿಗುವ ಬಗ್ಗೆಯೂ ಭರವಸೆ ಇಲ್ಲ ಇದರಿಂದಾಗಿ ಸಂಸ್ಥೆಯೇ ಖರ್ಚು-ವೆಚ್ಚಗಳನ್ನು ನಿಭಾಯಿಸಬೇಕಾಗುತ್ತದೆ. ಆದ್ದರಿಂದ ಸಹೃದಯರು ಉದಾರವಾಗಿ ಈ ನಾಲ್ಕು ಅನಾಥಾಶ್ರಮಗಳಿಗೆ ತಮಗೆ ಸರಿ ಕಂಡಲ್ಲಿ ಧನ ಸಹಾಯ ಮಾಡಬಹುದು. ಇಲ್ಲವೇ ಕೇಂದ್ರ ಸಂಸ್ಥೆಗೇ ದೇಣಿಗೆ ಕಳಿಸಿ ಕೊಡಬಹುದು. ಹಾಸ್ಟೆಲ್‌ದಲ್ಲಿ ಇದ್ದಾಗ ತೊಡಲು ಸಮವಸ್ತ್ರವನ್ನು ರೂಪಿಸಲಾಗಿದ್ದು ಸ್ವಯಂ ಪ್ರೇರಣೆಯಿಂದ ಸಮವಸ್ತ್ರವನ್ನು ಕೊಡಿಸಬಹುದು.

-ವ್ಯವಸ್ಥಾಪಕರು

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80 ಜಿ ಆದಾಯ ತೆರಿಗೆ ವಿನಾಯಿತಿ ಹೊಂದಿದೆ.


ಕೇಂದ್ರ ಕಾರ್ಯಾಲಯದ ವಿಳಾಸ : ಬಸವ ಮಂಟಪ, 2035, 20ನೆಯ ಮೇನ್, 2ನೇ ಬ್ಲಾಕು, ರಾಜಾಜಿನಗರ, ಬೆಂಗಳೂರು-560010, ದೂರವಾಣಿ : 080-23325335/23322790.

ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ ಭಕ್ತರಿಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗದ ಸೇವೆಯುಳ್ಳನ್ನಕ್ಕ -ಆಯ್ದಕ್ಕಿ ಲಕ್ಕಮ್ಮ

CPMG/KA/BGW-50/2003-2005 WPP (W) - 17 R.NO. 19980/70



ಬಳ್ಳಾರಿ ಜಿಲ್ಲೆಯ ಶಿರಗುಪ್ಪಾದಲ್ಲಿ ನಡೆದ ವಿಶ್ವಧರ್ಮ ಪ್ರವಚನ ವೇದಿಕೆಯಿಂದ ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಮಾಡಿಸುತ್ತಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು.



ಶರಣ-ಶರಣೆಯರಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಮೇಲೆ ಪುಷ್ಪವೃಷ್ಟಿಯ ಮೂಲಕ ಗೌರವಾರ್ಪಣೆ